understanding and of course the Government was anxious to have a Football stadium in a premier City like Bangalore which is of international character. With the cempletion of Stadium, my desire was to see that international teams would come here and participate, and have a sort of play. Before I specificially say anything, I will get it legally examined whether the Government could intervene, and if it to intervene, to what extent we should intervene, Whether Government itself culd take up the remaining portion of the work of the Stadium and ot it through Public Works Department. All these aspects, I shall get it examined and take a final decision in the matter.

SRI A. LAKSHMISAGAR.—I am beholden to the Chief Minister for his forth-right reply in this matter. But that apart. I would like to point out few more points. Even after the Auditor's report, Government has granted the loan.

SRI D. DEVARAJ URS.—That is why I said I will go into the whole thing.

SRI A. LAKSHMISAGAR.—Very good sir.

ಶ್ರೀ ಟಿ. ಆರ್. ಶಾಮಣ್ಣ.—ಸಿಮೆಂಟಿಗೆ ಕಷ್ಟವಾಗಿದ್ದ ಕಾಲದಲ್ಲಿ ಸುಮಾರು ೧,೨೬.೦೦೦ ಮೂಟೆ ಸಿಮೆಂಟ್ ಕೊಂಡಿದ್ದು ಇದರಲ್ಲಿ ದುರ್ವಿನಿಯೋಗವಾಗಿದೆ. ಈಗ ನಮಗೆ ಯಾರ ಮೇಲೂ ಆರೋಪ ಮಾಡಬೇಕೆಂಬ ಉದ್ದೇಶವಿಲ್ಲ. ನಾಗರೀಕರಿಗೆ ಇದರಲ್ಲಿ ಹೆಚ್ಚಿನ ಒಂದು ಆಸಕ್ತಿ ಇರುವುದರಿಂದ ನಿಷ್ಪಕ್ಷಪಾತವಾಗಿ ಇದರ ಪೂರ್ತಿ ವಿವರಗಳನ್ನು ಪರಿಶೀಲನೆ ಮಾಡಿ ಇಲ್ಲಿ ನಡೆಯುತ್ತಿರುವ ಅಕ್ರಮವನ್ನು ತಪ್ಪಿಸುತ್ತಾರೆಂದು ನಾನು ಅಂದು ಕೊಂಡಿದ್ದೇನೆ. ನಮ್ಮ ಮಾನ್ಯ ಮಂತ್ರಿಗಳಾದ ಶ್ರೀನಿವಾಸ್ ಅವರಿಗೆ ಇದರ ಬಗ್ಗೆ ಸಾಕಷ್ಟು ವಿವರಗಳು ಗೊತ್ತಿದೆ. ಇದರ ಬಗ್ಗೆ ಸೂಕ್ತ ಗಮನ ಕೊಡುತ್ತಾರೆಂದು ನಾನು ನಂಬಿದ್ದೇನೆ.

SRI K. H. SRINIVAS.—Sir, the position of the Government has been amply made clear by the Hon. Chief Minister. So, I have nothing to add. Now, the point is it is not true that loans have been advanced after the receipt of this audit report.

Budget Estimates for 1979-80 Demands for Grants.

Demand Nos. 4, 6, 23, 24, 31, 32, 35 to 41, 46, 47 and 62

(Debates Contd.)

ಅಧ್ಯಕ್ಷರು.—ಡಿಮ್ಯಾಂಡ್‌ಗಳ ಮೇಲಿನ ಚರ್ಚೆ, ಶ್ರೀ ಕಡಿದಾಳ್ ದಿವಾಕರ್‌ರವರು ಈಗ ಮಾತನಾಡಬಹುದು.

† ಶ್ರೀ ಕಡಿದಾಳ್ ದಿವಾಕರ್ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಣ್ಣ ನೀರಾವರಿ ಮಂತ್ರಿಗಳವರು ಹಾಗೂ ಮುಖ್ಯ ಮಂತ್ರಿಗಳವರು ಏನು ಬೇಡಿಕೆಗಳನ್ನು ಸಭೆಯ ಮುಂದಿಟ್ಟಿದ್ದಾರೆ ಇದನ್ನು ಹಾಗೂ ನಿನ್ನೆಯ ದಿವಸ ಮಾತನಾಡಿದಂಥ ಸನ್ಮಾನ್ಯ ಸದಸ್ಯರಾದ ಶ್ರೀ ಶಾಮಣ್ಣನವರು ಹೇಳಿದ ಹಾಗೆ ಮುಖ್ಯ ಮಂತ್ರಿಗಳವರು ಎಷ್ಟೇ ಫೋರ್ಟ್‌ಫೋಲಿಯೋ ಆದರೂ ಭಾರ ಹೊರಬಲ್ಲಂಥವರು, ಅಂಥಾ ಶಕ್ತಿ ಉಂಟು, ಹಾಗೂ ಉತ್ತಮವಾಗಿ ಕಾರ್ಯನಿರ್ವಹಿಸಬಲ್ಲರು ಅಂತ ಆ ಕಡೆಯಿಂದ ಬಹಳ ಉತ್ತಮವಾದ ಮಾತನ್ನು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳವರು ಮಂಡಿಸಿರುವ ಬೇಡಿಕೆಯನ್ನು

ನೋಡಿದಾಗ ೩೬೬ ಕೋಟಿ ರೂಪಾಯಿಗಳನ್ನು ತಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಇಟ್ಟಿದ್ದಾರೆ. ಈ ಎಲ್ಲ ಬೇಡಿಕೆಯನ್ನೂ ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಎರಡು ಸಲಹೆಗಳನ್ನು ಕೊಡಬಯಸುತ್ತೇನೆ,

ಚೇರ್ಮನ್ (ಶ್ರೀ ಎಚ್. ಟಿ. ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಶ್ರೀ ಕಡಿದಾಳ್ ದಿವಾಕರ್.—ಮುಖ್ಯವಾಗಿ ನಾನು ಮೈನರ್ ಇರಿಗೇಷನ್ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಗೆ ೨೮ ಕೋಟಿ ರೂಪಾಯಿಗಳನ್ನು ತೊಡಗಿಸಿದ್ದೀರಿ. ಇದು ನಿಜವಾಗಿಯೂ ಕಡಿಮೆಯಾಗುತ್ತದೆಂದು ಹೇಳಬೇಕಾಗಿದೆ. ಇವತ್ತಿನ ದಿವಸ ನೀವು ಮೈನರ್ ಇರಿಗೇಷನ್ ಅಂದರೆ ಸಣ್ಣ ನೀರಾವರಿ ಜಾಸ್ತಿ ಮಾಡಬೇಕಾಗಿದೆ. ಈ ದೇಶದಲ್ಲಿ ತೊಂದರೆ ತಪ್ಪಲು, ನಮ್ಮ ರಾಜ್ಯದಲ್ಲಿ ೪೨ ಪರ್ಸೆಂಟ್ ನೀರಾವರಿ ಭೂಮಿಯಲ್ಲಿ ಒಳಪಡಿಸಬೇಕು ಅಂತ ಇದ್ದರೂ ಕೂಡ ಅರ್ಧದಷ್ಟು ಸಾಧಿಸದೇ ಇರುವುದಕ್ಕೆ ಕಾರಣ ಸಣ್ಣ ನೀರಾವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡದೇ ಇರುವುದಾಗಿದೆ, ಹಾಗೂ ಈ ನಿಟ್ಟಿನಲ್ಲಿ ಹೆಚ್ಚಿನ ಕೆಲಸವಾಗಿಲ್ಲ. ೧೯೭೨ ರಿಂದ ೬೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ೧.೯೨ ಲಕ್ಷ ಹೆಕ್ಟೇರ್‌ಗೆ ಈ ಸಣ್ಣ ನೀರಾವರಿ ಮುಖಾಂತರ ಜಮೀನುಗಳಿಗೆ ನೀರು ಕೊಟ್ಟಿರುವುದು ಮಾತ್ರ. ಆದ್ದರಿಂದ ಇವತ್ತು ಸಣ್ಣ ನೀರಾವರಿಗೆ ಮಂತ್ರಿಗಳವರು ಇದಕ್ಕೆ ಒಂದು ಮಾಸ್ಟರ್ ಪ್ಲಾನ್ ಮಾಡಿ ಸಣ್ಣ ನೀರಾವರಿಯ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ, ಹೆಚ್ಚು ಹೆಚ್ಚು ಜಮೀನುಗಳನ್ನು ಸಣ್ಣ ನೀರಾವರಿಯಲ್ಲಿ ಒಳಪಡಿಸಬೇಕು ಅಂತ ಹೊರಟಿರುವುದು ನಿಜವಾಗಿಯೂ ಶ್ಲಾಘನೀಯವಾದ ವಿಚಾರ. ಇಂಥಾ ಕೆಲಸಗಳನ್ನು ಅತಿ ಶೀಘ್ರವಾಗಿ ಮಾಡಬೇಕೆಂದು ಹೇಳುತ್ತೇನೆ ಮತ್ತು ಈ ಸಣ್ಣ ನೀರಾವರಿಯ ಕೆಲಸಗಳು ಚೆನ್ನಾಗಿ ನಡೆಯುತ್ತಿವೆ, ಜೊತೆಗೆ ಅಲ್ಲಿರುವಂಥ ಚೀಫ್ ಇಂಜಿನಿಯರ್‌ರವರು ಸಹ ಬಹಳ ದಕ್ಷರು, ಉತ್ತಮ ರೀತಿಯಲ್ಲಿ ಅವರು ಕಾರ್ಯವನ್ನು ಎಸಗುತ್ತಿದ್ದಾರೆ. ಶಿವಮೊಗ್ಗದಲ್ಲಿರುವ ಚೀಫ್ ಇಂಜಿನಿಯರ್‌ರವರು ಅನೇಕ ನೀರಾವರಿ ಕೆಲಸಗಳನ್ನು ನಡೆಸಿ ಉತ್ತಮವಾದ ರೀತಿಯಲ್ಲಿ ಅಲ್ಲಿ ನೂರಾರು ಸಾವಿರಾರು ಎಕರೆಗಳನ್ನು ಕೊಡಿಸಿದ್ದಾರೆ, ಅದೆಲ್ಲದಕ್ಕಿಂತಲೂ ಅಲ್ಲಿಯ ಜನರ ಮನಸ್ಸಿನಲ್ಲಿರುವಂತೆ, ಹೀಗೆ ಹಳ್ಳಿ ಮುಂತಾದ ಕಡೆಗಳಲ್ಲಿ ಉತ್ತಮವಾದ ಜಮೀನುಗಳನ್ನು ಕೊಟ್ಟಿರುವುದರಿಂದ, ಯಾರು ವರಾಹಿ ಚಕ್ರ ಸಾವೆ ಹೊಕ್ಕಳು ಡ್ಯಾಮ್‌ನಿಂದ ಜಮೀನು ಮುಳುಗಡೆಯಾಗಿ ತೊಂದರೆ ಪಡುತ್ತಿದ್ದರೋ ಅಂಥವರಿಗೆ ಉತ್ತಮವಾದ ಭೂಮಿಯನ್ನು ಕೊಡುವುದಕ್ಕೆ ಸಾಧ್ಯವಾಗಿದೆ ಮತ್ತು ಸಣ್ಣ ನೀರಾವರಿಗೆ ಅವರ ಒಂದು ಮೇಲ್ವಿಚಾರಣೆಯಲ್ಲಿ ಅಲ್ಲಿಯ ಜನತೆ ಅನುಕೂಲವನ್ನು ಮಾಡಿ ಕೊಡುವುದಕ್ಕಾಗಿ ಸರ್ಕಾರ ಒದಗಿಸಿಕೊಡುತ್ತಿದ್ದ ಜೊತೆಗೆ ಇನ್ನು ಕೆಲವು ಒಳ್ಳೆಯ ಕೆಲಸಗಳನ್ನು ಮಾಡಬೇಕೆಂದು ಹೇಳಬೇಕಾಗಿದೆ. ಏತಕ್ಕೆಂದರೆ ನಮ್ಮ ಮಲೆನಾಡು ಪ್ರದೇಶದಲ್ಲಿ ಸಣ್ಣ ನೀರಾವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಅಲ್ಲಿ ಕೆರೆಗಳು ಇಲ್ಲ. ಆದುದರಿಂದ ಪಿಕ್ ಅಪ್ ಲಿಫ್ಟ್ ಇರಿಗೇಷನ್ ಮೂಲಕವೋ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಇವತ್ತು ವಿದ್ಯುತ್ ಮತ್ತು ನೀರಾವರಿ ಯೋಜನೆಗಳಿಗಾಗಿ ಬೇರೆ ಬೇರೆ ಕಡೆಗಳಲ್ಲಿ ಅಣೆಕಟ್ಟುಗಳನ್ನು ಕಟ್ಟುತ್ತಿದ್ದೀರಿ. ಇದರಿಂದ ದೇಶದಲ್ಲಿ ಸಂಪೂರ್ಣವಾಗಿ ಕಾಡುಗಳು ನಾಶವ ಗುತ್ತಿದೆ. ಅಫಾರಸ್ಟೇಷನ್ ಎನ್ನುವ ಮಾತನ್ನು ಹೇಳುವಾಗ ದೊಡ್ಡ ದೊಡ್ಡ ಅಣೆಕಟ್ಟೆಗಳನ್ನು ಕಟ್ಟುತ್ತಿರುವುದರಿಂದ ವಿಪರೀತವಾಗಿ ಕಾಡು ನಾಶವಾಗುತ್ತಿದೆ. ನಮ್ಮ ಭಾಗದಲ್ಲಿ ಶರಾವತಿ ಆಗಲೀ, ಚಕ್ರ ಆಗಲೀ, ವರಾಹಿ, ಕಾಳಿ, ಮಾರುತಿ ಆಗಲೀ ಇದರಿಂದ ಸುಮಾರು ೮–೧೦ ಲಕ್ಷ ಎಕರೆಗೂ ಮೇಲ್ಪಟ್ಟು ಕಾಡು ನಾಶವಾಗಿದೆ. ಇದರಿಂದ ಇವತ್ತು ಆಗುಂಬೆಯಲ್ಲಿ ೪೦೦ ಇಂಚು ಮಳೆ ಆಗುತ್ತಿದುದು ಇದನ್ನು ಸೆಕೆಂಡ್ ಚಿರಾಪುಂಜಿ ಅಂತ ಹೆಸರು ಇತ್ತು, ಆದರೆ ಇವತ್ತು ಕೇವಲ ೨೦೦ ಇಂಚು ಮಳೆಯಾಗುತ್ತಿದೆ ಮತ್ತು ತೀರ್ಥಹಳ್ಳಿಯಲ್ಲಿ ೨೦೦ ಇಂಚು ಮಳೆಯಾಗುತ್ತಿದ್ದ ಪ್ರಮಾಣ ಇವತ್ತು ಸರಾಸರಿ ೮೦ ಇಂಚಿಗಿಂತಲೂ ಕಡಿಮೆ ಪ್ರಮಾಣದಲ್ಲಿ ಆಗುತ್ತಿದೆ. ಇದಕ್ಕೆಲ್ಲಾ ಕಾರಣ ಅರಣ್ಯ ಖಾತೆ. ಅರಣ್ಯ ನಾಶದಿಂದ ನಷ್ಟವಾಗುತ್ತಿರುವುದನ್ನು ತಪ್ಪಿಸುವುದಕ್ಕಾಗಿ ಹೊಸದಾಗಿ ಪ್ರಾಜೆಕ್ಟ್‌ಗಳನ್ನು ನೀವು ಪಶ್ಚಿಮ ಘಾಟ್‌ಗಳಲ್ಲಿ ತೆಗೆದುಕೊಳ್ಳುತ್ತಿಲ್ಲ. ಅಮೇರಿಕಾದಲ್ಲಿ ಟೆನ್ನಿಸ್ ವ್ಯಾಲಿಯಲ್ಲಿ ೨೦೦ ವರ್ಷಗಳ ಕಾಲ ವಿಪರೀತವಾಗಿ ಮರಗಳನ್ನು ಕಡಿಯುತ್ತಾ ಬಂದಿದುದರಿಂದ, ಕಾಡೆಲ್ಲಾ ನಾಶವಾಯಿತು. ಕಾಡೆಲ್ಲಾ ನಾಶವಾದಾಗ ಅವರು ಕೂಡಲೇ ಯೋಚಿಸಿ ಆಗ ಅಧ್ಯಕ್ಷರಾಗಿದ್ದ ರೂಜವೆಲ್ಟರವರು ಕಾಡನ್ನು ಪುನಃ ಅಭಿವೃದ್ಧಿಪಡಿಸುವುದಕ್ಕಾಗಿ ಸಮಗ್ರವಾದ ಒಂದು ಪ್ಲಾನ್ ಹಾಕಿ ೧೮, ೨೦ ವರ್ಷ ವಯಸ್ಸಿನೊಳಗಿರುವವರನ್ನು ತೆಗೆದುಕೊಂಡು ಅವರಿಗೆಲ್ಲಾ ಜಮೀನು ಕೊಟ್ಟು ಪ್ರೋತ್ಸಾಹ ಕೊಟ್ಟು ಪುನಃ ಕಾಡನ್ನು ಬೆಳೆಸುವುದಕ್ಕೆ ಪ್ರಯತ್ನ ಪಟ್ಟರು. ಆ ರೀತಿಯಾದ ಭಾರಿ ನಷ್ಟ

ವನ್ನು ತಪ್ಪಿಸಿದರು. ಅದೇ ರೀತಿ ನಮ್ಮ ಮುಖ್ಯಮಂತ್ರಿಗಳವರು ಸಹ ಪ್ರಾಜೆಕ್ಟ್‌ಗಳನ್ನು ಮಾಡುವಾಗ, ಅವುಗಳನ್ನು ಕೈಗೆತ್ತಿಕೊಳ್ಳುವಾಗ ಪುನರಾವರ್ತನೆ ಯೋಚನೆ ಮಾಡಬೇಕು. ಈ ತರಹ ಅರಣ್ಯ ನಾಶ ವಾಗುವುದಕ್ಕೆ ಅವಕಾಶ ಕೊಡಬಾರದು. ದೇಶದಲ್ಲಿ ೧೮ ಪರ್ಸೆಂಟ್ ಕಾಡು ನಮ್ಮ ರಾಜ್ಯದಲ್ಲಿತ್ತು. ಆದರೆ ೧೫ ಪರ್ಸೆಂಟ್ ಸಹ ಇವತ್ತು ಇಲ್ಲ. ಪುಸ್ತಕದಲ್ಲಿ ಏನೋ ಲೆಕ್ಕವಿರಬಹುದು ಆದರೆ ಅಷ್ಟುಕೂಡ ಕಾಡಿಲ್ಲ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳವರಲ್ಲಿ ಅಧ್ಯಕ್ಷರ ಮುಖಾಂತರ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಇನ್ನು ಮುಂದಾದರೂ ಸಹ ವಿದ್ಯುತ್‌ಶಕ್ತಿಯ ಪ್ರಾಜೆಕ್ಟ್‌ಗಳನ್ನಾಗಲೀ ಅಥವಾ ನೀರಾವರಿಯ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವುದಕಿಂತ ಮುಂಚಿತವಾಗಿ ಒಂದು ಸಾರಿ ಮಾನ್ಯ ಅರಣ್ಯ ಖಾತೆಯ ಸಚಿವರ ಜೊತೆಗೆ ವೈಮಾನಿಕ ಸಮೀಕ್ಷೆಯನ್ನು ನಡೆಸಿ ಅದರಿಂದ ಕಾಡು ಎಷ್ಟು ನಷ್ಟವಾಗುತ್ತದೆಂಬು ದನ್ನು ನೋಡಿ ಈ ಅಣೆಕಟ್ಟುಗಳನ್ನು ಕೈಗೊಳ್ಳುವುದು ಉತ್ತಮ. ಆದರೆ ಇವತ್ತು ಅಣೆಕಟ್ಟುಗಳನ್ನು ಕಟ್ಟುವುದಕ್ಕೋಸ್ಕರವಾಗಿ ಕಾಡನ್ನೆಲ್ಲಾ ಕಡಿದಿರುವುದರಿಂದ ಅಣೆಕಟ್ಟುಗಳು ಇರುತ್ತವೆಯೇ ಹೊರತು ನೀರು ಇರುವುದಿಲ್ಲ. ಇಂಥಾ ಒಂದು ಪರಿಸ್ಥಿತಿ ಉಂಟಾಗದ ಹಾಗೆ ಇನ್ನು ಮುಂದಾದರೂ ಮುಂಜಾಗ್ರತೆ ಕ್ರಮವನ್ನು ಕೈಕೊಳ್ಳಬೇಕು. ಇಲ್ಲದಿದ್ದರೆ ಇದರಿಂದ ನಮ್ಮ ದೇಶದ ಆರ್ಥಿಕ ರಂಗದ ಮೇಲೂ ಇದು ಪ್ರಭಾವವನ್ನು ಬೀರುತ್ತದೆ. ಮುಂದಿನ ಜನಾಂಗದವರು ಸಹ ಶಾಪ ಹಾಕಿಯಾರು ಆದುದರಿಂದ ಕಾಡಿಗೆ ಯಾವ ರೀತಿಯ ತೊಂದರೆಯಾಗದ ರೀತಿಯಲ್ಲಿ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಮಿನಿ ರಿಜರ್ವ್‌ವಾಯರ್ ಅಂತ ಪಟ್ಟಿಯಲ್ಲಿದೆ, ಆದರೆ ತಾವು ಒಂದೂ ಕಟ್ಟಿಸಿಲ್ಲ, ಇವತ್ತು ನೀವು ಒಂದೊಂದು ಡ್ಯಾಮ್‌ಗೆ ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ ಅದರ ಬದಲು ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ೧೦೦ ಡ್ಯಾಮ್‌ಗಳನ್ನು ಕಟ್ಟಿಸಿ.... . ...

ಶ್ರೀ ಡಿ. ದೇವರಾಜ್ ಅರಸ್.—ಅದು ಹೇಗಪ್ಪಾ ಸಾಧ್ಯ ? ? ?

ಶ್ರೀ ಕಡಿದಾಳ್ ದಿವಾಕರ್.—ಇನು ಪಿ.ಎಚ್.ಇ. ಬಗ್ಗೆ ಹೇಳಬೇಕೆಂದರೆ ಇದು ಒಂದು ದೊಡ್ಡ ಖಾತೆಯಾಗಿದೆ, ಇಲ್ಲಿ ಒಂದು ದೊಡ್ಡ ಅವ್ಯವಸ್ಥೆಯಾಗಿದೆ. ಪಿ.ಎಚ್.ಇ. ಆಡಳಿತ ನಡೆಸುವವರು ಒಬ್ಬರಾದರೆ ಟ್ರಾನ್ಸ್‌ಫರ್ ವಗೈರೆ ಮಾಡುವವರು ಮತ್ತೊಬ್ಬರು. ಆದುದರಿಂದ ಇದನ್ನು ಮೈನರ್ ಇರಿಗೇಷನ್‌ನಲ್ಲಾದರೂ ಮರ್ಜ್ ಮಾಡುವುದು ಒಳ್ಳೆಯದೆಂದು ಸಲಹೆ ಕೊಡುತ್ತೇನೆ. ಏತಕ್ಕೆಂದರೆ ವಿಲೇಜ್‌ಗಳಲ್ಲಿ ಏನಾದರೂ ಬೋರ್‌ವೆಲ್‌ಗಳು ಕೆಟ್ಟುಹೋಯಿತೆಂದರೆ ಮಾನ್ಯ ಶ್ರೀ ಪ್ರಭಾಕರ್‌ರವರನ್ನು ಕೇಳಬೇಕಾಗುತ್ತದೆ. ಅವರು ೧೨೦-೧೫೦ ಬೋರ್‌ವೆಲ್‌ಗಳನ್ನು ಕೊಟ್ಟಿದ್ದೇವೆಂದು ಹೇಳಿ ಬಿಡುತ್ತಾರೆ. ಆದರೆ ಅಲ್ಲಿ ೪-೫ ಕೂಡ ಸರಿಯಾಗಿ ಕೆಲಸ ಮಾಡುತ್ತಿರುವುದಿಲ್ಲ, ಅಲ್ಲಿ ಲೋ ಕ್ವಾಲಿಟಿ ಪೈಪ್ ಹಾಕಿರು ತ್ತಾರೆ. ಅಲ್ಲಿಗೆ ನಾವುಗಳು ಹೋದರೆ ಜನ ನಮ್ಮನ್ನು ಕೇಳುತ್ತಾರೆ. ಆದುದರಿಂದ ಇದನ್ನು ಯಾರಿಗಾದರೂ ಒಬ್ಬರಿಗೆ ವಹಿಸಿಕೊಟ್ಟುಬಿಡಿ ಅಂತ ನಿಮ್ಮ ಹತ್ತಿರ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಇಲ್ಲದಿದ್ದರೆ ಅಪವಾದ ತಪ್ಪಿದ್ದಲ್ಲ.

ಇನ್ನು ಪಶು ವೈದ್ಯ ಇಲಾಖೆಯ ಬಗ್ಗೆ ಸ್ವಲ್ಪ ಒಂದೆರಡು ಮಾತನ್ನು ಹೇಳಬೇಕಾಗಿದೆ. ಈ ಪಶು ವೈದ್ಯ ಇಲಾಖೆಗೆ ೧೬$\frac{3}{4}$ ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡುತ್ತಿದ್ದೀರಿ. ಅವರು ಉತ್ತಮ ವಾದ ಕೆಲಸಗಳನ್ನು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಬಹಳ ಉತ್ತಮವಾದ ಕೆಲಸಗಳು ಆಗಿದೆ. ಆದರೆ ಹರಿಯಾಣ, ಪಂಜಾಬ್, ಗುಜರಾತಿಗೆ ಹೋಲಿಸಿಕೊಂಡರೆ ನಮ್ಮದು ಸ್ವಲ್ಪ ಕಡಿಮೆ ಸಂಖ್ಯೆಯಲ್ಲಿರ ಬಹುದು ಆದರೂ ಕೂಡ ನಮ್ಮ ರಾಜ್ಯದಲ್ಲಿ ಉತ್ತಮ ರೀತಿಯಲ್ಲಿ ಆಗಿದೆ. ಆರ್ ಎಂ.ಎಚ್. ಇನ್ಸಿನ್ಯು ಯೇಷನ್ ಸೆಂಟರ್ ಬಹಳ ಉತ್ತಮವಾದ ರೀತಿಯಲ್ಲಿ ಕೆಲಸವಾಗಿದೆ. ಇಷ್ಟು ಮಾತ್ರವಾದರೆ ಸಾಲದು ಇನ್ನು ಉತ್ತಮವಾದ ಕೆಲಸವಾಗಬೇಕಾಗಿದೆ ನಮ್ಮ ರಾಜ್ಯದಲ್ಲಿಯೇ ಆಗಲೀ ಅಥವಾ ಇಡೀ ದೇಶ ದಲ್ಲಿಯೇ ಆಗಲೀ ಗೋ ಸಂಪತ್ತು ಸಂಖ್ಯಾ ದೃಷ್ಟಿಯಿಂದ ಜಾಸ್ತಿ ಆಗಿದೆಯೇ ಹೊರತು ಗುಣ ದೃಷ್ಟಿ ಯಿಂದ ಜಾಸ್ತಿಯಾಗಿಲ್ಲ. ಆ ದೃಷ್ಟಿಯಿಂದ ಈ ಕೆಲಸ ತ್ವರಿತಗತಿಯಲ್ಲಿ ಆಗುವಂತೆ ಮಾಡಲು ತಳಿ ಅಭಿವೃದ್ಧಿ ಯೋಜನೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಬೇಕಾಗಿದೆ. ೨,೪೦೦ ರೂ.ಗಳಿಗಿಂತ ಕಡಿಮೆ ವರಮಾನವಿರುವವರಿಗೆ ತಾವು ಹೊಸ ತಳಿಗಳನ್ನು ಕೊಟ್ಟು, ಪಂಪ್‌ಸೆಟ್ ಕೊಟ್ಟು ಒಂದೆರಡು ಸಾವಿರ ರೂಪಾಯಿಗಳ ಹಣ ಕೊಟ್ಟು ಮಾಡುವ ಯೋಜನೆ ಏನಿದೆ, ಅದರಿಂದ ಅವರು ಹಸಿರು ಹುಲ್ಲು ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ ಈ ಏರಿಯಾ ಡೆವಲಪ್ ಮೆಂಟ್ ಮತ್ತು ತಳಿ ಅಭಿವೃದ್ಧಿ ಯೋಜನೆಯಲ್ಲಿ ೨,೪೦೦ ರೂ.ಗಳಿಗಿಂತ ಕಡಿಮೆ ವರಮಾನವಿರುವ

ವರೆಗೆ ಮಾತ್ರ ಕೊಡಬೇಕೆಂದು ಏನು ನಿಯಮವನ್ನು ಹಾಕಿದ್ದೀರಿ ಅದನ್ನು ಸ್ವಲ್ಪ ಜಾಸ್ತಿ ಮಾಡಬೇಕಾಗಿದೆ. ಇದರ ಬಗ್ಗೆ ತಾವು ಪುನರ್ ವಿಮರ್ಶೆ ಮಾಡಬೇಕಾಗಿದೆ. ಏತಕ್ಕೆಂದರೆ ತಳಿ ಅಭಿವೃದ್ಧಿ ಆಗಬೇಕಾದರೆ, ಏರಿಯಾ ಡೆವಲಪ್‌ಮೆಂಟ್ ಆಗಬೇಕಾಗಿದ್ದರೆ ಶಕ್ತಿ ಇದ್ದು ಮಾಡುವವರೆಲ್ಲರೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆದುದರಿಂದ ಹಸಿರು ಹುಲ್ಲನ್ನು ಬೆಳೆಸುವುದಕ್ಕೆ ಹೆಚ್ಚಿನ ಮುತುವರ್ಜಿ ವಹಿಸಿ, ಈ ಸ್ಕೀಂನಲ್ಲಿ ೮ ಜಿಲ್ಲೆಗಳು ಬರುತ್ತವೆ. ಅದರಲ್ಲಿ ಮಲೆನಾಡು ಜಿಲ್ಲೆಯೊಂದು ಸೇರಿದೆ: ಆದುದರಿಂದ ಇದರ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಆರ್.ವಿ.ಡಿ.ಗೆ ತಾವು ಈ ಸಾರಿ ಮಾತ್ರ ೮೫ ಲಕ್ಷ ರೂಪಾಯಿಗಳನ್ನು ಜಾಸ್ತಿ ಕೊಟ್ಟಿದ್ದೀರಿ ಇದು ಒಳ್ಳೆಯ ಕೆಲಸ. ಆದರೆ ಇವತ್ತು ಲೈವ್ ಸ್ಟಾಕ್ ಇನ್ಸ್‌ಪೆಕ್ಟರ್‌ಗಳು ಕೆಲವು ಕಡೆಗಳಲ್ಲಿ ಇಲ್ಲವೇ ಇಲ್ಲ, ಅದಕ್ಕೋಸ್ಕರ ಅವರುಗಳನ್ನು ರೆಕ್ರೂಟ್‌ಮೆಂಟ್ ಮಾಡಿಕೊಳ್ಳಬೇಕು ಎಂದು ಹೇಳ ಬಯಸುತ್ತೇನೆ. ನಮಗೆ ಒಂದೇ ವರ್ಷ ಟ್ರೈನಿಂಗ್ ಕೊಡುತ್ತಿದ್ದಾರೆ, ಒಂದು ವರ್ಷ ಟ್ರೈನಿಂಗ್ ಕೊಟ್ಟರೆ ಸಾಲದು, ಎರಡು ವರ್ಷ ಟ್ರೈನಿಂಗ್ ಕೊಡಬೇಕು ಎಂದು ಕೇಳುತ್ತಾ ಇದ್ದಾರೆ. ಈ ದೇಶದಲ್ಲಿ ಸಂಬಳ ತೆಗೆದುಕೊಂಡು ಕೆಲಸಮಾಡುವಂಥಾವರಲ್ಲಿ ನಾವು ಕಲಿತಿದ್ದು ಸಾಲದು, ನಾವು ಪಡೆದಷ್ಟು ಸಂಬಳಕ್ಕೆ ಸೂಕ್ತವಾಗಿ ಕೆಲಸವನ್ನು ಮಾಡಬೇಕು ಎಂದು ಯೋಚನೆಮಾಡತಕ್ಕ ವರ್ಗವಾದರೂ ಇದೆ ಎನ್ನತಕ್ಕಂಥಾದ್ದು ಬಹಳ ಸಂತೋಷದ ವಿಚಾರ. ಅವರು ನಮಗೆ ೨ ವರ್ಷ ಟ್ರೈನಿಂಗ್ ಕೊಡಿ ಎಂದು ಕೇಳಿಕೊಳ್ಳುತ್ತಾ ಇದ್ದಾರೆ. ಆದ್ದರಿಂದ ತಾವು ಅವರಿಗೆ ಎರಡು ವರ್ಷ ಟ್ರೈನಿಂಗ್ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ತಕ್ಷಣ ಎರಡು ಆರ್.ವಿ ಡಿ.ಗಳನ್ನು ಓಪನ್ ಮಾಡಬೇಕು. ಎಲ್ಲೆಲ್ಲಿ ತುರ್ತಾಗಿ ಓಪನ್ ಮಾಡಬೇಕೋ ಅಂಥಾ ಕಡೆ ತಕ್ಷಣ ಮಾಡಬೇಕು ಎಂದು ಹೇಳುತ್ತೇನೆ ಮತ್ತೆ ಬಿ.ವಿ.ಎಸ್. ಸೀಟುಗಳನ್ನು ೫೦ ಸೀಟುಗಳನ್ನು ಮಾತ್ರ ಕೊಡುತ್ತಿದ್ದಾರೆ. ೧೦೦ ಸೀಟುಗಳನ್ನು ಕೊಡಬೇಕು ; ಹಳ್ಳಿಗಾಡಿನಿಂದ ಬಂದಂಥ ವಿದ್ಯಾರ್ಥಿಗಳಿಗೆ ವ್ಯವಸ್ಥೆ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಕೆ.ಡಿ.ಡಿ.ಸಿ.ಯವರು ೫ ಗವರ್ನಮೆಂಟ್ ಡೈರಿ ೬ ರೂರಲ್ ಡೈರಿ ಸೆಂಟರ್ ಮುಖಾಂತರ ಉತ್ತಮವಾಗಿ ಕೆಲಸವನ್ನು ಶುರು ಮಾಡಿಸಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲೂ ಡೈರಿ ಸೆಂಟರ್ಸ್‌ನ್ನು ತೆಗೆಯಬೇಕು. ಚಿಲ್ಲಿಂಗ್ ಸೆಂಟರ್ಸ್‌ನ್ನು ಬೇಡಿಕೆ ಇರುವ ಕಡೆ ತೆಗೆದರೆ ಒಳ್ಳೆಯದು. ಪೌಡರ್ ಪ್ಲಾಂಟ್ ಮತ್ತು ಚಿಲ್ಲಿಂಗ್ ಸೆಂಟರನ್ನು ಎಲ್ಲಾ ಕಡೆಯಲ್ಲೂ ತೆಗೆಯತಕ್ಕಂಥ ವ್ಯವಸ್ಥೆ ಮಾಡಬೇಕು. ಕೆ ಡಿ.ಡಿ.ಸಿ.ಯವರು ಮ್ಯಾನ್‌ಪವರ್ ಕಮಿಟಿ ಮಾಡಿ ಕೆಳಗಿನವರನ್ನು ಮೇಲಕ್ಕೆ, ಮೇಲಿನವರನ್ನು ಕೆಳಕ್ಕೆ ತರುತ್ತಿದ್ದಾರೆ ಎಂಬ ಕೂಗು ಕೇಳಿ ಬರುತ್ತಾ ಇದೆ. ಅನುಭವವಿರತಕ್ಕವರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು. ಅದು ಬಿಟ್ಟು ಯಾರಿಗೋ ಹೊಸದಾಗಿ ಸೌಲಭ್ಯ ಕೊಡಿಸುವುದಕ್ಕೆ ಆಗಬಾರದು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇನ್ನು ಪೋಲೀಸ್ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಪೋಲೀಸ್ ಇಲಾಖೆ ಗೃಹಖಾತೆಗೆ ಸೇರಿದ್ದು, ಪೋಲೀಸ್ ಇಲಾಖೆ ಉತ್ತಮವಾಗಿ ಕೆಲಸ ಮಾಡುತ್ತಿದೆ. ಕರ್ನಾಟಕ ರಾಜ್ಯದ ಪೋಲೀಸರು ಇಡೀ ದೇಶಕ್ಕೆ ಮಾದರಿಯಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಇತ್ತೀಚೆಗೆ ಕ್ಯಾನ್ಸರ್ ಬರುವಂಥ ಸೂಚನೆ ಕಂಡುಬರುತ್ತಾ ಇದೆ. ಈ ಮಟಕಾ ಏನಿದೆ ಇದರಿಂದ ಇಡೀ ಇಲಾಖೆಗೆ ಕೆಟ್ಟ ಹೆಸರು ಬರುವಂಥಾದ್ದು. ಇದರ ಬಗ್ಗೆ ಬಹಳ ಬೇಸರಪಟ್ಟುಕೊಂಡು ಹೇಳಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ, ಶಿವಮೊಗ್ಗ ಜಿಲ್ಲೆಯಲ್ಲಿ ದಿವಸಕ್ಕೆ ಸುಮಾರು ೫ ಲಕ್ಷ ರೂಪಾಯಿಯ ವ್ಯವಹಾರ ನಡೆಯುತ್ತಿದೆ. ಒಂದು ದಿವಸಕ್ಕೆ ೫ ಲಕ್ಷ ಆದರೆ ವರ್ಷಕ್ಕೆ ೧೮ ಕೋಟಿ ರೂಪಾಯಿ ವ್ಯವಹಾರ ಆಗುತ್ತದೆ. ಒಂದು ಜಿಲ್ಲೆಯಲ್ಲಿ ಇಷ್ಟು ವ್ಯವಹಾರವಾದರೆ ಇಡೀ ರಾಜ್ಯದಲ್ಲಿ ಎಷ್ಟಾಗುತ್ತದೆ ಎಂದು ಲೆಕ್ಕ ಹಾಕಿದರೆ ಇಡೀ ರಾಜ್ಯವನ್ನೇ ಕೊಂಡುಕೊಳ್ಳುವಷ್ಟಾಗುತ್ತದೆ. ಹುಬ್ಬಳ್ಳಿಯಲ್ಲಿ ಕಲ್ಯಾಣ ಮಟಕಾ ನಡೆಯುತ್ತಾ ಇದೆ. ಆದುದರಿಂದ ಮಹಾರತನ್ ಮೇಲೆ ಯಾವ ಕ್ರಮ ತೆಗೆದುಕೊಂಡರೋ ಅದೇ ಕ್ರಮ ತೆಗೆದುಕೊಳ್ಳಬೇಕು. ರತನ್‌ಗೆ ಯಾವ ಶಿಕ್ಷೆಯನ್ನು ಕೊಟ್ಟರೋ ಅದೇ ಶಿಕ್ಷೆಯನ್ನು ಇಲ್ಲಿ ಕೊಡಬೇಕು. ಇಲ್ಲದೇ ಹೋದರೆ ಮಟಕಾವನ್ನು ರೆಗ್ಯುಲರೈಸ್ ಮಾಡಿ. ರೆಕಗ್‌ನಿಷನ್ ಮಾಡಿರೇಡ್ ಮಾಡಿದರೂ ತಪ್ಪಾಗುವುದಿಲ್ಲ. ಇದರಿಂದ ಬರತಕ್ಕ ಹಣ ಕೊನೇಪಕ್ಷ ಡೆವಲಪ್‌ಮೆಂಟ್ ವರ್ಕ್ಸ್ ಮಾಡಿಸುವುದಕ್ಕೆ ಆಗುತ್ತದೆ. ಯಾರ್ಯಾರೋ ಕೋಟ್ಯಾಧೀಶರಾಗುವ ಬದಲು ಇದನ್ನು ಮಾಡಿದರೆ ಅಭಿವೃದ್ಧಿ ಕಾರ್ಯಗಳಾಗುತ್ತದೆ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ, ತಾವು ಮಾಡುತ್ತೀರಿ ಎಂದು ನಾನು ಭಾವಿಸಿಕೊಂಡಿದ್ದೇನೆ.

ಇನ್ನು ಒಳನಾಡು ಮೀನುಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಸಾವಿರಾರು ಕೆರೆಗಳಿವೆ. ಜೊತೆಗೆ ಪ್ರಾಜೆಕ್ಟ್ ಏರಿಯಾನಲ್ಲಿ ಇರಿಗೇಷನ್ ಡ್ಯಾಮುಗಳನ್ನು, ರಿಸರ್ವಾಯರುಗಳನ್ನು ಕಟ್ಟಿಸುತ್ತಿದ್ದಾರೆ. ಅಲ್ಲೆಲ್ಲಾ ಮೀನುಗಾರಿಕೆಗೆ ಮಾಡಿರತಕ್ಕ ಅನುಕೂಲ ಸಾಲದು. ಇದೇ ರೀತಿ ಮುಂದುವರೆದರೆ ಮೀನುಗಾರಿಕೆ ಉದ್ಯಮ ಉಳಿಯಲಿಕ್ಕಿಲ್ಲ ಈಗ ೧೦೦ ಪಟ್ಟು ಅಭಿವೃದ್ಧಿ ಮಾಡುವುದಕ್ಕೆ ಅವಕಾಶವುಂಟು. ಇವತ್ತು ನ್ಯಾಚುರಲ್ ಫಿಷಸ್ ಸಮುದಾಯ ನಾಶವಾಗುತ್ತಾ ಇದೆ. ಇವತ್ತು ಮೀನುಗಳನ್ನು ವಿಪರೀತವಾಗಿ ಹಿಡಿಯುತ್ತಿರುವುದರಿಂದ ಅವು ನಾಶವಾಗುತ್ತಾ ಇದೆ. ಇದನ್ನು ತಾವು ಕ್ರಮಬದ್ಧಗೊಳಿಸಬೇಕು. ವರ್ಷೇ ವರ್ಷೇ ಮೀನುಗಳನ್ನು ಹಿಡಿಯುವುದಕ್ಕೆ ಅವಕಾಶ ಕೊಡುವುದರಿಂದ ಮೀನುಗಳು ನಾಶವಾಗುತ್ತಾ ಇವೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಊರಿನಲ್ಲಿ ತುಂಗಾನದಿಯಲ್ಲಿ ಮೀನೇ ಇಲ್ಲ. ಇದರಿಂದ ಮಾಮೂಲಿ ಕೆಲಸಗಾರರಿಗೆ ತೊಂದರೆಯಾಗಿದೆ. ಆದುದರಿಂದ ಇದನ್ನು ಕ್ರಮಬದ್ಧವಾದ ವ್ಯವಸ್ಥೆಗೆ ಒಳಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಪವರ್ ಪ್ರಾಜೆಕ್ಟನ್ನು ಮಲೆನಾಡಿನಲ್ಲಿ ತೆಗೆಯಲೇ ಬಾರದು. ಅಣುಶಕ್ತಿ ಸ್ಥಾವರವನ್ನು ರಾಜ್ಯಕ್ಕೆ ತಂದರೆ ಒಳ್ಳೆಯದು. ಹಣಕಾಸಿನ ಒಂದೇ ದೃಷ್ಟಿಯನ್ನು ನೋಡಬಾರದು, ಅನುಕೂಲತೆ ದೃಷ್ಟಿಯನ್ನು ನೋಡಬೇಕು. ಎಂ.ಪಿ.ಸಿ. ಪ್ರಾಜೆಕ್ಟ್‌ಗಳನ್ನು ತೆಗೆದು ಕೊಳ್ಳುವಾಗ ಮುಳುಗಡೆ ಪ್ರದೇಶದ ಜನರಿಗೆ ಹೆಚ್ಚಿನ ಸೌಲಭ್ಯ ಕೊಡಬೇಕು. ತಮ್ಮ ಕಾರ್ಪೊರೇಷನ್‌ನಲ್ಲಿ ಸ್ಥಳೀಕರಿಗೆ ನೌಕರಿ ಕೊಡುವಂಥ ವ್ಯವಸ್ಥೆ ಮಾಡಬೇಕು ವರಾಹಿ, ಚಕ್ರ ಹಾಗೂ ಸಾವೆಹಕ್ಲು ಜಲಾಶಯಕ್ಕೆ ಸಂಬಂಧಪಟ್ಟ ಕಾಮಗಾರಿಗಳಲ್ಲಿ ಸ್ಥಳೀಯ ಜನರಿಗೆ ನೌಕರಿ ಸಿಕ್ಕುತ್ತಾ ಇಲ್ಲ. ಪವರ್ ಪ್ರಾಜೆಕ್ಟ್ ಕನ್‌ಸ್ಟ್ರಕ್ಷನ್‌ನ್ನು ಪೂರ್ತಾ ಪಿ.ಡಬ್ಲ್ಯು.ಡಿ ಗೆ ವಹಿಸಿಕೊಡಬೇಕು. ಕಂಪೆನಿ ರೂಲ್ಸ್‌ನಿಂದ ಚಕ್ರ, ಸಾವೆಹಕ್ಲು ಕಾಮಗಾರಿಗಳಲ್ಲಿ ಯಾವತ್ತು ನೋಡಿದರೂ ಸ್ಟ್ರೈಕ್ ನಡೆಯುತ್ತಾ ಇರುತ್ತದೆ. ಆದ್ದರಿಂದ ಇದರ ಡ್ಯಾಂ ಕನ್‌ಸ್ಟ್ರಕ್ಷನ್‌ನ್ನು ಪಿ.ಡಬ್ಲ್ಯು.ಡಿ.ಗೆ ವಹಿಸಿ ಕೊಡಬೇಕು. ಚಾನಲ್ ಕೆಲಸವನ್ನು ಎಂ ಪಿ.ಸಿ. ಯವರು ನೋಡಿಕೊಳ್ಳಲಿ.

ಇನ್ನು ಸೆಕ್ರೆಟರಿಯೇಟ್ ಬಗ್ಗೆ ಒಂದು ವಿಚಾರವನ್ನು ಹೇಳಬೇಕಾಗಿದೆ. ಸೆಕ್ರೆಟರಿಯೇಟ್‌ನಲ್ಲಿ ಉಚ್ಚ ಸ್ಥಾನದಲ್ಲಿರತಕ್ಕ ಅಧಿಕಾರಿಗಳು ಸದಸ್ಯರುಗಳನ್ನು ಒಂದೊಂದು ಸಾರಿ ಬಹಳ ನಿಕೃಷ್ಟವಾಗಿ ಮಾತನಾಡುತ್ತಾರೆ. ತಾವೇ ತಿಳಿಸಿದ ಹಾಗೆ ನಾನು ಒಂದು ಸಾರಿ ಎಂ.ಡಿ ಯವರ ಹತ್ತಿರ ಹೋಗಿ ಮಾನ್ಯ ಮುಖ್ಯಮಂತ್ರಿಗಳು ನಿಮ್ಮನ್ನು ನೋಡುವುದಕ್ಕೆ ಹೇಳಿದ್ದಾರೆ ಎಂದು ಹೇಳಿದಾಗ, ನಾವು ನೋಡುತ್ತೇವೆ ಎಂದು ಬೇಜಾರಿನಿಂದ ಹೇಳಿದರು. ಸ್ಪೆಷಲ್ ಲ್ಯಾಂಡ್ ಆಕ್ವಿಸಿಷನ್ ಆಫೀಸರ್ ಹತ್ತಿರ ಹೋಗಿ ವರ್ಕ್ ಹೆಲ್ಡ್ ಅಪ್ ಆಗುತ್ತಾ ಇದೆ ಸ್ಟಾಫನ್ನು ಹಾಕಿ ಎಂದು ಕೇಳಿದರೆ ನಮ್ಮ ಹತ್ತಿರ ಹಾಕುವುದಕ್ಕೆ ಸ್ಟಾಫ್ ಇಲ್ಲ ಎಂದು ಹೇಳಿದರು.' ಮತ್ತೆ ಕೆಲಸ ನಿಂತುಹೋಗುತ್ತಾ ಇದೆ ಎಂದಾಗ ಸಮರ್ಪಕವಾದ ಉತ್ತರ ಕೊಡಲಿಲ್ಲ. ಯಾವುದೇ ಅಧಿಕಾರಿ ಇರಲಿ, ಈ ರೀತಿ ಸದಸ್ಯರ ಮನಸ್ಸಿಗೆ ನೋವಾಗುವ ರೀತಿಯಲ್ಲಿ ಮಾತನಾಡಬಾರದು, ಇದರ ಬಗ್ಗೆ ಅವರಿಗೆ ಸೂಕ್ತವಾದ ತಿಳಿವಳಿಕೆ ಕೊಡಬೇಕು. ಒಂದು ವೇಳೆ ಇದು ಸಾಧ್ಯವಿಲ್ಲದೇ ಹೋದರೆ ಚೀಫ್ ಸೆಕ್ರೆಟರಿ ಹತ್ತಿರ ಕ್ಲಾಸ್ ನಡೆಸಿ. ನಾನು ಒಂದು ಸಾರಿ ಚೀಫ್ ಸೆಕ್ರೆಟರಿ ಆಫೀಸಿಗೆ ಹೋಗಿದ್ದೆ. ಅಲ್ಲಿ ಬಹಳ ಒಳ್ಳೆಯ ಆಫೀಸರ್ ಇದ್ದಾರೆ ಅದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಆದುದರಿಂದ ಈ ರೀತಿ ಜಬರ್‌ದಸ್ತಿ ಮಾಡುವಂಥ ಆಫೀಸರುಗಳಿಗೆ ಚೀಫ್ ಸೆಕ್ರೆಟರಿಯವರಿಂದ ಟ್ರೈನಿಂಗ್ ಕ್ಲಾಸ್ ನಡೆಸಿದರೆ ಉಳಿದವರೆಲ್ಲಾ ಸರಿಯಾಗಿ ನಡೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ರಾಮಾಭಟ್ (ಪುತ್ತೂರು).—ಸನ್ಮಾನ್ಯ ಅಧ್ಯಕ್ಷರೇ, ನಾನು ಮೊದಲು ಪೋಲೀಸ್ ಇಲಾಖೆ ಬಗ್ಗೆ ನಾಲ್ಕು ಮಾತುಗಳನ್ನು ಆಡುತ್ತೇನೆ. ಈಗ ಕೆಲವು ರಾಜ್ಯಗಳಲ್ಲಿ ಪೋಲೀಸರದು ಚಳುವಳಿ ನಡೆಯುತ್ತಾ ಇದೆ. ಇಲ್ಲಿಯೂ ನಡೆಯಬೇಕು ಎನ್ನುವ ಅಪೇಕ್ಷೆ ಇಲ್ಲ. ನಡೆಯಬಾರದು, ಎಂದು ನಾನು ಹೇಳುತ್ತೇನೆ. ಆದರೆ ಪೋಲೀಸರಿಗೆ ಮತ್ತೆ ಇತರ ಇಲಾಖೆಯವರಿಗೆ ಯಾವುದೇ ತೊಂದರೆ ಇದ್ದರೆ, ಯಾವುದೇ ಬೇಡಿಕೆ ಇದ್ದರೆ ಯಾವ ಮಾಧ್ಯಮದ ಮೂಲಕ ಅದನ್ನು ಸರಕಾರದ ಗಮನಕ್ಕೆ ತರಬೇಕು ಎನ್ನುವುದು ಮೊದಲು ಇತ್ಯರ್ಥವಾಗಬೇಕು. ಉದಾಹರಣೆಗೆ ಹೇಳುವುದಾದರೆ ಮಂಗಳೂರಿನಲ್ಲಿ ಒಬ್ಬ ಕಾನ್‌ಸ್ಟೇಬಲ್ ತನ್ನ ಒಂದು ಕೊರತೆ ಬಗ್ಗೆ ಡಿ.ಐ ಜಿ.ಯವರಿಗೆ ಮತ್ತು ಐ.ಜಿ.ಯವರಿಗೆ ಕಾಗದ ಬರೆದ. ಅದಕ್ಕೆ ಶಿಕ್ಷೆ ರೂಪದಲ್ಲಿ ಅಲ್ಲಿನ ಎಸ್.ಪಿ.ಯವರು ಜಿಲ್ಲಾ ಪೋಲೀಸ್ ದಳಕ್ಕೆ ಅಂದರೆ ಇಡೀ ಪ್ಲಾಟೂನ್‌ಗೆ ೩ ಮೈಲಿ ಓಡಿಹೋಗಿ ಹಾಜರು ಕೊಟ್ಟು ವಾಪಸ್ ಬರಬೇಕು ಎನ್ನುವ ಶಿಕ್ಷೆಯನ್ನು ಕೊಟ್ಟಿದ್ದಾರೆ. ಒಬ್ಬರು ಬರೆದಿದ್ದಕ್ಕೆ ಇಡೀ ಪ್ಲಾಟೂನ್‌ಗೆ ಶಿಕ್ಷೆ ಕೊಟ್ಟಿದ್ದಾರೆ.

೨–೦೦ ಪಿ.ಎಂ.

ಅಂದರೆ, ಈ ರೀತಿಯಲ್ಲಿ ತಮ್ಮ ಯಾವುದೇ ಕುಂದುಕೊರತೆಗಳನ್ನು ನಿವಾರಿಸಲು ಅವರು ಏನಾದರು ಕೇಳಿಕೊಂಡರೆ ಅವರಿಗೆ ಈ ರೀತಿಯ ಶಿಕ್ಷೆ ಕೊಡಲಾಗುತ್ತಿದೆ; ಆದ್ದರಿಂದ ಇದರ ಪರಿಣಾಮ ಏನಾಗುತ್ತದೆಂಬುದನ್ನು ವಿಚಾರ ಮಾಡಬೇಕು. ಅವರ ಬೇಡಿಕೆಗಳು ಸಾಮಾನ್ಯವಾಗಿ ಸಣ್ಣ ಪುಟ್ಟವು ಮತ್ತು ಎಲ್ಲೋ ಕೆಲವು ದೊಡ್ಡ ಬೇಡಿಕೆಗಳು ಇವೆ. ಉದಾಹರಣೆಗೆ, ಪೋಲೀಸರಿಗೆ ಸಂಬಳ ಕೊಡುವಾಗ, ಅವರ ಡ್ರೆಸ್ ಕ್ಲೀನಿಂಗ್‌ಗೆ, ಹೇರ್ ಕಟಿಂಗಿಗೆ, ಷೇವಿಂಗಿಗೆ ಎಂದು ೪ ರೂಪಾಯಿಗಳನ್ನು ವಜ ಮಾಡುತ್ತಾರೆ. ಆದರೆ ಅದೇ ಪೋಲೀಸರು ಅವರ ಡ್ರೆಸ್ ಕ್ಲೀನಿಂಗಿಗೇ, ಕಟಿಂಗಿಗೆ, ಷೇವಿಂಗಿಗೆಲ್ಲ ತಮ್ಮ ಸ್ವಂತ ಕಾಸನ್ನು ಕೊಡಬೇಕಾಗಿದೆ. ಈ ನಾಲ್ಕು ರೂಪಾಯಿಗಳಿಂದ ಅವರಿಗೆ ಏನೇನು ಉಪಯೋಗವಾಗುತ್ತಿಲ್ಲ. ಇದನ್ನೆಲ್ಲ ಅವರು ಯಾರ ಹತ್ತಿರ ಹೇಳಬೇಕು ? ಇನ್ನು ಸೀನಿಯಾರಿಟಿ ಪ್ರಕಾರ ಬಡ್ತಿ ಕೊಡಬೇಕೆಂದು ಇದೆ. ಆದರೆ ಆ ಪ್ರಕಾರ ಕೊಡುತ್ತಿಲ್ಲ. ಒಬ್ಬ ಹೆಡ್ ಕಾನ್‌ಸ್ಟೇಬಲ್ ಸಬ್ ಇನ್ಸ್‌ಪೆಕ್ಟರ್ ಆಗಬೇಕಾದರೆ ಅಕೌಂಟ್ಸ್ ಸೀನಿಯರ್ ಪಾಸ್ ಮಾಡಬೇಕೆಂದೇನು ಪಬ್ಲಿಕ್ ಸರ್ವೀಸ್ ಕಮೀಷನ್ ರೂಲ್ಸ್ ಪ್ರಕಾರ ಇಲ್ಲ. ಆದರೆ, ಅದನ್ನು ಪಾಸ್ ಮಾಡದ ಹೊರತು ಬಡ್ತಿ ಕೊಡುವುದಿಲ್ಲವೆಂದು ಕಡ್ಡಾಯ ಮಾಡುತ್ತಿದ್ದಾರೆ. ಇನ್ನು ಸರಂಡರ್ ಲೀವ್ ಸ್ಯಾಲರಿ ಏನಿದೆ ಅದು ಸಿಗಬೇಕಾದರೆ ರಜ ಕಳೆದು ಕೆಲಸಕ್ಕೆ ಹಾಜರಾದ ಮೇಲೆ ೪ ತಿಂಗಳು ಕಳೆಯಬೇಕಾಗುತ್ತದೆ. ಇವುಗಳನ್ನೆಲ್ಲ ಅವರು ಯಾರ ಹತ್ತಿರ ಹೇಳಬೇಕು ? ಸರ್ವೇ ಸಾಮಾನ್ಯವಾಗಿ ಎಲ್ಲ ಇಲಾಖಾ ನೌಕರರಿಗೂ ಭಾನುವಾರ ರಜ ಇದೆ; ಆದರೆ ಪೋಲೀಸ್‌ನವರಿಗೆ ಮಾತ್ರ ಅಂದು ರಜವಿಲ್ಲ. ಆದ್ದರಿಂದ ಅವರು ಭಾನುವಾರದಂದು ಕೆಲಸ ಮಾಡಿದ್ದಕ್ಕೆ ವಿಶೇಷ ಸೌಲಭ್ಯವನ್ನು ಕೊಡುವುದಕ್ಕಾಗುತ್ತದೆಯೋ ಎಂದು ಕೇಳುತ್ತೇನೆ. ಈ ರೀತಿಯಾಗಿ ಇಗತಕ್ಕ ಅವರ ಸಣ್ಣಪುಟ್ಟ ಬೇಡಿಕೆಗಳನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಹಿಂದೆ ಮದ್ರಾಸ್ ಸರ್ಕಾರದವರು ರಜ ದಿನದಂದು ಕೆಲಸ ಮಾಡಿದವರಿಗೆ ೨ ರೂಪಾಯಿಗಳನ್ನು ವಿಶೇಷವಾಗಿ ಕೊಡುತ್ತಿದ್ದರು. ಆದರೆ ಇವತ್ತು ಆ ಒಂದು ಸೌಲಭ್ಯ ಕೂಡ ಇವರಿಗೆ ಇಲ್ಲವಾಗಿದೆ. ಇನ್ನು ರೂರಲ್ ಪೋಲೀಸ್ ಸ್ಟೇಷನ್‌ಗಳಿಂದ ಮಂಗಳೂರಿಗೆ ಹೋಗಿ ಅಲ್ಲಿ ಆರೂವರೆ ಗಂಟೆಗಳ ಕಾಲ ಕೆಲಸ ಮಾಡಿದರೆ ಮಾತ್ರ ಕೆಲವು ಸೌಕರ್ಯಗಳನ್ನು ಕೊಡಲಾಗುವುದು ಎಂದು ಇದೆ. ಆದರೆ ೧೧ ರಿಂದ ೫ ಗಂಟೆಯವರೆಗೆ ಕೋರ್ಟ್ ಎಂದರೆ ೬ ಗಂಟೆಯಾಗುತ್ತದೆ. ಆ ಕಾರಣದಿಂದ, ಅವರಿಗೆ ಬೇಕಾದ ಸೌಕರ್ಯಗಳು ಸಿಗುತ್ತಿಲ್ಲ. ಈ ರೀತಿಯಾಗಿ, ಪೋಲೀಸರ ಅನೇಕ ಬೇಡಿಕೆಗಳಿವೆ, ಸಂಬಳವನ್ನು ಹೆಚ್ಚು ಕೇಳುತ್ತಿದ್ದಾರೆ ಮತ್ತು ಇತರ ಅನೇಕ ಸಮಸ್ಯೆಗಳು ಕೂಡ ಇವೆ. ಇವುಗಳನ್ನೆಲ್ಲ ಅವರು ಯಾರ ಮೂಲಕ ಹೇಳಬೇಕು ಮತ್ತು ಹೇಗೆ ಹೇಳಬೇಕು ? ಇವುಗಳನ್ನೆಲ್ಲ ಅವರು ಮುಂದಿಟ್ಟುಕೊಂಡು ಏನಾದರೂ ಹೋರಾಟಕ್ಕೆ ನಿಂತರೆ ಪಂಜಾಬ್, ಮಧ್ಯ ಪ್ರದೇಶಗಳಲ್ಲಿ ನಡೆದಂತೆ ನಡೆಯುತ್ತದೆಂಬ ಮಾತನ್ನು ಹೇಳಬಯಸುತ್ತೇನೆ. ಆದ್ದರಿಂದ ಕರ್ನಾಟಕ ರಾಜ್ಯದಲ್ಲಿ ಪೋಲೀಸರ ಸಮಸ್ಯೆಗಳು ಏನು ಎಂಬುದನ್ನು ತೀವ್ರವಾಗಿ ಪರಿಶೀಲಿಸಿ ಅದಕ್ಕೆ ಬೇಕಾದ ಕ್ಷಿಪ್ರ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಇನ್ನು ಪೋಲೀಸರು ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಿರುವಾಗ ಮಧ್ಯೆ ರಾಜಕಾರಣಿಗಳು ಹಸ್ತಕ್ಷೇಪ ಮಾಡುತ್ತಾರೆ. ಇದು ಸಾಮಾನ್ಯವಾಗಿ ನಡೆಯುವಂತಹ ಸಂಗತಿ. ಉದಾಹರಣೆಗೆ ನಮ್ಮ ಊರಿನಲ್ಲಿ ಒಂದು ಘಟನೆ ನಡೆಯಿತು. ಒಬ್ಬ ರಾಜಕೀಯ ಪಕ್ಷದ ಕಾರ್ಯಕರ್ತನಿಗೆ ಪೋಲೀಸ್ ಸ್ಟೇಷನ್ನಿನಲ್ಲಿ ಅನುಕೂಲವಾಗಲಿಲ್ಲ. ಆಗ ಆತ ಪೋಲೀಸ್ ಸ್ಟೇಷನ್ನಿನೊಳಗೆ ಬಂದು ನಾನು ಜನಿವಾರ ಹಾಕಿದ ಬ್ರಾಹ್ಮಣನಾದರೆ ಈ ಸಬ್ ಇನ್ಸ್‌ಪೆಕ್ಟರನ್ನು ೧೫ ದಿವಸಗಳೊಳಗೆ ಟ್ರಾನ್ಸ್‌ಫರ್ ಮಾಡಿಸುತ್ತೇನೆ ಎಂದು ಪ್ರತಿಜ್ಞೆ ಮಾಡಿಹೋದ. ಆಗ ನಾವೆಲ್ಲ ಇವನಿಂದ ಏನು ಆಗಲಿಕ್ಕೆ ಇಲ್ಲವೆಂದು ಗ್ರಹಿಸಿದ್ದೆವು. ಆದರೆ ಕೇವಲ ೧೫ ದಿವಸಗಳೊಳಗೆ ಆ ಸಬ್ ಇನ್ಸ್‌ಪೆಕ್ಟರನ್ನು ವರ್ಗ ಮಾಡಿಸಿಯೇ ಬಿಟ್ಟ. ಹೀಗಾದರೆ ಅಲ್ಲಿ ಪೋಲೀಸರು ಹೇಗೆ ಕೆಲಸ ಮಾಡಬೇಕು? ನಾನು ಹೋಂ ಸೆಕ್ರೆಟರಿಯವರಿಗೆ ಕೂಡ ಈ ವಿಚಾರವನ್ನು ಪತ್ರ ಮುಖೇನ ತಿಳಿಸಿ ಏಕೆ ಹೀಗೆ ಆಯಿತೆಂದು ಕೇಳಿದ್ದಕ್ಕೆ ಇದುವರೆಗೆ ಉತ್ತರ ಸಿಗಲಿಲ್ಲ. ಇದರಿಂದ ಏನಾಗುತ್ತದೆಂದರೆ, ಇಡೀ ಪೋಲೀಸ್ ಇಲಾಖೆಯಲ್ಲೇ ದೈತ್ಯ ಕುಸಿಯುತ್ತದೆ, ನಿಷ್ಪಕ್ಷಪಾತವಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಒಮ್ಮೆ ಬಿ.ಸಿ. ರೋಡ್‌ನಲ್ಲಿ ಬೆಳ್ತಂಗಡಿಯಲ್ಲಿ ಸಬ್ ಇನ್ಸ್‌ಪೆಕ್ಟರನ್ನು ರಾತ್ರೋ ರಾತ್ರಿ ವೈರ್‌ಲೆಸ್ ಮೆಸೇಜ್ ಮೂಲಕ ವರ್ಗ ಮಾಡಿದರು. ಇದಕ್ಕೆಲ್ಲ ರಾಜಕೀಯ ಒತ್ತಡವೇ ಕಾರಣವಲ್ಲದೆ ಬೇರೆಯಲ್ಲ. ಈ ರೀತಿಯಾಗಿ ಒಬ್ಬ ಅಧಿಕಾರಿಯನ್ನು ರಾಜಕೀಯ ಒತ್ತಡದಿಂದ ವರ್ಗ

ಮಾಡುವುದಾದರೆ ಯಾವ ಅಧಿಕಾರಿಯು ನಿಷ್ಪಕ್ಷಪಾತವಾಗಿ ಕೆಲಸ ಮಾಡುವುವಕ್ಕೆ ಸಾಧ್ಯವಾಗುತ್ತದೆಂಬ ಪ್ರಶ್ನೆಯನ್ನು ಕೇಳುತ್ತೇನೆ. ಇವರಿಂದ ಪೋಲೀಸರ ಧೈರ್ಯ ಕುಸಿಯುತ್ತದೆ. ಅವರಿಗೆ ಸರಿಯಾದ ಯಾವುದೇ ಒಂದು ರೀತಿಯ ಫೇವರ್ ಅನ್ನು ತೋರಿಸದೆ ಕೆಲಸ ಮಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಡುತ್ತಿಲ್ಲ. ನಾವು ಸಾಮಾನ್ಯವಾಗಿ, ಭ್ರಷ್ಟಾಚಾರದ ಬಗ್ಗೆ ಬೇಕಾದಷ್ಟು ಕೇಳುತ್ತೇವೆ. ಎಷ್ಟರ ಮಟ್ಟಿಗೆ ಎಂದರೆ, ಒಮ್ಮೆ ಒಬ್ಬ ಹಳ್ಳಿಯವನು ಪೋಲೀಸ್ ಸ್ಟೇಷನ್ನಿಗೆ ಹೋದ, ಅಷ್ಟರಲ್ಲಿ ಅವನಿಗೆ ಯಾರೋ ಹೇಳಿದ್ದಾರೆ, ಅಲ್ಲಿ ದುಡ್ಡು ಕೊಡಬೇಕು ಇಲ್ಲದಿದ್ದರೆ ಕೆಲಸ ಆಗುವುದಿಲ್ಲ ಎಂದು, ಅಂತೆಯೇ ಆತ ಅಲ್ಲಿದ್ದ ಹೆಡ್ ಕಾನ್‌ಸ್ಟೇಬಲ್‌ಗೆ ೨ ರೂಪಾಯಿಗಳನ್ನು ಕೊಟ್ಟ, ಅದಕ್ಕೆ ಅವರು ಅದನ್ನು ಮುಟ್ಟುವುದಿಲ್ಲ ವೆಂದರು. ಅಂದಾಗ ಆ ಹಳ್ಳಿಯವನಿಗೆ ಖುಷಿಯಾಯಿತು, ದುಡ್ಡು ತೆಗೆದುಕೊಳ್ಳುವುದಿಲ್ಲ ವಲ್ಲ ಎಂದು, ಮನಸ್ಸಿನಲ್ಲೆ ಬಹಳ ಪ್ರಾಮಾಣಿಕರಿರಬೇಕು ಅಂದುಕೊಂಡ. ಆವರೂ ತೆಗೆದುಕೊಳ್ಳಬಹುದಲ್ಲ ಎಂದ ಅದಕ್ಕೆ ಅವರು ಛೇ, ಛೇ, ಅವಮಾನ ಮಾಡುತ್ತಿದ್ದೀಯ ಅಂದರಲ್ಲದೆ ನನ್ನ ಮೌಲ್ಯ ಎಷ್ಟೆಂದರೆ ನಾನು ೨೫ ರೂಪಾಯಿಗಳಿಗಿಂತ ಕಡಿಮೆ ಮುಟ್ಟುವುದಿಲ್ಲವೆಂದರು. ಹೀಗೆ ಯಾವ ಯಾವ ಲೆವಲ್‌ನಲ್ಲಿ ಯಾವರೀತಿ ನಡೆಯುತ್ತಿದೆ ಎಂಬುದನ್ನು ನೋಡಬೇಕು. ಈ ರೀತಿ ಏಕೆ ಆಗುತ್ತಿದೆ ಎಂದರೆ, ಹೋಟೆಲ್‌ಗಳಲ್ಲಿ ಇಡ್ಲಿಗೆ ಇಷ್ಟು, ದೋಸೆಗೆ ಇಷ್ಟು, ಪೂರಿಗೆ ಇಷ್ಟು ಎಂದು ಲಿಸ್ಟ್ ಹಾಕುವ ಹಾಗೆ ಸಬ್ ಇನ್ಸ್‌ಪೆಕ್ಟರ್ ನೇಮಕಕ್ಕೆ ೩೦ ಸಾವಿರ. ಇಂಜಿನಿಯರ್ ನೇಮಕಕ್ಕೆ ೨೫ ಸಾವಿರ, ತಹಶೀಲ್ದಾರರ ನೇಮಕಕ್ಕೆ ಇಷ್ಟು ಸಾವಿರ ಎಂದು ಲಿಸ್ಟ್ ಹಾಕುವುದು ಮಾತ್ರ ಬಾಕಿಯಾಗಿದೆಯೆಂಬ ಮಾತು ನಮ್ಮ ಊರಿನಲ್ಲಿ ಜನಜನಿತವಾಗಿದೆ. ಹೀಗೆ ಇಷ್ಟೊಂದು ಅಪಪ್ರಚಾರವಾಗುತ್ತದೆ. ಇಷ್ಟು ಹಣ ಕೊಟ್ಟು ಸಬ್ ಇನ್ಸ್‌ಪೆಕ್ಟರ್ ಹುದ್ದೆಯನ್ನು ಪಡೆದ ಮೇಲೆ ಆತ ಆ ಹಣವನ್ನು ಹೇಗೆ ಸಂಪಾದನೆ ಮಾಡಬೇಕೆಂಬುದಕ್ಕೆ ಒಂದು ಉದಾಹರಣೆ ಹೇಳುವುದಾದರೆ, ಒಮ್ಮೆ ಒಬ್ಬ ಲಾರಿ ಡ್ರೈವರ್ ಲಾರಿಯನ್ನು ತೆಗೆದುಕೊಂಡು ಹೋಗುತ್ತಿದ್ದ, ಆಗ ಮಧ್ಯ ದಾರಿಯಲ್ಲಿ ಒಬ್ಬ ಸಬ್ ಇನ್ಸ್‌ಪೆಕ್ಟರ್ ಚಕ್ಕಿಂಗ್‌ಗೋಸ್ಕರ ಡ್ರೈವಿಂಗ್ ಲೈಸೆನ್ಸ್, ಇನ್‌ಶ್ಯೂರೆನ್ಸ್ ಸರ್ಟಿಫಿಕೇಟ್ ಇತ್ಯಾದಿಗಳನ್ನೆಲ್ಲ ಕೇಳಲು ಆತ ಎಲ್ಲವನ್ನು ತೋರಿಸಿದ. ನಂತರ ಎಲ್ಲ ಸರಿಯಾಗಿದೆಯಲ್ಲವೆ, ನಾನು ಇನ್ನು ಹೊರಡಬಹುದಲ್ಲ ಎಂದಾಗ ೧೦ ರೂಪಾಯಿಗಳನ್ನು ಕೊಟ್ಟು ಹೋಗು ಎಂದರಂತೆ ಆ ಸಬ್ ಇನ್ಸ್‌ಪೆಕ್ಟರ್. ಆಗ ಆ ಡ್ರೈವರ್ ಏಕೆ ಎಂದು ಕೇಳಿದಾಗ ಸಬ್ ಇನ್ಸ್‌ಪೆಕ್ಟರ್ ಹೇಳಿದರು, ನೋಡು ನಾನು ತುಂಬ ವಿದ್ಯಾವಂತ, ನಾನು ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದೇನೆ. ಸಬ್ ಇನ್ಸ್‌ಪೆಕ್ಟರ್ ಆಗಲಿಕ್ಕೆ ಬೇಕಾದ ಎಲ್ಲ ಯೋಗ್ಯತೆಗಳು ಇದ್ದರೂ ಕೂಡ ನನಗೆ ಕೆಲಸ ದೊರೆಯಬೇಕಾದರೆ ೩೦ ಸಾವಿರ ರೂಪಾಯಿಗಳನ್ನು ಕೊಟ್ಟು ಬಂದಿದ್ದೇನೆ ಹೀಗೆ ಎಲ್ಲ ಸರಿಯಿದ್ದರು ನಾನು ೩೦ ಸಾವಿರ ರೂಪಾಯಿಗಳನ್ನು ಕೊಟ್ಟು ಬರಬೇಕಾಯಿತು. ಆದ್ದರಿಂದ, ಎಲ್ಲ ಸರಿಯಿದ್ದರೂ ನೀನು ಏಕೆ ೧೦ ರೂಪಾಯಿಗಳನ್ನು ಕೊಡಬಾರದೆಂದು ಕೇಳಿದರಂತೆ. ಈ ರೀತಿಯಾಗಿ ವ್ಯವಹಾರಗಳು ಶುರುವಾಗುತ್ತವೆ. ಅವರು ೩೦ ಸಾವಿರ ರೂಪಾಯಿಗಳನ್ನು ಕೊಟ್ಟರೆ ಅದನ್ನು ಭರ್ತಿ ಮಾಡುವುದಾದರೂ ಹೇಗೆ? ಅದಕ್ಕೆ ಏನಾದರೂ ಒಂದು ಮಾರ್ಗವನ್ನು ಹುಡುಕುತ್ತಾರೆ. ಆ ಡ್ರೈವರ್ ಕೂಡ ೧೦ ರೂಪಾಯಿಗಳನ್ನು ಕೊಟ್ಟಿದ್ದಕ್ಕೆ ಧನಿಗಳಿಗೆ ಟೋಪಿ ಹಾಕಿ ಭರ್ತಿ ಮಾಡುತ್ತಾನೆ. ಈ ರೀತಿಯಾಗಿ ಭ್ರಷ್ಟಾಚಾರ ಕೆಳಗಿನಿಂದ ಮೇಲಿನವರೆಗೆ ನಡೆಯುತ್ತಿದೆ. ತಾವು ಇದನ್ನು ತಡೆಗಟ್ಟಬೇಕು. ಈ ರೀತಿಯಾಗಿ ಭ್ರಷ್ಟಾಚಾರ ಎಲ್ಲ ಇಲಾಖೆಗಳಲ್ಲೂ ನಡೆಯುತ್ತಿದೆ, ಅದರಲ್ಲೂ ಪೋಲೀಸ್ ಇಲಾಖೆಯಲ್ಲಿ ಇದು ಸರ್ವೇ ಸಾಮಾನ್ಯವಾದ ಸಂಗತಿ. ಹಾಗೆ ಆಗಲಿಕ್ಕೆ ಕಾರಣಗಳೇನೆಂದರೆ, ಈ ರೀತಿ ಮಾಮೂಲಿಯಾಗಿ ಆಗುವಂತಹ ತೊಂದರೆಗಳು ಎಂಬ ಅಭಿಪ್ರಾಯವನ್ನು ನಾನು ವ್ಯಕ್ತ ಮಾಡುತ್ತೇನೆ. ಆದಕಾರಣ ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತೀವ್ರವಾಗಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ಪೋಲೀಸರು ಇನ್‌ವೆಸ್ಟಿಗೇಷನ್ ಮಾಡುವ ಬಗ್ಗೆ ಹೇಳುವುದಾದರೆ ಇಂಗ್ಲೆಂಡ್, ಅಮೆರಿಕಾಗಳಲ್ಲಿ ಹೇಗೆ ಮಾಡುತ್ತಾರೆಂಬುದನ್ನು ನಾವು ಕಥೆಗಳಲ್ಲಿ ಓದಿದ್ದು ಜ್ಞಾಪಕ ಇದೆ. ಆದರೆ ನಮ್ಮಲ್ಲಿ ಏನು ಮಾಡುತ್ತಾರೆಂದರೆ, ಒಬ್ಬ ಅಪರಾಧಿಯನ್ನು ಹುಡುಕ ಬೇಕಾದರೆ ನೂರು ಜನರ ಬೆನ್ನು ಪುಡಿಯಾಗುತ್ತದೆ. ಯಾವ ಯಾವ ತರಹದ ಶಿಕ್ಷೆಗಳನ್ನು ಕೊಡುತ್ತಾರೆಂಬುದು ಪತ್ರಿಕೆಗಳಲ್ಲಿ ಬಂದಿದೆ. ನಿನ್ನೆ ಕೂಡ ಅನೇಕ ಮಂದಿ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ನಾನಾ ರೀತಿಯ ಘೋರವಾದ ಕಣ್ಣಲ್ಲಿ ನೀರು ಬರಿಸುವ ರೀತಿಯಲ್ಲಿ ಚಿತ್ರ ಹಿಂಸೆಗಳನ್ನು ಕೊಡುತ್ತಾರೆ. ಒಬ್ಬ ನಿರಪರಾಧಿ ಯೋಗ್ಯ ವ್ಯಕ್ತಿ ಪೋಲೀಸ್ ಸ್ಟೇಷನ್‌ನಲ್ಲಿ ತಲೆ ಎತ್ತುವಂತಿಲ್ಲ, ಅಲ್ಲಿ ಮೊದಲು ತೆಗೆಯುವುದೇ ಅವಾಚ್ಯ ಶಬ್ದ. ಆ ಶಬ್ದವನ್ನು ಇಲ್ಲಿ ಹೇಳಲು ಮಾನ್ಯ ಅಧ್ಯಕ್ಷರು ಅನುಮತಿ ಕೊಟ್ಟರೆ ಹೇಳುತ್ತೇನೆ. ಪೋಲೀಸ್ ಭಾಷೆಯ ಪದವಾದ 'ಬೋಳೀ ಮಗನೇ' ಎಂಬ ಮಾತು ಮೊದಲು ಕೇಳಿಬರುತ್ತದೆ. ಈ ರೀತಿಯಲ್ಲಿ

ಒಬ್ಬ ಗೌರವಾನ್ವಿತ ವ್ಯಕ್ತಿ ಕಾರಣಾಂತರಗಳಿಂದ ಪೋಲೀಸ್‌ಸ್ಟೇಷನ್‌ಗೆ ಹೋಗಬೇಕಾಗುತ್ತದೆ. ಅಲ್ಲಿಗೆ ಹೋದರೆ ಸಾಮಾನ್ಯ ಜನಕ್ಕೆ ಬ್ಯಯ್ಯತಕ್ಕಂಥ ತುಚ್ಛ ಮಾತುಗಳನ್ನು ಅವರು ಕೇಳಬೇಕಾಗುತ್ತದೆ. ಇದನ್ನು ತಾವು ಬದಲಾವಣೆ ಮಾಡಬೇಕು. ನಿಜವಾದ ಅಪರಾಧಿಯನ್ನು ಸೈನ್‌ಟಿಫಿಕ್ ಮೆತಡ್ಸ್ ಮೂಲಕ ಹುಡುಕುವುದಕ್ಕೆ ವ್ಯವಸ್ಥೆ ಮಾಡದೇಹೋದರೆ ನೂರಾರು ಜನ ನಿರಪರಾಧಿಗಳನ್ನು ಪೋಲೀಸ್ ಸ್ಟೇಷನ್‌ಗಳಲ್ಲಿ ಚೆನ್ನಾಗಿ ಹೊಡೆದು ಬಾಯಿಬಿಡಿಸತಕ್ಕಂಥ ಮಾರ್ಗವನ್ನು ಅವರು ಅನುಸರಿಸುತ್ತಾರೆ. ಇವತ್ತಿನದಿವಸ ಈ ರೀತಿಯ ಒಂದು ಅನುಭವ ನಮ್ಮ ದೇಶದಲ್ಲಿ ಆಗುತ್ತಾ ಇದೆ. ಇದನ್ನು ಆದಷ್ಟು ಬೇಗ ತೊಡೆದು ಹಾಕಿದರೆ ಕ್ಷೇಮ. ಈ ದೃಷ್ಟಿಯಲ್ಲಿ ತಾವು ವಿಚಾರ ಮಾಡಿ ಪೋಲೀಸ್ ಸಿಬ್ಬಂದಿಯವರಿಗೆ ಅಪರಾಧ ತನಿಖೆಯ ಬಗ್ಗೆ ಯೋಗ್ಯ ಶಿಕ್ಷಣವನ್ನು ಕೊಟ್ಟು ಅವರು ಅಪರಾಧಿಗಳನ್ನು ಕಂಡುಹಿಡಿಯುವಲ್ಲಿ ಸೈನ್ಸ್‌ಟಿಫಿಕ್ ಮೆತಡ್‌ಗಳನ್ನು ಅಳವಡಿಸಿಕೊಳ್ಳುವ ಹಾಗೆ ಮಾಡಬೇಕು.

ಇನ್ನು ನಾನು ರಾಜ್ಯದ ಅಗ್ನಿಶಾಮಕದಳದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಈಗಿರತಕ್ಕಂಥ ನಿಯಮಗಳ ಪ್ರಕಾರ ಅಗ್ನಿಶಾಮಕದಳದವರು ಜಿಲ್ಲಾಕೇಂದ್ರದಿಂದ ೩೦–೪೦ ಕಿಲೋಮೀಟರ್‌ಗಳ ದೂರದ ಒಳಗೆ ಬೆಂಕಿ ಅನಾಹುತವಾದರೆ ಮಾತ್ರ ಬರುತ್ತಾರೆ. ಇಲ್ಲದಿದ್ದರೆ ಇಲ್ಲ. ನಮ್ಮ ಊರಿನಲ್ಲಿ ೨ ಮನೆಗಳು ಸಂಪೂರ್ಣವಾಗಿ ಬೆಂಕಿಗೆ ಆಹುತಿಯಾದವು. ಅಗ್ನಿಶಾಮಕದಳದವರಿಗೆ ಮನೆಗಳಿಗೆ ಬೆಂಕಿ ಹತ್ತಿಕೊಂಡ ತಕ್ಷಣ ಫೋನ್ ಮಾಡಿದಾಗ 'ಅಲ್ಲಿಗೆ ಬರುವುದಕ್ಕಾಗುವುದಿಲ್ಲ' ಎಂದು ಉತ್ತರ ಬಂತು. ಅವರು ಫೋನ್ ಮಾಡಿದ ತಕ್ಷಣ ಬಂದಿದ್ದರೆ ಲಕ್ಷಾಂತರ ರೂಪಾಯಿಗಳ ಸ್ವತ್ತುಗಳನ್ನು ಉಳಿಸಬಹುದಾಗಿತ್ತು. ಏತಕ್ಕೆ ಅಲ್ಲಿಗೆ ಬರುವುದಕ್ಕಾಗುವುದಿಲ್ಲ ಎಂದು ಅವರನ್ನು ನಾನು ಬರಹ ಮೂಲಕ ಕೇಳಿದಾಗ '೪೦ ಕಿಲೋಮೀಟರ್‌ಗಳ ಮೇಲೆ ನಾವು ಬರುವುದಿಲ್ಲ, ರೂಲ್ಸ್ ಆರೀತಿ ಇದೆ' ಎಂದು ಹೇಳಿದರು. ಇಲ್ಲಿ ಏನಾಗುತ್ತದೆ ಎಂದರೆ ಸಾರ್ವಜನಿಕರ ಸ್ವತ್ತು ಬೆಂಕಿಗೆ ಆಹುತಿಯಾಗುವಾಗ ಅವರು ಈ ಒಂದು ನಿಯಮಗಳನ್ನು ಪಾಲಿಸುತ್ತಾರೆ. ಆದರೆ ಸರ್ಕಾರದ ಸ್ವತ್ತುಗಳು ಬೆಂಕಿಗೆ ಆಹುತಿಯಾಗುವಾಗ ಎಲ್ಲಿಗಾದರೂ ಕರೆದರೆ ಬರುತ್ತಾರೆ. ಈ ರೀತಿ ಆಗಬಾರದು. ಈ ನಿಯಮವನ್ನು ತಾವು ಸಡಿಲಗೊಳಿಸಬೇಕು. ಮತ್ತು ಪ್ರತಿಯೊಂದು ತಾಲ್ಲೂಕಿನಲ್ಲೂ ಸಹ ಒಂದೊಂದು ಅಗ್ನಿಶಾಮಕದಳವನ್ನು ಸ್ಥಾಪನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಮೈನ್ಸ್ ಅಂಡ್ ಜಿಯೊಲಜಿ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುತ್ತೇನೆ. ಎಲ್ಲಿಯಾದರೂ ಬೋರ್‌ವೆಲ್‌ಗಳನ್ನು ತೆಗೆಯಬೇಕಾದರೆ ರಿಗ್‌ಮ್ಯಾನ್‌ಗಳು ಬಹಳ ಕಷ್ಟಪಟ್ಟು ಕೆಲಸ ಮಾಡಬೇಕಾಗುತ್ತದೆ. ಅವರ ಸರ್ವೀಸ್ಸ್ ಅನ್ನು ರೆಗ್ಯುಲರೈಸ್ ಮಾಡಬೇಕೆಂದು ನಾವು ಕಳೆದ ಅಧಿವೇಶನದಲ್ಲಿ ಒಂದು ಸ್ಟಾರ್ಡ್ ಕೊಶ್ಚನ್ ಹಾಕಿದಾಗ ಸರ್ಕಾರದವರು ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದರು. ಆದರೂ ಇಲ್ಲಿಯವರಿಗೆ ಸರ್ಕಾರದವರು ಅವರ ಸರ್ವೀಸಸ್ ಅನ್ನು ರೆಗ್ಯುಲರೈಸ್ ಮಾಡದೇ ಅದನ್ನು ಮುಂದೆ ಮುಂದಕ್ಕೆ ಹಾಕಿಕೊಂಡು ಹೋಗುತ್ತಿದ್ದಾರೆ. ಆ ರಿಗ್‌ಮ್ಯಾನ್‌ಗಳು ಮಳೆಯಲ್ಲಿ ಬಿಸಿಲಿನಲ್ಲಿ ಗುಡ್ಡಗಾಡುಗಳಲ್ಲಿ ಕೆಲಸಮಾಡುತ್ತಾರೆ, ಅವರಿಗೆ ಒಂದು ರೈನ್‌ಕೋಟ್ ಕೊಟ್ಟಿಲ್ಲ, ಹ್ಯಾಟ್ ಕೊಟ್ಟಿಲ್ಲ, ಷ್ಯೂಸ್ ಕೊಟ್ಟಿಲ್ಲ. ಅದೂ ಅಲ್ಲದೇ ಅವರಿಗೆ ದಿವಸಕ್ಕೆ ೫ರೂ ೫೦ ಪೈಸೆ ಸಂಬಳ ಕೊಡುತ್ತಿದ್ದಾರೆ. ಇವೆಲ್ಲಾ ಅನುಕೂಲಗಳನ್ನು ಮಾಡಿಕೊಡುವ ಬಗ್ಗೆ ಮತ್ತು ಅವರ ಸಂಬಳವನ್ನು ಹೆಚ್ಚು ಮಾಡುವ ಬಗ್ಗೆ ಅವರು ಬೇಡಿಕೆಯನ್ನು ತಮ್ಮ ಮುಂದೆ ಈಗಾಗಲೇ ಇಟ್ಟಿದ್ದಾರೆ. ಅವರ ಬೇಡಿಕೆಯನ್ನು ತಾವು ಆದಷ್ಟುಬೇಗ ಪೂರೈಸಬೇಕು ಎಂದು ಹೇಳುತ್ತೇನೆ. ಇನ್ನೊಂದು ವಿಚಾರವೇನೆಂದರೆ ನಮ್ಮ ಸುಳ್ಯ ತಾಲ್ಲೂಕಿನ ಬಂಟಮಲೆ ಪ್ರದೇಶದಲ್ಲಿ ಶೇಕಡ ೭೦ರಷ್ಟು ಅಲ್ಯೂಮಿನಿಯಂ ಖನಿಜ ಇರತಕ್ಕಂಥ ಲೋಹಗಳ ನಿಕ್ಷೇಪ ಇದೆಯೆಂದು ಜನರು ಹೇಳುತ್ತಾರೆ. ಈ ಅಲ್ಯೂಮಿನಿಯಂ ಖನಿಜದ ಲೋಹದ ತುಂಡನ್ನು ಇಲ್ಲಿಗೆ ತಂದಿದ್ದೇನೆ, ಇದನ್ನು ತಮ್ಮ ಕಡೆಗೆ ಕಳಿಸಿಕೊಡುತ್ತೇನೆ. ಈ ಬಗ್ಗೆ ನನಗೂ ಗೊತ್ತಿಲ್ಲ ನಾನೇನು ತಜ್ಞನೂ ಅಲ್ಲ. ನಾನು ಅಲ್ಲಿಗೆ ಒಂದು ಫಂಕ್ಷನ್‌ಗೆ ಹೋಗಿದ್ದಂಥ ಸಂದರ್ಭದಲ್ಲಿ ತಮಗೆ ತೋರಿಸಲೆಂದು ನನಗೆ ಕೊಟ್ಟರು. ಈ ಒಂದು ನಿಕ್ಷೇಪ ಅಲ್ಲಿ ಇರುವುದಾದರೆ ಅದು ನಮ್ಮ ಸುಳ್ಯ ತಾಲ್ಲೂಕಿನ ಚರಿತ್ರೆಯನ್ನೇ ಬದಲಾಯಿಸುತ್ತದೆ, ಸಾವಿರಾರು ಜನರಿಗೆ ಉದ್ಯೋಗವನ್ನು ಒದಗಿಸುತ್ತದೆ, ಆದರಿಂದ ನಮ್ಮ ದೇಶಕ್ಕೆ ಬೇಕಾಗತಕ್ಕಂಥ ಸಂಪತ್ತನ್ನು ಸಂಗ್ರಹಿಸಿಕೊಳ್ಳಲು ಅನುಕೂಲವಾಗುತ್ತದೆ. ಕ್ಷಿಪ್ರಗತಿಯಲ್ಲಿ ತಾವು ಈ ಅಲ್ಯೂಮಿನಿಯಂ ಖನಿಜವನ್ನು ಸದುಪಯೋಗಪಡಿಸಿಕೊಳ್ಳುವ ಬಗ್ಗೆ ಪ್ರಯತ್ನ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಒಂದು ಭಾಗದಲ್ಲಿ ಬೋರ್‌ವೆಲ್‌ನ್ನು ತೆಗೆಯುವಾಗ ಕೆಲವು ನಿಯಮಗಳನ್ನು ಹಾಕಿಕೊಂಡಿರುತ್ತಾರೆ. ಅದೇನೆಂದರೆ

ಒಂದು ಬೋರ್‌ವೆಲ್ಲನ್ನು ತೆಗೆದಾಗ ಅದು ಫೈಲ್ಯೂರ್ ಆಯಿತು ಎಂದರೆ ಇನ್ನೊಂದು ಬೋರ್‌ವೆಲ್ ತೆಗೆಯಬೇಕೆಂಬ ನಿಯಮ ಇದೆ. ಆದರೆ ತಮ್ಮ ಡಿಪಾರ್ಟ್‌ಮೆಂಟ್‌ನವರು ಈ ನಿಯಮವನ್ನು ಪಾಲಿಸುತ್ತಾ ಇಲ್ಲ. ಒಂದು ಗಂಟೆಗೆ ನೂರು ಗ್ಯಾಲನ್‌ಗಳಷ್ಟು ನೀರು ಸಿಕ್ಕಿದರೂ 'ಸಕ್ಸಸ್‌ಫುಲ್' ಎಂದು ನಿರ್ಧಾರ ಮಾಡುತ್ತಾರೆ. ಬೇರೆ ಬೋರ್‌ವೆಲ್‌ಗಳನ್ನು ತೆಗೆಯುವುದಿಲ್ಲ. ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿದೆ. ಈ ಬಗ್ಗೆ ತಾವು ತಮ್ಮ ಡಿಪಾರ್ಟ್‌ಮೆಂಟ್‌ನವರಿಗೆ ಸೂಕ್ತ ನಿರ್ದೇಶನ ಕೊಟ್ಟು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ನಾನು ಜೈಲ್ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಸರ್ಕಾರದವರು ಇವತ್ತು ಬೆಂಗಳೂರಿನಲ್ಲಿರುವ ಸೆಂಟ್ರಲ್ ಜೈಲನ್ನು ೧ ಕೋಟಿ ೯೦ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಬೇರೆ ಕಡೆಗೆ ಸ್ಥಳಾಂತರಿಸುವುದಕ್ಕೆ ಒಂದು ಯೋಜನೆ ಹಾಕಿಕೊಂಡಿದ್ದಾರೆ. ಇವತ್ತು ಇದನ್ನು ಸ್ಥಳಾಂತರಿಸುವ ಅಗತ್ಯವೇನಿದೆ ಎಂದು ತಮ್ಮನ್ನು ಕೇಳಬಯಸುತ್ತೇನೆ. ಇವತ್ತು ನಾವು ನಮ್ಮ ಭಾಗಕ್ಕೆ ರಸ್ತೆಯನ್ನು ಮಾಡಿಕೊಡಿ ಎಂದು ಕೇಳಿದರೆ ದುಡ್ಡು ಇಲ್ಲ ಎಂದು ಹೇಳುತ್ತೀರಿ, ಒಂದು ಆಸ್ಪತ್ರೆಯನ್ನು ಕಟ್ಟಿಕೊಡಿ ಎಂದರೆ ಅದಕ್ಕೂ ದುಡ್ಡು ಇಲ್ಲವೆಂದು ಹೇಳುತ್ತೀರಿ. ನಮ್ಮ ಪುತ್ತೂರಿನಲ್ಲಿ ಒಂದು ಬೈಪಾಸ್‌ರೋಡ್ ಮಾಡಿಕೊಡಿ ಎಂದು ಮಾನ್ಯ ಬಂಗಾರಪ್ಪನವರನ್ನು ನಾನು ಕೇಳಿದಾಗ ಅವರು ದುಡ್ಡು ಇಲ್ಲ ಎಂದು ಹೇಳಿದರು. ಇಂತಹ ಪರಿಸ್ಥಿತಿ ಇರುವಾಗ ೧ ಕೋಟಿ ೯೦ಲಕ್ಷರೂಪಾಯಿಗಳ ವೆಚ್ಚದಲ್ಲಿ ಬೆಂಗಳೂರು ಸೆಂಟ್ರಲ್ ಜೈಲನ್ನು ಸ್ಥಳಾಂತರಿಸುವಂಥ ಅಗತ್ಯ ಏನಿದೆ ಎಂಬುದರ ಬಗ್ಗೆ ಸರ್ಕಾರದವರು ಉತ್ತರ ಕೊಡಬೇಕು ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ನಾನು ಸಲಹೆ ಕೊಡುವುದೇನೆಂದರೆ ಬೆಂಗಳೂರು ಸೆಂಟ್ರಲ್ ಜೈಲನ್ನು ಈಗಿರತಕ್ಕಂಥ ಸ್ಥಳದಲ್ಲೇ ಅದು ಇರುವುದಕ್ಕೆ ಬಿಟ್ಟು, ಅದನ್ನು ಸ್ಥಳಾಂತರ ಮಾಡುವುದಕ್ಕೆ ಇಟ್ಟುಕೊಂಡಿರತಕ್ಕಂಥ ಹಣವನ್ನು ಬೇರೆ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಿ ಕೊಳ್ಳಬೇಕು ಎಂದು ಹೇಳುತ್ತೇನೆ. ನಮ್ಮ ಪುತ್ತೂರ್‌ನಲ್ಲಿ ಒಂದು ಜೈಲ್ ಉಂಟು ಅದರಲ್ಲಿ ೨ ರೂಮುಗಳು ಇದೆ. ಅಲ್ಲಿ ಸರಿಯಾದ ಗಾಳಿ, ಬೆಳಕಿನ ವ್ಯವಸ್ಥೆ ಇಲ್ಲ. ಅದಕ್ಕೆ ಒಂದು ಕಡೆ ಮಾತ್ರ ಎನ್‌ಟ್ರಾನ್ಸ್ ಇದೆ. ಇದರಿಂದ ಕೈದಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಅದರಲ್ಲಿ ಮನುಷ್ಯ ಜೀವಂತವಾಗಿ ಬದುಕಬೇಕಾದರೆ ಅದರ ದುರಸ್ತಿ ಕೆಲಸವನ್ನು ಮಾಡಬೇಕು. ಹೀಗೆ ತಾವು ಈ ಬೆಂಗಳೂರು ಸೆಂಟ್ರಲ್ ಜೈಲನ್ನು ೧ ಕೋಟಿ ೯೦ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಬೇರೆಕಡೆಗೆ ಸ್ಥಳಾಂತರಿಸುವ ಯೋಜನೆಯನ್ನು ಕೈಬಿಟ್ಟು ರೂರಲ್ ಏರಿಯಾದಲ್ಲಿ, ತಾಲ್ಲೂಕು ಏರಿಯಾದಲ್ಲಿ ಇರತಕ್ಕಂಥ ಪೋಲೀಸ್ ಲಾಕಪ್‌ಗಳನ್ನು ಸುವ್ಯವಸ್ಥಿತಗೊಳಿಸುವುದಕ್ಕೆ ಮತ್ತು ಈ ಜೈಲುಗಳನ್ನು ಸುಧಾರಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನೀರಾವರಿಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ನದಿಗಳು ಹರಿಯುತ್ತಿದೆ. ನಮ್ಮ ಕಡೆ ನೀರು ಯಥೇಚ್ಛವಾಗಿದೆ. ನಮ್ಮ ಜಿಲ್ಲೆಯಲ್ಲಿ ಹರಿಯುವಂಥ ದೊಡ್ಡ ದೊಡ್ಡ ನದಿಗಳಿಗೆ ಅಣೆಕಟ್ಟು ಕಟ್ಟಿ ಅದರಿಂದ ವಿದ್ಯುಚ್ಛಕ್ತಿಯನ್ನು ತಯಾರು ಮಾಡುವುದನ್ನು ಯಾವರೀತಿ ಮಾಡುತ್ತೀರಿ ಎಂದು ನಾವು ಪ್ರಶ್ನೆ ಕೇಳಿದ್ದೇವೆ. ಅದಕ್ಕೆ ಸರ್ಕಾರದವರಿಂದ ಉತ್ತರಸಿಕ್ಕಿಲ್ಲ. ಇದರ ಬಗ್ಗೆ ಯಾವರೀತಿ ಯೋಜನೆ ಮಾಡುತ್ತೀರಿ ಎಂಬುದನ್ನು ತಾವು ತಿಳಿಸಬೇಕು ಎಂದು ಹೇಳುತ್ತೇನೆ.

ಮಾನ್ಯ ಕಡಿದಾಳ್ ದಿವಾಕರ್‌ರವರು ಆಫೀಸಿನ ಅನುಭವದ ಬಗ್ಗೆ ಒಂದು ಮಾತನ್ನು ಹೇಳಿದರು. ಅದರಂತೆ ನಾನು ನನ್ನ ಅನುಭವವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಎಂ.ಎಲ್.ಎ. ಆಗುವುದಕ್ಕಿಂತ ಮುಂಚೆ ಒಂದು ಸಾರಿ ಇಲ್ಲಿಗೆ ಬಂದಿದ್ದೆ ನನಗೆ ಆಗ ಬೆಂಗಳೂರಿನ ಪರಿಚಯ ಇರಲಿಲ್ಲ. ನಾನು ಫಸ್ಟ್ ಫ್ಲೋರ್‌ಗೆ ಬಂದು, ನನ್ನ ಕೆಲಸಕ್ಕೆ ಸಂಬಂಧಪಟ್ಟಂಥ ಕ್ಲರ್ಕನ್ನು ಕಾಣಬೇಕೆಂದು ಒಬ್ಬರನ್ನು ಕೇಳಿದಾಗ ಅವರು ಒಂದು ಮಾತನ್ನೂ ಆಡದೇ ಹೆಬ್ಬೆಟ್ಟಿನಿಂದ ಮೇಲೆ ಹೋಗುವಂತೆ ತೋರಿಸಿದರು. ಆನಂತರ ನಾನು ೨ನೇ ಮಹಡಿಗೆ ಹೋದೆ, ಒಬ್ಬರ ಹತ್ತಿರ ಕೇಳಿದೆ, ಅವರೂ ಕೂಡ ಒಂದು ಮಾತೂ ಆಡದೇ ಹೆಬ್ಬೆಟ್ಟಿನಿಂದ ಮೇಲೆ ಹೋಗಿ ಎಂದು ತೋರಿಸಿದರು. ಹಾಗೆ ೩ನೇ ಮಹಡಿಗೆ ಬಂದು ಸಂಬಂಧಪಟ್ಟ ಕ್ಲರ್ಕನ್ನು ಲೊಕೇಟ್ ಮಾಡಬೇಕಾದರೆ ನನಗೆ ಅರ್ಧಗಂಟೆ ಬೇಕಾಯಿತು. ಅಲ್ಲಿಗೆ ಹೋದನಂತರ ಸಂಬಂಧಪಟ್ಟ ಫೈಲನ್ನು ಲೊಕೇಟ್ ಮಾಡಬೇಕಾದರೆ ಪುನಃ ಅರ್ಧ ಗಂಟೆ ಹಿಡಿಯಿತು. ಆಮೇಲೆ ಅದಕ್ಕೆಲ್ಲ ಬರೆದುಕಳುಹಿಸಿದ್ದೇವೆ, ನೀವು ಅಲ್ಲಿಗೆ ಹೋಗಿ ವಿಚಾರಿಸಿ ಎಂದು ಹೇಳಿದರು. ಅಲ್ಲಿ ಹೋಗಿ ಕೇಳಿದರೆ, ಸೆಕ್ರೆಟರಿಯೇಟ್‌ನಿಂದ ನಮಗೆ ಏನೂ ಬಂದಿಲ್ಲವೆಂದು ಹೇಳುತ್ತಾರೆ. ಆಮೇಲೆ

ನಾನು ಇಲ್ಲಿ ಬಂದು ರವಾನೆ ವಿಭಾಗದಲ್ಲಿ ವಿಚಾರಿಸಿದರೆ, ಅಲ್ಲಿ ಎಂಟ್ರಿಯೇ ಇಲ್ಲ. ನಮ್ಮ ಗತಿಯೇ ಹೀಗಾದರೆ ಇನ್ನು ಸಾಮಾನ್ಯ ಜನರ ಗತಿ ಏನಾಗುತ್ತದೆಂಬುದನ್ನು ಮಾನ್ಯ ಸಚಿವರು ಯೋಚಿಸಿ, ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈಗ ನಾನು ಶಾಸಕನಾದುದರಿಂದ, ಅಂತಹ ತೊಂದರೆ ಏನಾಗುತ್ತಿಲ್ಲ. ಆದರೆ ಶಾಸಕರಲ್ಲ ಸಾಮಾನ್ಯ ಜನರ ಗತಿ ಏನು? ಆದುದರಿಂದ, ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಣ್ಣ ನೀರಾವರಿ ಸಚಿವರಾದ ಶ್ರೀಮಾನ್ ಚಂದ್ರೇಗೌಡರು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಇಟ್ಟಿರುವ ಬೇಡಿಕೆಗಳ ಮೇಲೆ ಕೆಲವು ಮಾತುಗಳನ್ನು ಬೆಂಬಲಪೂರ್ವಕವಾಗಿ ಹೇಳಲು ನಿಂತಿದ್ದೇನೆ ಮೊದಲು ಸಣ್ಣ ನೀರಾವರಿ ಕುರಿತು ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಸುಮಾರು ಇಪ್ಪತ್ತೈದು ಸಾವಿರ ಸಣ್ಣ ಕೆರೆಗಳಿವೆ. ಇದಲ್ಲದೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಅಧೀನದಲ್ಲಿ ಸುಮಾರು ೧೭,೫೧೩ ಕೆರೆಗಳಿವೆ. ಇವುಗಳ ಸ್ಥಿತಿ ಏನಾಗಿದೆ ಎಂದರೆ. ಸುಮಾರು ಒಂದು ತಾಲ್ಲೂಕಿನಲ್ಲಿ ಮೂವತ್ತೈದು ಕೆರೆಗಳಿದ್ದರೆ. ಅವುಗಳಿಗಾಗಿ ಸುಮಾರು ಆರು ಸಾವಿರ ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಈ ಹಣದಲ್ಲಿ ಕೆರೆಗಳನ್ನು ದುರಸ್ತು ಮಾಡುವುದಕ್ಕೇ ಆಗುವುದಿಲ್ಲ. ತಾಲ್ಲೂಕು ಬೋರ್ಡಿನವರು ಕೆರೆಗಳ ಆಡಳಿತವನ್ನು ಚೆನ್ನಾಗಿ ನಡೆಸಬೇಕಾದರೆ, ಅವುಗಳನ್ನು ಚೆನ್ನಾಗಿ ದುರಸ್ತು ಮಾಡಿಸಬೇಕಾದರೆ ಸರ್ಕಾರದವರು ಹೆಚ್ಚಿಗೆ ಹಣ ಕೊಡಬೇಕಾಗುತ್ತದೆ. ಇಲ್ಲದೆ ಹೋದರೆ, ಆ ಕೆರೆಗಳನ್ನು ಸರ್ಕಾರವೇ ತನ್ನ ಅಧೀನಕ್ಕೆ ವಾಪಸ್ಸು ತೆಗೆದುಕೊಳ್ಳುವುದು ಸೂಕ್ತವೆಂದು ಹೇಳಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಎಲ್ಲ ಕೆರೆಗಳಿಂದ ಸುಮಾರು ಎಂಟು ಲಕ್ಷ ಹೆಕ್ಟೇರು ಭೂಮಿಗೆ ನೀರುಣಿಸಲಾಗುತ್ತಿದೆ. ಇಷ್ಟೆಲ್ಲ ಇದ್ದರೂ, ಇಂದು ಅನೇಕ ಕೆರೆಗಳ ದುರಸ್ತು ಕಾರ್ಯವಾಗಬೇಕಾಗಿದೆ. ಮಾನ್ಯ ಚಂದ್ರೇಗೌಡರು ರಾಜ್ಯಾದ್ಯಂತ ಸಂಚಾರ ಮಾಡಿ, ಕೆರೆಗಳ ಸ್ಥಿತಿಗತಿಯನ್ನು ನೋಡಿಕೊಂಡು ಬಂದಿದ್ದಾರೆ, ಕೆಲವು ಸಂದರ್ಭಗಳಲ್ಲಿ ಕೆರೆಯು ಏರಿ ಒಡೆದಿದ್ದರೆ ಅಥವಾ ತೂಬು ಹಾಳಾಗಿದ್ದರೆ ಅದನ್ನು ದುರಸ್ತು ಮಾಡುವುದು ಬಹಳ ಕಡಿಮೆ. ಇದು ವಿಷಾದದ ಸಂಗತಿ ಸಣ್ಣ ನೀರಾವರಿ ಖಾತೆಯು ಸಮರ್ಪಕವಾಗಿ ನಡೆಯಬೇಕಾದರೆ, ಸ್ಥಳೀಯ ಅಧಿಕಾರಿಗಳು ಮೊದಲು ಹೆಚ್ಚಿಗೆ ಗಮನ ಕೊಟ್ಟು ಕೆಲಸ ಮಾಡಬೇಕಾಗಿದೆ. ಆದರೆ ಇವತ್ತಿನ ದಿವಸ ಏನಾಗಿದೆ ಎಂದರೆ, ಕೆರೆಯು ಏರಿ ಒಡೆದಿದ್ದರೆ ಅಥವಾ ತೂಬು ಹಾಳಾಗಿದ್ದರೆ, ಅದನ್ನು ದುರಸ್ತುಪಡಿಸಲು ಹತ್ತನ್ನೆರಡು ಅರ್ಜಿ ಕೊಟ್ಟರೂ. ಸಂಬಂಧಪಟ್ಟವರು ಬಂದು ಅದನ್ನು ದುರಸ್ತುಪಡಿಸುವುದಿಲ್ಲ. ಅವರು ಬರುವುದರೊಳಗೆ ಕೆರೆಯ ನೀರೆಲ್ಲಾ ಹೋಗಿಬಿಟ್ಟಿರುತ್ತದೆ. ಇದರಿಂದಾಗಿ ಕೆರೆಯ ನೀರನ್ನು ಯಾವ ಪ್ರಮಾಣದಲ್ಲಿ ಬಳಸಿಕೊಳ್ಳಬಹುದಾಗಿತ್ತೋ ಆ ಪ್ರಮಾಣದಲ್ಲಿ ಬಳಸಿಕೊಳ್ಳಲಾಗುತ್ತಿಲ್ಲ. ಕೆರೆಗಳನ್ನು ಸರಿಯಾಗಿ ಕಾಲ ಕಾಲಕ್ಕೆ ದುರಸ್ತುಮಾಡಿದರೆ ಎಂಟು ಲಕ್ಷ ಹೆಕ್ಟೇರ್ ಬದಲಿಗೆ ೧೨ ಲಕ್ಷ ಹೆಕ್ಟೇರ್ ಭೂಮಿಗೆ ನೀರನ್ನೊದಗಿಸಬಹುದು. ಸಾಮಾನ್ಯವಾಗಿ ಸಣ್ಣ ನೀರಾವರಿ ಯೋಜನೆಗಳು ರಾಜ್ಯದ ಎಲ್ಲ ಕಡೆಗಳಲ್ಲಿ ವ್ಯಾಪಕವಾಗಿರುತ್ತದೆ. ಆದರೆ, ದೊಡ್ಡ ನೀರಾವರಿ ಯೋಜನೆಗಳು ಕೆಲವು ಸ್ಥಳಗಳಿಗೆ ಮಾತ್ರ ವ್ಯಾಪಿಸಿರುತ್ತದೆ, ಮತ್ತು ಆ ಸ್ಥಳಗಳಿಗೆ ಮಾತ್ರ ನೀರಾವರಿ ಅನುಕೂಲ ಸಿಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಭದ್ರಾ ಅಣೆಕಟ್ಟನ್ನು ಬಿಟ್ಟು ಪುನಃ ಇನ್ನೊಂದು ಅಣೆಕಟ್ಟನ್ನು ನೋಡಬೇಕಾದರೆ ನಾವು ೨೦೦ ಮೈಲಿಗಳ ದೂರ ಹೋಗಬೇಕಾಗುತ್ತದೆ. ಆಗ ಕೃಷ್ಣರಾಜ ಸಾಗರ ಸಿಗುತ್ತದೆ. ಈ ಮಧ್ಯೆ ನಮಗೆ ಯಾವುದೇ ದೊಡ್ಡ ಜಲಾಶಯಗಳು ಕಂಡುಬರುವುದಿಲ್ಲ. ಆದುದರಿಂದ ವ್ಯಾಪಕವಾಗಿರುವ ಸಣ್ಣ ನೀರಾವರಿ ಕೆಲಸಗಳನ್ನು ಸರಿಯಾಗಿ ನೋಡಬೇಕಾಗಿದೆ. ಈಗ ತರೀಕೆರೆ ತಾಲ್ಲೂಕು ಮಂಡಲಿಗೆ ಏಳು ಸಾವಿರ ರೂಪಾಯಿಗಳನ್ನು ಕೆರೆಗಳ ಮೇಲ್ವಿಚಾರಣೆಗೆ ಕೊಡಲಾಗಿದೆ. ತರೀಕೆರೆ ತಾಲ್ಲೂಕಿನಲ್ಲಿ ಇಪ್ಪತ್ತೈದು ಕೆರೆಗಳಿವೆ. ಈ ಏಳು ಸಾವಿರ ರೂಪಾಯಿಗಳನ್ನು ಒಂದೊಂದು ಕೆರೆಗೆ ಹಂಚಿದರೆ ಎಷ್ಟಾಗುತ್ತದೆ ಮತ್ತು ಬರುವ ಹಣದಿಂದ ಯಾವ ದುರಸ್ತು ಕಾರ್ಯ ಮಾಡಲಿಕ್ಕೆ ಸಾಧ್ಯ? ಆದುದರಿಂದ, ಕೆರೆಗಳ ಆಡಳಿತ ಸಮರ್ಪಕವಾದ ರೀತಿಯಲ್ಲಿ ನಡೆಯಬೇಕಾದರೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಹೆಚ್ಚಿಗೆ ಹಣ ಕೊಡಬೇಕು. ಇಲ್ಲದಿದ್ದರೆ ಆ ಕೆರೆಗಳ ಆಡಳಿತವನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು, ಎಂಪ್ಲಾಯಿಮೆಂಟ್ ಅಫರ್ಮೇಷನ್ ಯೋಜನೆಯನ್ನು ಸರ್ಕಾರದವರು ಹಾಕಿ ಕೊಂಡಿರುವುದು ಬಹಳ ಒಳ್ಳೆಯದು. ಇದರಲ್ಲಿ ಕೆಲಸ ಮಾಡುವ ಜನಗಳಿಗೆ ನಾಲ್ಕು ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರದವರು ಮಾಡಿದ್ದಾರೆ. ಆದರೆ, ಅವರು ಹತ್ತು ರೂಪಾಯಿಗಳಿಗಿಂತ ಕಡಿಮೆ

ಕೊಟ್ಟರೆ ನಾವು ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಮತ್ತೆ ಕಂಟ್ರಾಕ್ಟ್‌ದಾರರು ಅವರನ್ನು ಹೆಗೋ ಹಿಡಿದು ಕೆಲಸ ಮಾಡಿಸುತ್ತಾರೆ. ಹೀಗಾಗಿ ಕೆಲವು ಸಂದರ್ಭಗಳಲ್ಲಿ ಹಣ ಖರ್ಚಾಗದೆ ಉಳಿಯುವ ಸಂದರ್ಭವಿದೆ. ಆದುದರಿಂದ, ಸರ್ಕಾರದವರು ಇದರ ಬಗ್ಗೆ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು, ಕೆಲವು ದೊಡ್ಡ ನೀರಾವರಿ ಯೋಜನೆಗಳಲ್ಲಿ ನೀರು ಬಹಳ ನಿರುಪಯುಕ್ತವಾಗಿ ಹೋಗುತ್ತಿದೆ. ಅದನ್ನು ತಡೆಗಟ್ಟುವುದರಿಂದ ಸಾವಿರಾರು ಎಕರೆ ಭೂಮಿಗೆ ಹೊಸದಾಗಿ ನೀರನ್ನೊದಗಿಸಲು ಅನುಕೂಲವಾಗುತ್ತದೆ. ಕರ್ನಾಟಕ ಕರಡು ಪಂಚವಾರ್ಷಿಕ ಯೋಜನೆ ೧೯೭೮-೮೩ ರಲ್ಲಿ ಹೀಗೆ ಹೇಳಲಾಗಿದೆ. The gross water potential of the State is assumed at 1390 TMC. The potential utilised at present is of the order of 600 TMC i.e. 3[illegible]%, which means that there is vast scope for exploitation of water resources. ನಮ್ಮಲ್ಲಿ ನೀರು ಉಳಿಯುವುದೇ ಇಲ್ಲವೇನೋ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಇದನ್ನು ನೋಡಿದ ಮೇಲೆ ಸುಮಾರು ೧೨೦೦ ಟಿಎಂಸಿ ನೀರು ಉಳಿಯುತ್ತದೆ ಎಂದು ಗೊತ್ತಾಗುತ್ತದೆ. ಒಂದು ಟಿಎಂಸಿ ನೀರಿನಿಂದ ಆರು ಸಾವಿರ ಎಕರೆಗೆ ನೀರಾವರಿಯಾದರೆ ೧೨೦೦ ಟಿಎಂಸಿ ನೀರಿನಿಂದ ಸುಮಾರು ಎಪ್ಪತ್ತೆರಡು ಲಕ್ಷ ಎಕರೆಗೆ ನೀರನ್ನು ಒದಗಿಸಬಹುದು. ಈ ವಿಚಾರವನ್ನು ತಿಳಿದು ನನಗೆ ಆಶ್ಚರ್ಯ ಮತ್ತು ಸಂತೋಷ ಎರಡೂ ಆಯಿತು. ಇದನ್ನೆಲ್ಲ ಕಾರ್ಯಗತ ಮಾಡಬೇಕಾದರೆ ಭಾರಿ ಮೊತ್ತದ ಹಣ ಬೇಕಾಗುತ್ತದೆ. ಆದುದರಿಂದ, ಇದನ್ನು ಸರ್ಕಾರದವರು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ವರುಣಾ ನಾಲೆ ಪ್ರಾರಂಭ ಮಾಡಬೇಕೆಂಬ ಕೂಗು ಎದ್ದಾಗ ನನಗೆ ಸ್ವಲ್ಪ ಆಶ್ಚರ್ಯವಾಯಿತು. ನಾನು ಮೈಸೂರಿಗೆ ಹೋಗಿದ್ದಾಗ ಕೃಷ್ಣರಾಜಸಾಗರ ಜಲಾಶಯವನ್ನು ನೋಡಿದೆ. ಸಾಮಾನ್ಯವಾಗಿ ಎಲ್ಲ ಜಲಾಶಯಗಳಲ್ಲಿಯೂ ಬಲದಂಡೆ ಮತ್ತು ಎಡದಂಡೆ ಎಂದು ಎರಡು ನಾಲೆಗಳಿರುತ್ತವೆ. ಈಗ ವರುಣಾ ನಾಲೆ ಕಾರ್ಯಗತವಾಗುವುದರಿಂದ ಸುಮಾರು ಮೂವತ್ತು ಸಾವಿರ ಎಕರೆಗೆ ನೀರು ಒದಗಿಸಬಹುದೆಂದು ತಿಳಿದು ನನಗೆ ಬಹಳ ಸಂತೋಷವಾಯಿತು. ಆದರೆ, ಈ ಸೌಲಭ್ಯ ಕಳೆದ ಐವತ್ತು ವರ್ಷಗಳ ಹಿಂದೆಯೇ ಸಿಗಲಿಲ್ಲವಲ್ಲ ಎಂದು ವ್ಯಸನ ಕೂಡ ಆಗುತ್ತಿದೆ.

ನಮ್ಮ ರಾಜ್ಯದಲ್ಲಿ ದೊಡ್ಡ ನೀರಾವರಿ ಕೆಲಸಗಳು ಬಹಳ ಚುರುಕಾಗಿ ನಡೆಯುತ್ತಿವೆ. ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ನಲವತ್ತು ಕೋಟಿ ರೂಪಾಯಿಗಳನ್ನು ಒದಗಿಸಲಾದ ಈ ಹಣವನ್ನು ಒಂದು ವರ್ಷಕ್ಕೆ ಖರ್ಚು ಮಾಡಬೇಕಾದರೆ, ಒಂದು ದಿವಸಕ್ಕೆ ಎಷ್ಟು ಖರ್ಚಾಗುತ್ತದೆಂಬುದನ್ನು ನಾವು ನೋಡಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಕರ್ನಾಟಕದ ಯೋಜನೆಗಳಿಗೆ ಹಣದ ಕೊರತೆ ಏನೂ ಇಲ್ಲ. ನಾನು ಒಮ್ಮೆ ಮಾನ್ಯ ಮುಖ್ಯ ಮಂತ್ರಿಗಳೊಡನೆ ಪ್ರಯಾಣ ಮಾಡುತ್ತಾ, ಗಂಗಾ ನದಿಯನ್ನು ಕಾವೇರಿಗೆ ಸೇರಿಸುವ ವಿಚಾರ ಪ್ರಸ್ತಾಪ ಮಾಡಿದಾಗ, ಅವರು ಅದು ಆಗಬೇಕಾದ ಕಾರ್ಯವೆಂದು, ನಮ್ಮ ರಾಜ್ಯದಲ್ಲಿ ಆಗಬೇಕಾದ ಕಾರ್ಯಗಳು ಬಹಳವಿವೆ. ಆದರೆ ಎಲ್ಲವನ್ನೂ ಒಂದೇ ಸಲ ಅಥವಾ ಒಂದೇ ವರ್ಷದಲ್ಲಿ ಮಾಡುವುದಕ್ಕಾಗುವುದಿಲ್ಲ ಎಂದರು. ಅದನ್ನು ನಾನೂ ಒಪ್ಪುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಕೋಟ್ಯಂತರ ದನಗಳಿವೆ. ಆದರೆ, ಅವುಗಳು ಕೊಡುವ ಹಾಲು ಎಷ್ಟು? ಅವುಗಳಿಗೆ ಸರಿಯಾದ ಪ್ರಮಾಣದಲ್ಲಿ ಹುಲ್ಲು ಸಿಕ್ಕದೆ ಇರುವುದರಿಂದ ಅವು ಬಹಳ ಕಡಿಮೆ ಪ್ರಮಾಣದಲ್ಲಿ ಹಾಲನ್ನು ನೀಡುತ್ತಿವೆ. ಇದು ವಿಷಾದದ ಸಂಗತಿ. ಈ ವಿಚಾರದಲ್ಲಿ ಇಲಾಖೆಯವರು ಹೆಚ್ಚು ನಿಗಾ ವಹಿಸಬೇಕೆಂದು ಹೇಳುತ್ತೇನೆ. ಇನ್ನು ಪಶುವೈದ್ಯ ಶಾಲೆಗಳಲ್ಲಿ ಲೈವ್ ಸ್ಟಾಕ್ ಇನ್‌ಸ್ಪೆಕ್ಟರ್‌ಗಳೇ ಇರುವುದಿಲ್ಲ. ಮತ್ತು ಒಳ್ಳೆಯ ಹುಲ್ಲು ಅವುಗಳಿಗೆ ಸಿಗದೆ ಇರುವುದರಿಂದ ನಮ್ಮ ರಾಜ್ಯದಲ್ಲಿರುವ ದನಗಳಲ್ಲಿ ಶೇಕಡ ೭೫ ರಷ್ಟು ದನಗಳು ಸರಿಯಾಗಿ ಹಾಲು ಕೊಡುವುದೇ ಇಲ್ಲ, ಮತ್ತೆ ಇನ್ನುಳಿದ ೨೫ ರಷ್ಟು ದನಗಳು ಅರ್ಧ ಅಥವಾ ಕಾಲು ಲೀಟರ್ ಹಾಲನ್ನು ಕೊಡುತ್ತವೆ. ಹೀಗಾಗಿ ಇವುಗಳ ಅಭಿವೃದ್ಧಿ ಬಗ್ಗೆ ಯೋಜನೆ ಮಾಡದಿದ್ದರೆ ನಮ್ಮ ದೇಶದಲ್ಲಿ ಪಶುಸಂಪತ್ತು ಹೆಚ್ಚುವುದಿಲ್ಲವೆಂದು ಹೇಳುತ್ತೇನೆ. ನಾವು ದನಗಳನ್ನು ಸಾಕುತ್ತೇವೆ. ಹಸುಗಳಿಗೆ ಗೌರವ ಕೊಡುತ್ತೇವೆ. ನಾವು ಹಸುವಿಗೆ ಗೌರವ ಹೇಗೆ ಕೊಡುತ್ತೇವೆಂದರೆ ಅವುಗಳಿಗೆ ಕುಂಕುಮ ಇಟ್ಟು ಹೊರಗೆ ಕಳುಹಿಸುತ್ತೇವೆ. ಹೊರಗಡೆಯಿಂದ ಬಂದಾಗ ಹಾಲು ಕರೆಯುವುದಕ್ಕೆ ತಂಬಿಗೆ ತೆಗೆದುಕೊಂಡು ಹೋಗುತ್ತೇವೆ. ಒಂದು ದಿವಸ ಮೇಯಿಸುವುದಿಲ್ಲ. ಪ್ರತಿದಿನ ಸಾಯಿಸುತ್ತೇವೆ. ಹಸಿರು ಹುಲ್ಲು ಬೆಳೆಯುವುದಕ್ಕೆ ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಎಲ್ಲೆಲ್ಲಿ ನೀರಾವರಿ ಅನುಕೂಲವಿದೆಯೋ ಅಂಥಕಡೆ ಸರ್ಕಾರದವರು ೨೦೦-೩೦೦ ಎಕರೆ ಪ್ರದೇಶ

ಗಳಲ್ಲಿ ಹಸಿರು ಹುಲ್ಲು ಬೆಳೆದು, ಬೆಂಗಳೂರಿನಲ್ಲಿ ಯಾವರೀತಿ ಮಾರಾಟ ಮಾಡುವಂಥ ವ್ಯವಸ್ಥೆ ಇದೆಯೋ ಅದೇ ರೀತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಹೇರಳವಾಗಿ ಹಸಿರು ಹುಲ್ಲನ್ನು ಹಸುಗಳಿಗೆ ಹಾಕುವುದರಿಂದ ಹೆಚ್ಚು ಹಾಲು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತೆ ಹುಲ್ಲಿನ ತಳಿಯನ್ನು ರೈತರಿಗೆ ಒದಗಿಸಿದರೆ ಅವರು ಕೂಡ ಹುಲ್ಲು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಸರ್ಕಾರದವರು ಒಳ್ಳೆಯ ಹುಲ್ಲಿನ ತಳಿ ಅಭಿವೃದ್ಧಿ ಮಾಡುವುದು, ದನಗಳಿಗೆ ಬರತಕ್ಕ ಕಾಯಿಲೆಯನ್ನು ನಿವಾರಣೆ ಮಾಡುವುದು ಬಹಳ ಮುಖ್ಯವಾದುದು. ಇವೆಲ್ಲವನ್ನು ಮಾಡದೆ ಹೋದರೆ ನಾವು ಏನು ಮಾಡಿದಾಗ್ಯೂ ಆಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

೨-೩೦ ಪಿ.ಎಂ.

ಇನ್ನು ಹಾಲು ಉತ್ಪಾದನಾ ಕೇಂದ್ರದ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ನಾಲ್ಕು ಕಡೆ ಮಾತ್ರ ಹಾಲು ಉತ್ಪಾದನಾ ಕೇಂದ್ರ ಇವೆ. ಧಾರವಾಡ, ಗುಲ್ಬರ್ಗ, ಬೆಂಗಳೂರು ಹಾಗೂ ಮೈಸೂರು ಈ ಭಾಗಗಳಲ್ಲಿ ಮಾತ್ರ ಈ ಕೇಂದ್ರಗಳಿವೆ. ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿಯೂ ಹಾಲಿನ ಉತ್ಪಾದನಾ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ. ಈಗ ಉತ್ಪನ್ನ ಮಾಡತಕ್ಕ ಹಾಲು ನಮಗೆ ಸಾಕಾಗುತ್ತಿಲ್ಲ. ಸರಾಸರಿ ಕಾಲು ಲೀಟರ್ ಹಾಲು ನಾವು ಕುಡಿಯುತ್ತಿಲ್ಲ. ಹಳ್ಳಿ ಪ್ರದೇಶಗಳಿಂದ ಹಾಲನ್ನು ಶೇಖರಿಸಿ ತಂದು ಇಲ್ಲಿ ಹಾಲು ಕುಡಿಯುತ್ತೇವೆ. ಹಳ್ಳಿಯವರು ಹಾಲು ಕುಡಿಯುವುದಕ್ಕೆ ಶುರು ಮಾಡಿದರೆ, ಪಟ್ಟಣದವರಿಗೆ ಹಾಲು ಸಿಗುವುದಿಲ್ಲ. ಹಾಲು ಉತ್ಪಾದನೆಯನ್ನು ಜಾಸ್ತಿ ಮಾಡುವುದಕ್ಕೆ ಸರ್ಕಾರದವರು ಹೆಚ್ಚು ಗಮನಕೊಡಬೇಕೆಂದು ಹೇಳುತ್ತೇನೆ.

ಇನ್ನು ಕೋಳಿಸಾಕಾಣಿಕೆಯಲ್ಲೂ ಕೂಡ ನಾವು ಬಹಳ ಹಿಂದೆ ಇದ್ದೇವೆ. ಕೋಳಿಸಾಕಾಣಿಕೆ ಹುಲ್ಲುಗಾವಲು ಬೇಕಾಗಿಲ್ಲ. ಸಣ್ಣ ಸಣ್ಣ ಮನೆಗಳಲ್ಲಿ ಕೋಳಿಸಾಕಾಣಿಕೆಯನ್ನು ಹೆಚ್ಚು ಪ್ರಮಾಣದಲ್ಲಿ ಮಾಡುವುದಕ್ಕೆ ಅನುಕೂಲವಿದ್ದರೂ ಕೂಡ ಏಕೆ ಮಾಡಿಲ್ಲ? ನಮ್ಮ ದೇಶದಲ್ಲಿ ಒಂದು ವರ್ಷಕ್ಕೆ ಸರಾಸರಿ ೧೫ ರಿಂದ ೨೦ ಮೊಟ್ಟೆ ನಾವು ಉಪಯೋಗಿಸುವುದಿಲ್ಲ! ಅದೇ ವೆಸ್ಟರ್ನ್ ಕಂಟ್ರಿಗಳಲ್ಲಿ ಒಂದು ವರ್ಷಕ್ಕೆ ಒಬ್ಬ ವ್ಯಕ್ತಿ ೩೦೦-೪೦೦ ಮೊಟ್ಟೆಗಳನ್ನು ಉಪಯೋಗಿಸುತ್ತಿದ್ದಾರೆಂದು ತಿಳಿದಿದ್ದೇನೆ.

ಛೇರ್ಮನ್.—ಇನ್ನು ೩೬ ಹೆಸರುಗಳು ಇವೆ. ಇನ್ನು ಹೆಚ್ಚಾಗುವ ಸೂಚನೆಗಳು ಕಂಡುಬರುತ್ತಿವೆ. ನಿಮ್ಮ ಸಚೇತಕರು ಒಬ್ಬೊಬ್ಬರಿಗೆ ೧೦-೧೦ ನಿಮಿಷ ಕೊಡಿ ಸಾಕು ಎಂದು ಹೇಳಿದರು. ನಾನು ೧೫-೧೫ ನಿಮಿಷ ಕೊಡುತ್ತಿದ್ದೇನೆ. ನೀವು ಇನ್ನೂ ಜಾಸ್ತಿ ಉಪಯೋಗಿಸುತ್ತಿದ್ದೀರಿ, ತಾವು ದಯವಿಟ್ಟು ಸಹಕರಿಸಬೇಕು.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪ.—ಅದಕೋಸ್ಕರ ತಾವು ಕೋಳಿಸಾಕಾಣಿಕೆ ಕೇಂದ್ರಗಳನ್ನು ಹೆಚ್ಚು ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. ಇನ್ನು ಕೊನೆಯದಾಗಿ ನಮ್ಮ ತರೀಕೆರೆ ತಾಲ್ಲೂಕಿನಲ್ಲಿ ಜಂಬದಹಳ್ಳ ಅಂತ ಇದೆ, ಅದಕ್ಕೆ ನೀರು ಸಾಲದು. ಒಬಿರಾಯನ ಹಳ್ಳದಿಂದ ಬರತಕ್ಕ ನೀರು ತಿರುಗಿಸಿದರೆ ಸುಮಾರು ೬-೭ ಸಾವಿರ ಎಕರೆ ನೀರಾವರಿ ಪ್ರದೇಶವಾಗುತ್ತದೆ. ಸರ್ಕಾರದವರು ಈ ಕೆಲಸವನ್ನು ಮಾಡಿಕೊಡಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲ್ಲಾಯ (ವಿಟ್ಲ).—ಸನ್ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವ ಬೇಡಿಕೆಗಳಲ್ಲಿ ಪ್ರಮುಖ್ಯವಾದಂಥ ಪೊಲೀಸ್ ಇಲಾಖೆಯ ಬೇಡಿಕೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷಿಸುತ್ತೇನೆ. ಪೋಲಿಸ್ ಕಮೀಷನ್ನಿನ ವರದಿ ನಮ್ಮ ಕೈಗೆ ಸೇರದೇ ಇದ್ದರೂ ಮುಖ್ಯವಾದ ಅಂಶಗಳು ಈಗಾಗಲೇ ಪತ್ರಿಕೆಗಳಲ್ಲಿ ಬಂದಿವೆ. ಅದನ್ನು ಈಗಾಗಲೇ ಸರ್ಕಾರದವರು ಕೂಡ ಪರಿಶೀಲನೆ ಮಾಡಿರಬಹುದೆಂದು ನಾನು ಭಾವಿಸುತ್ತೇನೆ. ಪೋಲಿಸ್ ಇಲಾಖೆ ಯಾವರೀತಿಯಲ್ಲಿ ವರ್ತಿಸುತ್ತಿದೆ ಎನ್ನುವುದರ ಬಗ್ಗೆ ನಾನು ಹೆಚ್ಚಿನ ವಿವರಣೆಗಳಿಗೆ ಹೋಗುವುದಿಲ್ಲ. ಆ ಇಲಾಖೆಯಲ್ಲಿ ಮುಖ್ಯವಾಗಿ ಪೋಲೀಸಿನವರು ಸಾರ್ವಜನಿಕರ ಪ್ರೀತಿವಿಶ್ವಾಸಗಳನ್ನು ಗಳಿಸಬೇಕು. ಪೋಲೀಸಿನವರು ಜನರ ಗೌರವ ಸಹಕಾರ ಪಡೆಯುವ ವಿಚಾರದಲ್ಲಿ ಪುನರ್

ಸಂಘಟನೆ ಮಾಡಬೇಕೆನ್ನುವುದು ನಿರ್ವಿವಾದ ವಿಚಾರ ಅಂತ ನಾನು ಭಾವಿಸುತ್ತೇನೆ. ಮಾನ್ಯ ಧರ್ಮವೀರ ಅವರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದಂಥ ಪೋಲೀಸ್ ಕಮೀಷನ್ ಕೂಡ ಈ ವಿಚಾರದಲ್ಲಿ ಕೆಲವು ಸೂಚನೆಗಳನ್ನು ಕೊಟ್ಟಿದೆ. ಪೋಲೀಸ್ ಇಲಾಖೆಯಲ್ಲಿ ಮೊಟ್ಟಮೊದಲನೆಯದಾಗಿ ಹೆಚ್ಚು ವಿದ್ಯಾವಂತರು ಕೆಳಹಂತದಲ್ಲಿ ಕನಿಷ್ಠಪಕ್ಷ ಎಸ್. ಎಸ್. ಎಲ್. ಸಿ. ಆದವರನ್ನೇ ಪೋಲೀಸ್ ಪೇದೆಗಳನ್ನಾಗಿ ತೆಗೆದುಕೊಳ್ಳಬೇಕು. ಈಗ ಎಸ್. ಎಸ್. ಎಲ್. ಸಿ. ಗಿಂತ ಕಡಿಮೆ ಇರತಕ್ಕ ಪೋಲೀಸ್ ಪೇದೆಗಳಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡಬೇಕು ಹಾಗೂ ಹೆಚ್ಚಿನ ಅವಕಾಶವನ್ನು ಒದಗಿಸಿಕೊಡಬೇಕೆನ್ನುವ ಸೂಚನೆಯನ್ನು ಕೂಡ ಮಾಡಿದ್ದಾರೆ. ಈ ದೇಶದಲ್ಲಿ ಒರುವಂತ ನೆರೆ, ಬೆಂಕಿ ಮತ್ತಿತರ ಗಂಡಾಂತರಗಳು ಬಂದಂಥ ಕಾಲದಲ್ಲಿ ಸಮಾಜದ ರಕ್ಷಣೆಗಾಗಿ, ಗಂಡಾಂತರಗಳಿಂದ ಜನರನ್ನು ಪಾರು ಮಾಡುವ ಕಾರ್ಯಗಳಿಗೆ ಪೋಲೀಸಿನವರು ಹೆಚ್ಚಿನ ಮುತುವರ್ಜಿಯಿಂದ ಕೆಲಸ ಮಾಡಬೇಕು. ಜನರೂ ಕೂಡ ಪೋಲಿಸಿನವರಿಗೆ ಇಂಥ ಸಾಮೂಹಿಕವಾಗಿ ಬರುವಂಥ ಅಪಘಾತಗಳಿಂದ ರಕ್ಷಣೆ ಮಾಡುವಂಥ ಕಾರ್ಯಗಳಲ್ಲಿ ಸಹಕಾರ ಕೊಟ್ಟು ಕೆಲಸ ಮಾಡುವಂತಹ ಅವಕಾಶವನ್ನು ಏರ್ಪಾಡು ಮಾಡಬೇಕೆಂದು ಕೂಡ ಸೂಚನೆ ಮಾಡಿದ್ದಾರೆ. ಈ ಎರಡು ಸೂಚನೆಗಳನ್ನು ಕೂಡ ನಾನು ಬೆಂಬಲ ಮಾಡುತ್ತೇನೆ. ಈ ಎರಡು ವಿಚಾರಗಳ ಬಗ್ಗೆ ಸರ್ಕಾರದವರು ಗಮನಕೊಡತಕ್ಕಂಥಾದ್ದು ಒಳ್ಳೆಯದೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪೋಲಿಸ್ ಇಲಾಖೆಯಲ್ಲಿ ಪೋಲಿಸಿನವರಿಗೆ ಹೆಚ್ಚಿನ ಅನುಕೂಲಗಳನ್ನು ಒದಗಿಸಿಕೊಡುವುದು.

ಅವರ ಸಂಬಳ ಸಾರಿಗೆ ಮತ್ತಿತರ ಅನುಕೂಲಗಳನ್ನು ಒದಗಿಸುವುದರಲ್ಲಿ ಸರ್ಕಾರದವರು ಹೆಚ್ಚಿನ ಹಣ ಒದಗಿಸಬೇಕೆಂದು ಪೋಲಿಸ್ ಕಮೀಷನ್ ಸೂಚನೆ ಮಾಡಿದೆ. ಪೋಲಿಸ್ ಕಮೀಷನ್ ವರದಿಯಲ್ಲಿ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಯಾವರೀತಿಯಲ್ಲಿ ಅಂದರೆ ಜಪಾನ್‌ನಲ್ಲಿರುವಂತೆ ಪೋಲಿಸ್ ಪೇದೆಗಳಿಗೆ ಯಾವರೀತಿಯ ಸೌಕರ್ಯಗಳನು ಕೊಟ್ಟಿದ್ದಾರೋ ಅದೇರೀತಿ ಕೊಡುವಂತೆ ಸೂಚನೆ ಮಾಡಿದ್ದಾರೆಂದು ಪತ್ರಿಕೆಯಲ್ಲಿ ಬಂದಿರುವುದನ್ನು ಓದಿದ್ದೇನೆ. ಕನಿಷ್ಟಮಟ್ಟದ ಸ್ಕಿಲ್ಡ್ ವರ್ಕರ್ಸ್‌ಗೆ ಕೊಡುವಂತ ಎಲ್ಲ ಅನುಕೂಲಗಳನ್ನು ಕೊಡುವುದರ ಜೊತೆಯಲ್ಲಿ ಅವನ ಕಷ್ಟಕರವಾದ ಕೆಲಸಗಳನ್ನು ಮಾಡುವ ಸಂದರ್ಭದಲ್ಲಿ ವಿಶೇಷ ಭತ್ಯ ಇರುವಂಥ ಸವಲತ್ತುಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ವರ್ಷದಲ್ಲಿ ಒಮ್ಮೆಯಾದರೂ ಸಂಬಳದ ಒಂದಂಶವನ್ನು ಒಂದು ಬಾರಿ ವಿಶೇಷ ಖರ್ಚುವೆಚ್ಚಗಳನ್ನು ಪೂರೈಸುವುದಕ್ಕೆ ಒದಗಿಸಿಕೊಡಬೇಕು. ನೀವು ಅದನ್ನು ಬೋನಸ್ ಅಂತಲಾದ್ರು ಕರೆಯಿರಿ; ಯಾವ ಹೆಸರಿನಿಂದ ಬೇಕಾದರೂ ಕರೆಯಿರಿ. ಈ ರೀತಿಯ ಸಲಹೆ ಕೂಡ ಪೋಲಿಸ್ ಕಮೀಷನ್ ಕೊಟ್ಟಿದೆ ಎಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಇದು ಕೂಡ ಸೂಕ್ತವಾದ ಸಲಹೆಯೆಂದು ನಾನು ಭಾವಿಸಿದ್ದೇನೆ; ಆದ್ದರಿಂದ ಸರ್ಕಾರದವರು ಇದರ ಕಡೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಪೋಲಿಸ್ ಪೇದೆಗಳಿಗೆ ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಔಟ್‌ಪೋಸ್ಟ್‌ಗಳಲ್ಲಿ ಉಳಿಯಲಿಕ್ಕೆ ಬೇಕಾದಂಥ ಅನುಕೂಲಗಳು ಸಾಕಷ್ಟು ಪ್ರಮಾಣದಲ್ಲಿ ಇಲ್ಲ. ಇವೊತ್ತು ಮಂಗಳೂರಿನಲ್ಲಿ ಇರತಕ್ಕ ಪೋಲಿಸ್ ಲೈನ್‌ಗೆ ಹೋಗಿ ನೋಡಿದರೆ ಅಲ್ಲಿ ಅವರಿಗೆ ಕುಡಿಯಲಿಕ್ಕೆ ನೀರು ಇರುವುದಿಲ್ಲ. ಸಾಮಾನ್ಯ ಜನರ ಜೀವನಕ್ಕೆ ಬೇಕಾಗತಕ್ಕಂತಹ ಕನಿಷ್ಟ ಮಟ್ಟದ ಅವಶ್ಯಕತೆಗಳು ಇಲ್ಲದೇ ಇದ್ದರೆ ಹೇಗೆ? ಇವೊತ್ತು ನಾವು ಅವರನ್ನು ಅಮಾನುಷರಾಗಿ ಮಾಡುತ್ತಿದ್ದೇವೆ. ಇದು ಬಹಳ ಅಪಾಯಕಾರಿ. ಸರ್ಕಾರ ಅವರಿಗೆ ವಸತಿ ಸೌಕರ್ಯವನ್ನು ಒದಗಿಸುವುದರ ಜೊತೆಗೆ ಅವರಿಗೆ ಬೇಕಾಗತಕ್ಕ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡಬೇಕು. ಒಂದು ಮನೆಯಲ್ಲಿ ಸಂಸಾರ ಮಾಡಲಿಕ್ಕೆ ಏನೇನು ಸೌಕರ್ಯಗಳು ಬೇಕಾಗುತ್ತದೆ, ಆ ಸೌಕರ್ಯಗಳನ್ನೆಲ್ಲಾ ಸರ್ಕಾರ ಒದಗಿಸಿಕೊಡಲಿಕ್ಕೆ ಸರ್ಕಾರ ಗಮನ ಹರಿಸಬೇಕು ಎಂದು ಹೇಳುತ್ತೇನೆ. ಇನ್ನು ಮಾನ್ಯ ಸದಸ್ಯರಾದ ರಾಮ ಭಟ್ ಅವರು ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಅವರನ್ನು ಇಲಾಖೆಗೆ ತೆಗೆದುಕೊಳ್ಳುವಾಗ ೩೦ ಸಾವಿರ ರೂಪಾಯಿ ಬೇಡಿಕೆ ಇದೆ ಅದನ್ನು ಅವರು ಪೂರೈಸಬೇಕಾಗುತ್ತದೆ, ಅವರು ಸಬ್ ಇನ್ಸ್‌ಪೆಕ್ಟರ್ ಆದ ಮೇಲೆ ಸಾಮಾನ್ಯ ಜನರ ಹತ್ತಿರ ೩೦ ಸಾವಿರ ರೂಪಾಯಿ ಭರ್ತಿ ಮಾಡಲಿಕ್ಕೆ ಕೆಳಿ ವಸೂಲು ಮಾಡುತ್ತಾರೆ ಅಂದರು. ಇದನ್ನು ನಾನೂ ಕೂಡ ಕೇಳಿದ್ದೇನೆ. ಇದರ ಬಗ್ಗೆ ನಾನು ಮುಖ್ಯ ಮಂತ್ರಿಗಳಲ್ಲಿ, ಇಲಾಖಾ ಅಧಿಕಾರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಮಾತು ಎಲ್ಲಿಂದ ಹೊರಟು ಬರುತ್ತದೆ. ಯಾವ ಪೋಲಿಸ್ ಅಧಿಕಾರಿ, ಯಾವ ಸಬ್ ಇನ್ಸ್‌ಪೆಕ್ಟರ್ ಈ ರೀತಿ ಜನರಿಂದ ಹಣ ವಸೂಲು ಮಾಡಲಿಕ್ಕೆ ಪ್ರಯತ್ನ ಮಾಡುತ್ತಾನೆ ಅಂತಹವರನ್ನು ಮೊದಲು ಬಲಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಲ್ಲಿ ಸತ್ಯಾಂಶ ಇಲ್ಲ ಎಂದು ಹೇಳಲಿಕ್ಕೆ ಪುರಾವೆ ಇಲ್ಲ.

ಏಕೆಂದರೆ ನಾನು ಕೊಡಿಸಿಯೂ ಇಲ್ಲ, ಕೊಡಲಿಕ್ಕೆ ಹೋಗಿಯೂ ಇಲ್ಲ, ಅನಂತರ ತೆಗೆದುಕೊಂಡಿರುವು ದನ್ನು ನೋಡಿಯೂ ಇಲ್ಲ. ಆದುದರಿಂದ ಇದರ ಬಗ್ಗೆ ವಿಚಾರಣೆ ಮಾಡತಕ್ಕದು ಮಾನ್ಯ ಮಂತ್ರಿ ಗಳಿಗೆ ಸೇರಿದ್ದು. ನಾನು ತಿಳಿದವುಟ್ಟಿಗೆ ಹೇಳುವುದಾದರೆ ನಿಜವಾಗಿಯೂ ಜನರನ್ನು ಶೋಷಣೆ ಮಾಡು ವಂತಹ ಅಧಿಕಾರಿಗಳು ಹೆಚ್ಚು ಈ ಮಾತನ್ನು ಹೇಳುತ್ತಾರೆಂದು ನಂಬಬಹುದು. ಪೋಲಿಸ್ ಸ್ಟೇಷನ್ ನಲ್ಲಿ ಜನರಿಗೆ ಕಿರುಕುಳ ಕೊಡುವುದರಲ್ಲಿ, ಹೊಡೆಯುವುದರಲ್ಲಿ ಯಾರು ಅಗ್ರಗಣ್ಯರಾಗಿರುತ್ತಾರೆ; ಅವರು ಹೇಳುವಂತಹ ಮಾತನ್ನು ಹೇಳಿವರೆ ನಂಬಲಿಕ್ಕೆ ಬರುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಯಾರು ಎಂದು ಇಲ್ಲಿಯವರೆಗೂ ಯಾರೂ ಹೇಳಲಿಲ್ಲ. ಸುಮ್ಮನೆ ಅವರು ಜನರಲೈಸ್ ಮಾಡಿ ಹೇಳಿದರು.

ಶ್ರೀ ಬಿ. ವಿ. ಕಕ್ಕಿಲಾಯ.—ಅಂತಹ ಅಪವಾದ ಇದೆ ಅಂತಾದ್ದು ಏನಾದರೂ ಬಂದರೆ ಅಥವಾ ತಿಳಿಸಿದರೆ...

ಶ್ರೀ ಡಿ. ದೇವರಾಜ್ ಅರಸ್.—ಬಂದರೆ...ಪ್ರಪಂಚ ಬೇಡ. ಯಾರು ನಿಮಗೆ ಹೇಳಿದ್ದಾರೆ ತಿಳಿಸಿ. ನೀವು ತಿಳಿಸಿ ನಾನು ಮಾಡದೇ ಇದ್ದಾಗ ಹೇಳಿ. ಸುಮ್ಮನೆ ಅವರು ಹೇಳಿದರು ಇವರು ಹೇಳಿದರು ಅಂತ 'ರೆ' ಪ್ರಪಂಚ ಆಗಬಾರದು. ರಾಮಭಟ್ ಅವರು ಯಾವ ಎಕ್ಸಾಂಪಲ್ ಹೇಳಲಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಇನ್ನು ಈ ಇಲಾಖೆಯ ಬಗ್ಗೆ ಹೇಳಬೇಕು ಅಂದರೆ, ೧೯೭೯ರಲ್ಲಿ ಕ್ರೈಮ್ಸ್ ಬಹಳ ಜಾಸ್ತಿಯಾಗಿದೆ ಎಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಬಿಗ್ ಜಂಪ್ ಇನ್ ಕ್ರೈಮ್ ರೇಟ್ ಎಂದು ಪತ್ರಿಕೆಗಳಲ್ಲಿ ಓದಿದ್ದೇನೆ. ಈ ಕ್ರೈಮ್ಸ್ ಯಾವ ತರಹ ಜಾಸ್ತಿಯಾಗಿದೆ ಎನ್ನುವ ಬಗ್ಗೆ ಅನೇಕ ನಿದರ್ಶನಗಳನ್ನು ಕೊಡಬಲ್ಲೆ. ಈಗ ನಾನು ಹಿಂದಿನ ವಿಚಾರಗಳನ್ನು ಹೇಳಲಿಕ್ಕೆ ಹೋಗುವುದಿಲ್ಲ. ೨೧ನೇ ಮೇ ೧೯೭೯ ರಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಂತಹ ಒಂದು ಪ್ರಕರಣ ವನ್ನು ಹೇಳುತ್ತೇನೆ. ಹರಿಜನರ ಮೇಲೆ ಹಲ್ಲೆ ಅಪಹರಣ ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ. ಇನ್ನೊಂದು ಕಾಡಗೋಡು ಇಲ್ಲಿ ಮೇ ೨೧ ರಂದು ನಡೆದಿವೆ; ಯುವಕನ ಶವ ಪತ್ತೆ. ಇವೊತ್ತು ಹರಿಜನರ ಮೇಲೆ ಹಲ್ಲೆ ನಡೆಯುವಂತಹ ಪ್ರಕರಣಗಳು ನಮ್ಮ ರಾಜ್ಯದಲ್ಲಿ ದುರಾದೃಷ್ಟವಶಾತ್ ಬಹಳ ತೀವ್ರವಾಗಿ ಜಾಸ್ತಿಯಾಗುತ್ತಿರುವುದು ಬಹಳ ಕಳವಳಕ್ಕೆ ಕಾರಣವಾದ ವಿಚಾರ. ಇದರ ಬಗ್ಗೆ ಇಲ್ಲಿ ಕಾಲ್ ಅಟೆನ್ಷನ್ ಕೂಡ ಬಂದಿದೆ. ಇವೊತ್ತಿನ ದಿವಸ ಕರ್ನಾಟಕದ ನಾನಾ ಭಾಗಗಳಲ್ಲಿ ಹರಿಜನರ ಮೇಲೆ ಹಲ್ಲೆ ನಡೆಯುತ್ತಿದೆ. ನಾನು ಈಗಾಗಲೇ ಹೇಳಿದಂತಹ ಒಂದು ಮಾತನ್ನು ಹೇಳಬೇಕು ಅಂದರೆ ಮಾಲೂರು ತಾಲ್ಲೂಕಿನಲ್ಲಿ ನಡೆದದ್ದು ತಾನು ಮನೆಯಲ್ಲಿ ಇದ್ದ ಹೊತ್ತಿನಲ್ಲಿಯೇ ೩೫ ಮಂದಿಯ ತಂಡ ವೊಂದು ಬಂದು ಆ ಮನುಷ್ಯನನ್ನು ಹೊರಗೆ ಎಳೆದುಕೊಂಡು ಬಡಿದಿದ್ದಾರೆ. ಅನಂತರ ಅವನನ್ನು ಜೀಪಿನಲ್ಲಿ ಅಪಹರಿಸಿಕೊಂಡು ಹೋಗಿದ್ದಾರೆ. ಕೊಲೆ ಮಾಡಿದ್ದಾರೆ ಎಂದು ಶಂಕೆ ಇದೆ. ಅಪಹೃತನ ಪತ್ನಿ ಪೋಲಿಸರಿಗೆ ದೂರು ನೀಡಿದ್ದು ಇದುವರೆಗೂ ಪೋಲಿಸರಿಂದ ಪತ್ತೆ ಮಾಡಲಿಕ್ಕೆ ಆಗಿಲ್ಲ. ಏನು ಕ್ರಮ ತೆಗೆದುಕೊಂಡಿದ್ದಾರೆಂದು ವರದಿಯಿಲ್ಲ. ಈ ಸಂಬಂಧದಲ್ಲಿ ಏಳು ಜನರನ್ನು ಬಂಧನ ಮಾಡಿದ್ದೇವೆ, ಇನ್‌ವೆಸ್ಟಿಗೇಷನ್ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಈ ತರಹ ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ. ಇನ್ನೊಂದು ವಿಚಾರ ಹೇಳಬೇಕು ಅಂದರೆ ಬೆಂಗಳೂರು ಸುತ್ತಮುತ್ತ ೫೦ ಜನರ ಗ್ಯಾಂಗ್ ಒಂದು ಧಾಳಿ ನಡೆಸಿದ ವಿಚಾರವನ್ನು ಈ ಸದನದ ಎಲ್ಲಾ ಸದಸ್ಯರು ಪತ್ರಿಕೆಗಳಲ್ಲಿ ಓದಿದ್ದಾರೆ. ಆದರೆ ಇತ್ತೀಚೆಗೆ ಮಾತ್ರ ಆರು ಜನರನ್ನು ಅರೆಸ್ಟ್ ಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ಓದಿದ್ದೇವೆ. ೨-೩ ತಿಂಗಳುಗಳ ಕಾಲ ಬೆಂಗಳೂರು ಸುತ್ತಮುತ್ತ ಒಂದು ಭೀತಿಯ ವಾತವರಣ, ಅರಾಜಕತೆಯ ವಾತಾವರಣ ಇಲ್ಲಿ ಸೃಷ್ಟಿಯಾಗಬೇಕಾಗಿದ್ದರೆ ಇವೊತ್ತು ಬೆಂಗಳೂರು ಸುತ್ತಮುತ್ತ ವಾಸಮಾಡತಕ್ಕಂತಹ ಜನರಿಗೆ ಬೇಕಾ ದಂತಹ ರಕ್ಷಣೆಯ ವ್ಯವಸ್ಥೆಯನ್ನು ಮಾಡದೇ ಇರುವುದು ಇದಕ್ಕೆ ಕಾರಣ ಆಯಿತು ಎಂದು ಸ್ಪಷ್ಟವಾಗಿ ಹೇಳಬಹುದು. ಇನ್ನೂ ಕೂಡ ಬೆಂಗಳೂರು ಸುತ್ತಮುತ್ತ ಇರುವಂತಹ ದೂರದ ಪ್ರದೇಶದಲ್ಲಿ ಸಾಕಷ್ಟು ಪೊಲಿಸ್ ಬಂದೋಬಸ್ತು ಮಾಡಲಿಕ್ಕೆ ಕಾರ್ಯಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಬೇಕಾ ಗಿದೆ. ಇವೊತ್ತು ಅಂಕಿಸಂಖ್ಯೆಗಳನ್ನು ನೋಡಿದರೆ ೧೯೬೧ ರಿಂದ ೧೯೭೧ರ ವರೆಗೆ ಪೋಲಿಸ್ ಸ್ಟೇಷನ್ ಗಳ ಸಂಖ್ಯೆ ಜಾಸ್ತಿಯಾಗಿರುವುದು ಬರೀ ೧೩.೬ ಮಾತ್ರ. ೧೯೭೧ ರಿಂದ ೧೯೭೭ರ ವರೆಗೆ ೩೩.೧೪. ಇನ್ನು ಪೊಲಿಸ್ ಔಟ್‌ಪೋಸ್ಟ್ ೧೯೭೧ ರಲ್ಲಿ ೨೯೮ ೧೯೭೭ರಲ್ಲಿ ೩೩೨. ಇನ್ನು ಪೋಲಿಸ್ ಸ್ಟೇಷನ್ ಸರ್ಕಲ್ ೧೯೭೧ರಲ್ಲಿ ೧೨೩, ೧೯೭೭ರಲ್ಲಿ ೧೪೬. ಇನ್ನು ಕಾನ್‌ಸ್ಟೇಬಲ್ ೧೯೭೧ರಲ್ಲಿ ೨೬, ೧೪೪೮ ಇದ್ದರೆ

೧೯೭೭ಕ್ಕೆ ೩೫೩೩೬. ಇನ್ನು ಪೋಲೀಸ್ ಸ್ಟೇಷನ್ ಸಂಖ್ಯೆ ೧೯೭೧ರಲ್ಲಿ ೪೯೭ ಇದ್ದರೆ ೧೯೭೭ರಲ್ಲಿ ೫೬೫. ೧೯೭೧ ರಿಂದ ೧೯೭೭ರ ವರೆಗೆ ಹೆಚ್ಚಿರತಕ್ಕದ್ದನ್ನು ನೋಡಿದರೆ ಯಾವ ಪ್ರಮಾಣದಲ್ಲಿ ಹೆಚ್ಚಬೇಕಾಗಿತ್ತೋ ಆ ಪ್ರಮಾಣದಲ್ಲಿ ಹೆಚ್ಚಿಲ್ಲ ಎನ್ನುವುದನ್ನು ನಾವು ಸ್ಪಷ್ಟವಾಗಿ ಕಾಣಬಹುದು. ಇದೇ ಸಮಯದಲ್ಲಿ ಕ್ರೈಮ್ಸ್ ಅಪರಾಧಗಳ ಸಂಖ್ಯೆಗಳನ್ನು ಹೇಳಬೇಕು ಅಂದರೆ, ೧೯೭೧ ರಿಂದ ೧೯೭೭ರ ವರೆಗೆ ೧೬೮.೩೭ ಇಷ್ಟುಡಿಯಷ್ಟು ಜಾಸ್ತಿಯಾಗಿದೆ ಇವೊತ್ತು ೧೬೮.೩೭ ರಷ್ಟು ಕ್ರೈಮ್ಸ್ ಇಂಕ್ರೀಸ್ ಆಗಿರುವುದನ್ನು ನೋಡಿದರೆ ಅಪರಾಧಗಳನ್ನು ಪತ್ತೆ ಹಚ್ಚಲಿಕ್ಕೆ ಬೇಕಾದ ವ್ಯವಸ್ಥೆ ಯಾವ ಪೋಲಿಸ್ ಠಾಣೆಯಲ್ಲೂ ಹೆಚ್ಚಾಗಿಲ್ಲ ಎಂದು ನಾವು ಈ ಸಂದರ್ಭದಲ್ಲಿ ಗಮನಿಸಬಹುದು. ಪೊಲಿಸ್ ಇಲಾಖೆಯ ಬಗ್ಗೆ ಎಷ್ಟೇ ಟೀಕೆ ಇದ್ದರೂ ನಾನು ಇನ್ನೊಂದು ಸಂದರ್ಭದಲ್ಲಿ ಅವರು ಕಾರ್ಮಿಕರ ಬಗ್ಗೆ ಯಾವರೀತಿ ವರ್ತನೆ ಮಾಡುತ್ತಾರೆ ವಿದ್ಯಾರ್ಥಿಗಳ ಮೇಲೆ ಯಾವರೀತಿ ವರ್ತನೆ ಮಾಡುತ್ತಾರೆ, ಸಾರ್ವಜನಿಕರ ಮೇಲೆ ಯಾವರೀತಿ ವರ್ತನೆ ಮಾಡುತ್ತಾರೆ ಎನ್ನುವ ಬಗ್ಗೆ ಸಂದರ್ಭ ಸಿಕ್ಕಿದಾಗ ಮಾತನಾಡುತ್ತೇನೆ. ಆದರೆ, ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಈ ಇಲಾಖೆಯು ಬಹಳ ಶಿಸ್ತಿನಿಂದ ಬಹಳ ದಕ್ಷತೆಯಿಂದ, ದೇಶದ ಜನರ ಸ್ವತ್ತು, ಮತ್ತು ಜೀವಕ್ಕೆ ರಕ್ಷಣೆ ಕೊಡುವುದಲ್ಲದೆ ಸಮಾಜಕ್ಕೆ ಶಾಂತಿ ಹಾಗೂ ಕಾನೂನು ಪಾಲನೆಯನ್ನೂ ಕೂಡ ಮಾಡುವುದು ಬಹಳ ಅತ್ಯಾವಶ್ಯಕವೆನ್ನುವ ವಿಷಯವನ್ನು ನಾನು ಇಲ್ಲಿ ಒತ್ತಿ ಹೇಳಬಯಸುತ್ತೇನೆ.

ಇನ್ನು ನನ್ನ ಎರಡನೆ ಮನೆಯಂತಿರುವ ಜೈಲುಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಾನು ಈ ಜೈಲುಗಳ ಬಗ್ಗೆ ಏತಕ್ಕೆ ಹೇಳಬಯಸುತ್ತೇನೆಂದರೆ. ನಮ್ಮ ಕರ್ನಾಟಕದಲ್ಲಿರುವ ಮಂಗಳೂರು, ಬೆಂಗಳೂರು, ರಾಣಿ ಬೆನ್ನೂರು, ದಾವಣಗೆರೆ, ಮತ್ತು ಪೋಲಿಸ್ ಲಾಕಪ್, ಈ ೫ ಜೈಲುಗಳನ್ನು ನಾನು ನೋಡಿದ್ದೇನೆ. ಇಷ್ಟೇ ಅಲ್ಲದೆ ಕೇರಳದಲ್ಲಿರುವ ಕಣ್ಣಾನೂರು, ತಮಿಳ್ನಾಡಿನಲ್ಲಿರುವ ವೆಲ್ಲೂರು, ಕಡ್ಲೂರು ಜೈಲುಗಳನ್ನೂ ನಾನು ನೋಡಿದ್ದೇನೆ. ನಾನು ಈ ಜೈಲುಗಳನ್ನು ಯಾವಾಗ ನೋಡಿದ್ದೇನೆಂದರೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯ ಬಂದಮೇಲೆ ಈ ಜೈಲುಗಳಿಗೆ ಹೋಗಿದ್ದೇನೆ. ಆದರೆ ಈಗಿನ ನಮ್ಮ ಮುಖ್ಯ ಮಂತ್ರಿಯವರು ಅಧಿಕಾರಕ್ಕೆ ಬಂದ ಮೇಲೆ ನಾನು ಜೈಲಿಗೆ ಹೋಗಿಲ್ಲ. ಇವರು ಯಾವಾಗ ಕಳುಹಿಸುತ್ತಾರೋ ನನಗೆ ಗೊತ್ತಿಲ್ಲ. ಈ ಜೈಲುಗಳನ್ನು ಈಗ ಸುಧಾರಣೆ ಮಾಡಬೇಕಾದದ್ದು ಬಹಳ ಅಗತ್ಯವಾದ ವಿಚಾರ. ನನ್ನ ಒಂದು ಅಭಿಪ್ರಾಯದಲ್ಲಿ ಹೇಳುವುದಾದರೆ, ಇವತ್ತು ಸಾಮಾನ್ಯವಾಗಿ ಜನಗಳನ್ನು ಅಪರಾಧಿಗಳನ್ನಾಗಿ ಮಾಡುವವರು ನಮ್ಮ ಸಮಾಜದವರೇ. ಇದು ಹೇಗೆಂದರೆ, ನಮ್ಮ ದೇಶದಲ್ಲಿ ಹೆಚ್ಚಾಗಿ ಕಾರ್ಮಿಕರು, ಹರಿಜನಗಿರಿಜನರು, ಬಡ ರೈತರು ಬಹಳವಾಗಿದ್ದಾರೆ. ಇವರಿಗೆ ಅವಶ್ಯಕವಾಗಿ ಬೇಕಾದ ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ, ಇರಲು ಮನೆ ಇಲ್ಲದಿರುವುದರಿಂದ ಇವರು ಒಂದಲ್ಲೊಂದು ರೀತಿಯಲ್ಲಿ ಅಪರಾಧಗಳನ್ನು ಮಾಡುತ್ತಿರುತ್ತಾರೆ. ಇದರಿಂದಾಗಿ ಇವರು ಜೈಲುಗಳಿಗೆ ಹೋಗಬೇಕಾಗಿದೆ. ಯಾರಾದರೂ ಆ ಜೈಲಿನೊಳಗೆ ಹೋಗಿ ನೋಡಿದರೆ, ಈ ಅಪರಾಧಿಗಳನ್ನು ಖಾಯಂ ಅಪರಾಧಿಗಳನ್ನಾಗಿ ಮಾಡತಕ್ಕ ಶಾಲೆ ಇದು ಎನ್ನುವ ಭಾವನೆ ಬರುತ್ತದೆ. ಇವತ್ತು ಒಬ್ಬನನ್ನು ಜೈಲಿಗೆ ಹಾಕಿದರೆ ಅವನು ಮತ್ತೆ ಜೈಲಿನಿಂದ ಹೊರಬರುವ ಹೊತ್ತಿಗೆ ಸಣ್ಣಪುಟ್ಟ ಅಪರಾಧಗಳಿಂದ ಹಿಡಿದು ದೊಡ್ಡ ದೊಡ್ಡ ಅಪರಾಧಗಳನ್ನು ಮಾಡುವುದಕ್ಕೆ ಖಾಯಂ ಆಗಿ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಇದನ್ನು ತಪ್ಪಿಸಬೇಕಾದರೆ ಜೈಲುಗಳ ಸುಧಾರಣೆಯಾಗಬೇಕು. ಅಲ್ಲದೆ ಆ ಅಪರಾಧಿ ಜೈಲಿನಿಂದ ಹೊರಗೆ ಬಂದಮೇಲೆ ಅವನಿಗೆ ಏನೇನು ಸೌಲಭ್ಯಗಳನ್ನು ಒದಗಿಸಬೇಕೆಂಬುದನ್ನು ಯೋಚನೆ ಮಾಡಬೇಕು. ಇಲ್ಲಿ ಜೈಲಿಗೆ ಸಂಬಂಧಪಟ್ಟಂತೆ ಇರುವ ರಿಪೋರ್ಟನ್ನು ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ೧೯೭೬–೭೭ ರಲ್ಲಿ ಕನ್ವಿಕ್ಟೆಡ್ ಪ್ರಿಸನರ್ಸ್ ೨೭೬೫ ಜನ, ಅಂಡರ್ ಟ್ರಯಲ್ ಪ್ರಿಸನರ್ಸ್ ೩೨೧೦ ಜನ, ೧೯೭೭ ೭೮ರಲ್ಲಿ ಕನ್ವಿಕ್ಟೆಡ್ ಪ್ರಿಸನರ್ಸ್ ೨೧೩೬ ಜನ ಅಂಡರ್ ಟ್ರಯಲ್ ೨೧೯೫ ಜನ, ೧೯೭೮–೭೯ರಲ್ಲಿ ಕನ್ವಿಕ್ಟೆಡ್ ಪ್ರಿಸನರ್ಸ್ ೨೦೪೨ ಜನ, ಅಂಡರ್ ಟ್ರಯಲ್ ೨೫೨೫ ಜನ ಇದ್ದರು. ಸುಪ್ರೀಂ ಕೋರ್ಟಿನವರೂ ಕೂಡ ಕೈದಿಗಳ ವಿಚಾರದಲ್ಲಿ ತೀರ್ಮಾನ ಕೊಡುವಾಗ ೬ ತಿಂಗಳಿಗಿಂತ ಹೆಚ್ಚಿಗೆ ಯಾವ ಕೈದಿಯನ್ನೂ ಜೈಲಿನಲ್ಲಿ ಇಡಬಾರದು. ೬ ತಿಂಗಳೊಳಗೆ ಅವನ ವಿಚಾರಣೆ ಆಗಿ ಅವನನ್ನು ಬಿಡುಗಡೆ ಮಾಡುವಂತಿದ್ದರೆ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಜಾಮೀನು ಮೂಲಕವಾದರೂ ಬಿಡಬೇಕು ಆದರೆ ಆತನ ವಿಚಾರಣೆಯನ್ನೇ ಮಾಡದೆ ಜೈಲಿನಲ್ಲಿ ಇಡಕೂಡದೆಂದು ಹೇಳಿದ್ದಾರೆ. ಆದರೆ ಕರ್ನಾಟಕ ಸರ್ಕಾರದವರು ಈ ರೀತಿ ಮಾಡುತ್ತಿಲ್ಲ. ಇವತ್ತು ಸಾವಿರಾರು ಜನ ಅಂಡರ್ ಟ್ರಯಲ್ ಪ್ರಿಸನರ್ಸ್ ಜೈಲುಗಳಲ್ಲಿದ್ದಾರೆ. ಆದ್ದರಿಂದ ನಾನು ಈ ಮೂಲಕ ಸರ್ಕಾರದವರ ಗಮನ ಸೆಳೆಯುತ್ತಿದ್ದೇನೆ.

ಇನ್ನು ತಾವು ಈ ಜೈಲುಗಳಲ್ಲಿರತಕ್ಕ ಕೈದಿಗಳಿಗೆ ಎಷ್ಟು ಖರ್ಚು ಮಾಡುತ್ತಿದ್ದೀರಿ ಎಂದು ನೋಡುವುದಾದರೆ, ೧೯೭೮-೭೯ರಲ್ಲಿ ಕನ್ವಿಕ್ಟೆಡ್ ಪ್ರಿಸನರ್ಸ್ ೨೦೪೨ ಜನ ಮತ್ತು ಅಂಡರ್ ಟ್ರಯಲ್ ಪ್ರಿಸನರ್ಸ್ ೨೫೮೫ ಜನ ಇದ್ದಾರೆ. ಇವರಿಗಾಗಿ ನೀವು ಖರ್ಚು ಮಾಡಿರುವುದು ೩೪೮೫ ರೂ.ಗಳು. ಮೊದಲು ಇವರಿಗಾಗಿ ಖರ್ಚು ಮಾಡುತ್ತಿದ್ದುದು ಒಂದು ವರ್ಷಕ್ಕೆ ೨೬೦೦ ರೂ.ಗಳು, ನಂತರ ಇದನ್ನು ೩೩೦೦ ರೂ.ಗಳಿಗೆ ಏರಿಸಿದಿರಿ. ಈಗ ಅಂದರೆ ಈ ವರ್ಷ ಅವರಿಗಾಗಿ ೩೪೮೫ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಅಂದರೆ ಒಬ್ಬ ಖೈದಿಗೆ ಒಂದು ದಿವಸಕ್ಕೆ ೧ ರೂಪಾಯಿಗೂ ಕಡಿಮೆ ಖರ್ಚು ಮಾಡಿದಂತಾಯಿತು. ತಾವು ಖರ್ಚು ಮಾಡುವ ಈ ಹಣದಲ್ಲಿ ಐ. ಜಿ. ಪಿ. ಸಂಬಳ ಜೈಲು ಸಿಬ್ಬಂದಿ ವರ್ಗದ ಖರ್ಚು, ಕೈದಿಗಳ ಊಟ, ಅವರ ಇತರೆ ಖರ್ಚುಗಳೆಲ್ಲಾ ಸೇರಿಕೊಳ್ಳುತ್ತದೆ. ಸ್ವಾಮಿ, ಸ್ವಾತಂತ್ರ್ಯ ಪೂರ್ವದಲ್ಲಿ ನಾವು ಜೈಲಿಗೆ ಹೋಗಿದ್ದಾಗ ನಮಗೆ ಜೈಲಿನಲ್ಲಿ ಕೊಡುತ್ತಿದ್ದುದು ಸ್ವಲ್ಪ ಗಂಜಿ, ಮತ್ತು ಚಟ್ನಿ ಉಂಡೆ ಮಾತ್ರ. ಆದರೆ ಅಂದಿನ ಪರಿಸ್ಥಿತಿಯನ್ನೂ ಇವತ್ತಿನ ಪರಿಸ್ಥಿತಿಯನ್ನೂ ಹೋಲಿಕೆ ಮಾಡಿ ನೋಡಿದರೆ ಈಗ ಜೈಲುಗಳಲ್ಲಿ ಸ್ವಲ್ಪ ಸುಧಾರಣೆಯಾಗಿರುವುದು ಕಂಡುಬರುತ್ತದೆ. ಆದರೂ ಕೂಡ ಜೈಲಿನಲ್ಲಿ ಕೈದಿಗಳು ಏನೊಂದು ತೊಂದರೆಗಳನ್ನು ಈಗ ಅನುಭವಿಸುತ್ತಿದ್ದಾರೆ, ಅದನ್ನು ಸ್ವಲ್ಪಮಟ್ಟಿಗೆ ಪರಿಹಾರ ಮಾಡಬೇಕು. ಅಂದರೆ ಹೆಚ್ಚಿನ ಆತಂಕವಾಗದಂತೆ ಅವರಿಗೆ ಓದುವುದಕ್ಕೆ ಪತ್ರಿಕೆಗಳನ್ನು ಒದಗಿಸಬೇಕು, ಸರಿಯಾದ ಊಟವನ್ನು ಹಾಕಬೇಕು, ಆಟಪಾಠಗಳಿಗೆ ಅವಕಾಶವಿರಬೇಕು. ಈ ರೀತಿಯ ಕೆಲವು ಅನುಕೂಲಗಳನ್ನು ಒದಗಿಸಿಕೊಟ್ಟರೆ ಯಾವುದೋ ಒಂದು ಅಪರಾಧಕ್ಕಾಗಿ ಕೈದಿಯಾಗಿ ಜೈಲಿಗೆ ಹೋದವನು ಮನುಷ್ಯನಾಗಿ, ಒಳ್ಳೆಯ ಸತ್ಪ್ರಜೆಯಾಗಿ ಹೊರಗೆ ಬರುತ್ತಾನೆ. ಇದನ್ನು ಸರ್ಕಾರದವರು ಯೋಚನೆ ಮಾಡಬೇಕು.

ಇನ್ನು ಈ ಜೈಲಿನಲ್ಲಿ ಕೆಲಸ ಮಾಡತಕ್ಕ ಕೈದಿಗಳಿಗೆ ಹಿಂದೆ ಏನೊಂದು ಕೂಲಿಯನ್ನು ಕೊಡುತ್ತಿದ್ದರು ಎಂದರೆ, ಸ್ಕಿಲ್ಡ್ ವರ್ಕರ್ಸ್‌ಗೆ ೫೦ ಪೈಸೆ, ಸೆಮಿಸ್ಕಿಲ್ಡ್ ವರ್ಕರ್ಸ್‌ಗೆ ೩೫ ಪೈಸೆ ಅನ್‌ಸ್ಕಿಲ್ಡ್ ವರ್ಕರ್ಸ್‌ಗೆ ೨ ಪೈಸೆ ಈ ರೀತಿ ಇತ್ತು. ಇತ್ತೀಚೆಗೆ ಜೈಲ್ ವಿಸಿಟರ್ಸ್ ಕಮಿಟಿಯವರು ಮಾಡಿದ ಶಿಫಾರಸ್ ಪ್ರಕಾರ ಈ ಕೈದಿಗಳಿಗೆ ೧.೫೦ ಪೈಸೆಯಿಂದ ೨.೦೦ ರೂ.ಗಳ ವರೆಗೆ ಕೊಡುತ್ತಿದ್ದೀರಿ. ಇದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸಬೇಕಾಗಿದೆ. ಆದರೆ ಇದೂ ಕೂಡ ಒಂದು ವಿಧದಲ್ಲಿ ಕಡಿಮೆ ಆಯಿತು ಎಂದೇ ಹೇಳಬೇಕಾಗುತ್ತದೆ. ಏಕೆಂದರೆ, ಜೈಲಿನಲ್ಲಿ ಕೈದಿಗಳು ತಯಾರಿಸತಕ್ಕ ಸಾಮಾನುಗಳಿಂದ ಸರ್ಕಾರಕ್ಕೆ ಸಾಕಷ್ಟು ವರಮಾನ ಬರುತ್ತಿದೆ. ಇದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ, ಕಳೆದ ೩ ವರ್ಷಗಳಲ್ಲಿ ಅಂದರೆ ೧೯೭೬-೭೭ರಲ್ಲಿ ಈ ಕೈದಿಗಳು ತಯಾರಿಸಿದ ಮರದ ಸಾಮಾನುಗಳು, ಜಮಖಾನೆಗಳು ಇವುಗಳಿಂದ ೫೩.೭೭ ಲಕ್ಷ ರೂಪಾಯಿ ಉತ್ಪನ್ನವಾಗಿದೆ, ೧೯೭೭-೭೮ರಲ್ಲಿ ೪೦.೫ ಲಕ್ಷ ರೂ.ಗಳ ಸಾಮಾನು ಉತ್ಪನ್ನವಾಗಿದೆ, ೧೯೭೮-೭೯ರಲ್ಲಿ ೪೦ ಲಕ್ಷ ರೂ.ಗಳ ಸಾಮಾನು ಉತ್ಪನ್ನವಾಗಿದೆ. ಇದರಲ್ಲಿ ಸೋರಿ ಹೋಗುವುದು ಎಷ್ಟೋ ಗೊತ್ತಿಲ್ಲ. ಉತ್ಪತ್ತಿ ಮಾಡುವವರಿಗೂ ಮಾರಾಟ ಮಾಡಿ ಸರ್ಕಾರದ ಲೆಕ್ಕಕ್ಕೆ ಬರುವುದಕ್ಕೂ ಏನು ಸಂಬಂಧವಿರುವುದಿಲ್ಲ. ಬೆಂಗಳೂರು ಜೈಲಿನಲ್ಲಿ ಕುಶಲ ಕೈಗಾರಿಕೆಗಳಿಂದ ತಯಾರಾಗುವಂಥ ವಸ್ತುಗಳು ಜಮಖಾನ, ಫರ್ನಿಚರ್ಸ್ ಬೇರೆ ಎಲ್ಲೂ ತಯಾರಾಗುವುದಿಲ್ಲ. ಬಹಳ ಉತ್ಕೃಷ್ಟವಾಗಿ ತಯಾರು ಮಾಡುತ್ತಾರೆ. ಇದಕ್ಕೆ ಒಳ್ಳೆಯ ಮಾರ್ಕೆಟ್ ಮಾಡಬೇಕು. ಒಳ್ಳೆಯ ಆದಾಯ, ವರಮಾನ ಬರುವಂತೆ ಮಾಡಬೇಕು. ಈ ಇಲಾಖೆಯು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಲು ಸಾಮಗ್ರಿಗಳನ್ನು ಒದಗಿಸಿಕೊಟ್ಟರೆ ಸರ್ಕಾರಕ್ಕೆ ಆದಾಯ ಬರುವುದರಲ್ಲಿ ಯಾವ ಸಂಶಯವಿಲ್ಲವೆಂದು ಹೇಳುತ್ತೇನೆ.

೩-೦೦ ಪಿ.ಎಂ.

ಓಪನ್ ಏರ್ ಜೈಲ್‌ಗಳೆಂದು ಮಾಡಿರುತ್ತೀರಿ. ಇದನ್ನು ಪ್ರಶಂಸಿಸುತ್ತೇನೆ. ಸಾಕಷ್ಟು ಜನ ಬಹಳ ಜನ ದೀರ್ಘಾವಧಿ ಶಿಕ್ಷೆಗೆ ಒಳಪಟ್ಟಂಥವರು ಇರುತ್ತಾರೆ. ಇವರಲ್ಲಿ ಒಳ್ಳೆಯ ನಡತೆಯುಳ್ಳವರೂ ಇರುತ್ತಾರೆ. ಇವರನ್ನು ವರ್ಗಾವಣೆ ಮಾಡಿ ಕುಶಲ ಕೈಗಾರಿಕೆಗಳಲ್ಲಿ ಬಳಸಿಕೊಂಡರೆ ಬಹಳ ಉತ್ತಮವೆಂದು ನನಗನ್ನಿಸುತ್ತದೆ. ಸಾಮಾನ್ಯ ಶಿಕ್ಷೆಗೆ ಒಳಗಾಗತಕ್ಕಂಥವರು ಹಳ್ಳಿಯವರೆ ಜಾಸ್ತಿ ಇರುತ್ತಾರೆ. ಹಿಂದೆ ಇವರು ೨ ಲಕ್ಷ ರೂಪಾಯಿಗಳ ವರಮಾನವನ್ನು ಗಳಿಸಿಕೊಟ್ಟಿದ್ದರು, ಈಗ ಮೂರು ಲಕ್ಷ ರೂಪಾಯಿಗಳ ವರಮಾನವನ್ನು ಜೈಲಿನಲ್ಲಿ ಕೃಷಿಯಿಂದ ಗಳಿಸಿಕೊಟ್ಟಿರುತ್ತಾರೆ. ಆದ್ದರಿಂದ ಅವರಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಅವರಿಗೆ ವಿದ್ಯಾಭ್ಯಾಸಕ್ಕೆ ಬೇಕಾದ ಅನುಕೂಲತೆಗಳನ್ನು ಮಾಡಬೇಕು ಜೈಲಿನಲ್ಲಿ ಇರತಕ್ಕಂಥ ವಾರ್ಡನ್ಸ್ ಏನು ಇರುತ್ತಾರೆ ಅವರು

ಅಪರಾಧಿಗಳ ಜೊತೆಯಲ್ಲಿಯೇ ಇದ್ದು ಮಾನವತೆಯನ್ನೇ ಕಳೆದುಕೊಳ್ಳತಕ್ಕಂಥ ಸ್ಥಿತಿ ಇರುತ್ತದೆ. ಅವರಿಗೆ ಉತ್ತಮವಾದ ಅನುಕೂಲತೆಗಳನ್ನು ಕೊಡಬೇಕು. ವಸತಿ ಸೌಕರ್ಯಗಳು ಇರುವುದಿಲ್ಲ. ಒಳ್ಳೆಯ ವಸತಿ ಸೌಕರ್ಯಗಳನ್ನು ಒದಗಿಸಿ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಅನಿಮಲ್ ಹಸ್‌ಬೆಂಡ್ರಿ ಹೈನುಗಾರಿಕೆಯ ಬಗ್ಗೆ ಒಂದೆರಡು ವಿಚಾರವನ್ನು ಹೇಳುವುದಾದರೆ, ಕರ್ನಾಟಕದಲ್ಲಿ ಹೈನುಗಾರಿಕೆ ದೇಶದಲ್ಲಿಯೇ ಹೆಸರುವಾಸಿಯಾದುದಾಗಿರುತ್ತದೆ. ಇಲ್ಲಿ ಉತ್ತಮವಾದಂಥ ನೈಸರ್ಗಿಕ ಪರಿಸರ ಸಾಗರ ಸಂಪತ್ತು ನಮ್ಮ ರಾಜ್ಯದಲ್ಲಿ ವಿಶೇಷವಾಗಿರುತ್ತದೆ. ಹೈನುಗಾರಿಕೆಗೆ ಈಗ ನಮ್ಮ ರಾಜ್ಯದಲ್ಲಿ ವಿಶೇಷವಾದ ತೊಡಕುಗಳು ಬಂದಿರುತ್ತವೆ ಅಮೃತಮಹಲ್ ಹುಲ್ಲುಗಾವಲಿಗೆ ಬೇಕಾಗುವಷ್ಟು ಸ್ಥಳ ಇದ್ದರೂ ಈವತ್ತಿನ ದಿವಸ ವರ್ಷೇ ವರ್ಷೇ ಈ ಅಮೃತಮಹಲ್ ಹುಲ್ಲುಗಾವಲುಗಳು ನಾಶವಾಗುತ್ತಿವೆ. ಆದ್ದರಿಂದ ಇದಕ್ಕೆ ನಿಯಂತ್ರಣವನ್ನು ಹಾಕಿ ಹುಲ್ಲುಗಾವಲುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ಇದರಲ್ಲಿ ಉತ್ಕೃಷ್ಟವಾದ ತಳಿಗಳನ್ನು ಅಭಿವೃದ್ಧಿಪಡಿಸಿ ಹೆಚ್ಚು ಹೆಚ್ಚು ರೈತರಿಗೆ ಪೂರೈಕೆ ಮಾಡುವಂಥ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ ಜೊತೆಗೆ ಉತ್ತಮವಾದ ಜಾನುವಾರುಗಳನ್ನು ರೈತರಿಗೆ ಒದಗಿಸಿ ಕೊಡುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕು ಇಲಾಖೆಯಲ್ಲಿ ನೀವು ವಿನಿಯೋಗ ಮಾಡಿರುವ ಹಣಕ್ಕಿಂತ ಖರ್ಚಾಗಿರುವ ಹಣವೇ ಜಾಸ್ತಿಯಾಗಿರುತ್ತದೆ. ಹೈನುಗಾರಿಕೆಯಲ್ಲಿ ಎಷ್ಟು ಹಣ ಖರ್ಚಾಗಿದೆ ಎಂದರೆ ವೆಟರ್‌ನರಿ ಸರ್ವೀಸಸ್ ಮತ್ತು ಅನಿಮಲ್ ಹಸ್ಬೆಂಡರಿಗೆ ಅಲಾಟ್ ಮಾಡಿರುವುದು ಪ್ಲಾನ್ ೬೦ ಲಕ್ಷ ನಾನ್ ಪ್ಲಾನ್ ೨೬೪.೦೦ ಇದರಲ್ಲಿ ಖರ್ಚಾಗಿರುವುದು ಪ್ಲಾನ್ ೫೯.೫೦, ನಾನ್‌ಪ್ಲಾನ್ ೧೮೩.೮೯. ಕ್ಯಾಟಲ್ ಡೆವಲಪ್‌ಮೆಂಟ್‌ಗಾಗಿ ಅಲಾಟ ಮಾಡಿರತಕ್ಕಂಥದ್ದು ೩೬.೨೦ ಖರ್ಚಾಗಿರತಕ್ಕಂಥಾದ್ದು ಪ್ಲಾನ್ ೫.೫೨ ನಾನ್ ಪ್ಲಾನ್ ೮೬.೯೬. ಫಾಡರ್ ಮತ್ತು ಫುಡ್ ಡೆವಲಪ್‌ಮೆಂಟ್‌ಗಾಗಿ ಬಡ್ಜೆಟ್ ಅಲಾಟ್‌ಮೆಂಟ್ ನಾನ್‌ಪ್ಲಾನ್ ೧.೧೫ ಇದರಲ್ಲಿ ಖರ್ಚುಮಾಡಿರತಕ್ಕಂಥಾದ್ದು ೦.೯೧. ಡೈರಿ ಡೆವಲಪ್‌ಮೆಂಟ್‌ಗಾಗಿ ಪ್ಲಾನ್ ಬಡ್ಜೆಟ್ ಅಲಾಟ್‌ಮೆಂಟ್ ೪೧.೨೦ ನಾನ್‌ಪ್ಲಾನ್ ೩೪೪.೮೦ ಇದರಲ್ಲಿ ಖರ್ಚು ಮಾಡಿರುವುದು ಪ್ಲಾನ್ ೧.೦೨ ನಾನ್‌ಪ್ಲಾನ್ ೩೧೦.೩೬ ಇಷ್ಟು ಹಣವನ್ನು ಈ ಸದನದಲ್ಲಿ ಕೊಟ್ಟ ಮೇಲೆ ಹೈನುಗಾರಿಕೆಯನ್ನು ಅಭಿವೃದ್ಧಿ ಪಡಿಸುವತ್ತ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾದ ಜವಾಬ್ದಾರಿ ನಮ್ಮ ಮಾನ್ಯ ಮಂತ್ರಿಗಳಿಗೆ ಸೇರಿರುತ್ತದೆ. ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ ೧೬ ಇಲಾಖೆಗಳ ಜೊತೆಗೆ ಇದನ್ನು ಒಂದು ಇಲಾಖೆಯಾಗಿ ಸೇರಿಸಿಕೊಂಡು ಇದಕ್ಕೆ ಹಣವನ್ನು ಖರ್ಚುಮಾಡಬೇಕೆಂದು ಹೇಳುತ್ತಾ ತಕ್ಕ ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದು ಹೇಳುತ್ತೇನೆ ಈ ಇಲಾಖೆಯಲ್ಲಿ ಹಣ ಸೋರಿಹೋಗುತ್ತಿದೆ ಎಂದು ಹೇಳುತ್ತಿರುವುದರಲ್ಲಿ ಅರ್ಥವಾಗುತ್ತಿಲ್ಲ. ಸರ್ಕಾರದವರು ಆಡಳಿತವನ್ನು ನಡೆಸುತ್ತಿರುವ ಇಲಾಖೆಗಳಲ್ಲಿ ಇದನ್ನು ಜೊತೆಯಲ್ಲಿ ಸೇರಿಸಿಕೊಂಡು ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಕರ್ನಾಟಕದಲ್ಲಿ ವೆಟರ್‌ನರಿ ಸರ್ವೀಸ್ ಬಗ್ಗೆ ಹೇಳುವುದಾದರೆ ಒಂದು ಮುಖ್ಯವಾದ ವಿಚಾರವನ್ನು ಹೇಳಬೇಕಾಗಿರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಒಂದೆರಡು ವರ್ಷದ ಹಿಂದೆ ಬೆಂಗಳೂರಿನಲ್ಲಿ ಒಂದು ಸ್ಲಾಟರ್ ಹೌಸನ್ನು ಉದ್ಘಾಟನೆ ಮಾಡತಕ್ಕಂಥ ಸಂದರ್ಭದಲ್ಲಿ ಆಹಾರದ ಕ್ಷಾಮವನ್ನು ಪರಿಹರಿಸುವುದಕ್ಕೆ ಮತ್ತು ಸಸಾರಜನಕ ಆಹಾರವನ್ನು ಜನರಿಗೆ ಸಾಕಷ್ಟು ಪೂರೈಕೆ ಮಾಡುವುದಕ್ಕೆ ಮತ್ತು ಫಾರಿನ್ ಎಕ್ಸ್‌ಚೇಂಜ್ ಗಳಿಸುವುದಕ್ಕೆ ಈ ಸ್ಲಾಟರ್‌ಹೌಸ್ ಬಹಳ ಅವಶ್ಯಕವಾಗಿರುತ್ತದೆ. ಜಾನುವಾರುಗಳನ್ನು ಕಡಿದು ಪೌಷ್ಟಿಕ ಆಹಾರವಾದ ಮಾಂಸವನ್ನು ಒದಗಿಸುವುದಕ್ಕೆ ಪ್ರೋತ್ಸಾಹವನ್ನು ಕೊಡಬೇಕೆಂದು, ಜಾಸ್ತಿ ಜನರು ಇದನ್ನು ಉಪಯೋಗಿಸಬೇಕೆಂದೂ ಕೂಡ ಉಪದೇಶ ಮಾಡಿದರು. ನನ್ನ ಮನಸ್ಸಿಗೆ ಬಹಳ ನೋವಾದರೂ ಕೂಡ ನನಗಂತೂ ಇದನ್ನು ಕೇಳಿ ಒಂದು ರೀತಿಯಲ್ಲಿ ಇದು ಕರೆ ಅನಿಸಿತು. ಆದರೆ ವಿನೋಬಾ ಭಾವೆಯವರು ಕೇರಳ, ಮಧ್ಯಪ್ರದೇಶಗಳಲ್ಲಿ ಸಂಪೂರ್ಣವಾಗಿ ಗೋಹತ್ಯೆಯನ್ನು ತೆಗೆದುಹಾಕಬೇಕೆಂದು ಅನ್ನ ಸತ್ಯಾಗ್ರಹ ಮಾಡುತ್ತೇನೆಂದು ಹಟ ಹಿಡಿದಾಗ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹೋಗಿ ನಮ್ಮ ದೇಶದಲ್ಲಿ ದುರದೃಷ್ಟವಶಾತ್ ಇದನ್ನು ತೆಗೆದರೆ ಒಂದು ಗಂಭೀರವಾದ ಪರಿಣಾಮ ಉಂಟಾಗುತ್ತದೆಂದು ಅವರ ಮನಸ್ಸನ್ನು ಒಲಿಸುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಪತ್ರಿಕೆಗಳಲ್ಲಿ ಗೋಹತ್ಯೆ ಸಂಪೂರ್ಣವಾಗಿ ನಿಷೇಧ ಮಾಡಿದ್ದೇವೆಂದು ಸುದ್ದಿಯನ್ನು ಕೇಳಿ ನನಗೆ ಒಂದು ರೀತಿಯಾದ ವಿಶಾದ ಉಂಟಾಯಿತು

† SRI D DEVARAJ URS (Chief Minister).—Sir, Now that the hon. Member has raised this point, let me clarify the position. It is true that myself, Shri Jagjivan Ram and the Janata Party President Shri Chandrasekhar intervened at the instance of the Central Government. Ofcourse, I did not take it as a public issue. In private I told both the Governments that Vinobhaji would be satisfied if they were to enact the same laws which we have got and I even sent copies of our enactment to them That is all the stand I have taken. It is left to the respective Government to take it or leave it. Now where is that question when the Janata Party members have brought a resolution and got it passed in the Parliament and they are making a move to include this subject in the Concurrent List ?

ಶ್ರೀ ಬಿ. ವಿ. ಕಕ್ಕಿಲಾಯ.—ನಮ್ಮ ರಾಜ್ಯದಲ್ಲೂ ಕೂಡ ಸಂಪೂರ್ಣವಾಗಿ ನಿಷೇದ ಏನೂ ಇಲ್ಲ.

ಶ್ರೀ ಡಿ. ದೇವರಾಜ ಅರಸ್,—ಇದೆ

ಶ್ರೀ ಬಿ. ವಿ. ಕಕ್ಕಿಲಾಯ.—ನಾವು ನೋಡುತ್ತಿದ್ದೇವೆ, ಬೇರೆ ಬೇರೆ.

ಶ್ರೀ ಡಿ. ದೇವರಾಜ ಅರಸ್.— ಪೋಲೀಸ್ ಇದೆ, ಕ್ರಿಮಿನಲ್ ಪ್ರೊಸೀಜರ್ ಇದೆ. ಆದರೂ ಕಳ್ಳತನವಾಗುತ್ತಿದೆ. ಆದರೆ ಅದು ಪೂರ್ತಿ ನಿಷೇದ ಇಲ್ಲ ಎಂಬುದಾಗಿ ಹೇಳುತ್ತೀರಾ ? ಅದೇ ರೀತಿ ಇದೂ ಕೂಡ ಇದೆ. ಆದರೆ ಯಾರಾದರೂ ಕಳ್ಳತನದಿಂದ ಮಾಡಿದರೆ ಏನು ಮಾಡುವುದಕ್ಕಾಗುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಕಾನೂನು ಮಾಡಿ ಮನಸ್ಸಿಗೆ ಸಮಾಧಾನ ಮಾಡಿಕೊಳ್ಳಬಹುದು. ಆದರ ಪ್ರಶ್ನೆ ಬೇರೆ. ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ ಇವತ್ತು ಕೇಂದ್ರ ಸರ್ಕಾರದವರೂ ಕೂಡ ಈ ಪ್ರಶ್ನೆಯನ್ನು ಇವತ್ತು ರಾಜ್ಯದ ಪರಿದಿಯಿಂದ ತೆಗೆದು ಕನ್‌ಕರೆನ್ಸ್ ಲಿಸ್ಟ್‌ಗೆ ಕೊಟ್ಟು ತಿದ್ದುಪಡಿ ಮಾಡುವುದಾದರೆ ಅದು ಸರಿಯಾದುದಲ್ಲ, ಸಾಧುವಾದುದಲ್ಲ. ರಾಜ್ಯ ಸರ್ಕಾರದ ಹಕ್ಕುಗಳ ಮೇಲೆ ಒಂದೊಂದು ರೀತಿಯಲ್ಲಿ ಅಧಿಕಾರವನ್ನು ಪ್ರಯೋಗ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ ಇದನ್ನು ನಾವು ಖಂಡಿತವಾಗಿಯೂ ವಿರೋಧಮಾಡಬೇಕಾಗುತ್ತದೆ. ಇದು ಸಾಧುವಾದ ಕ್ರಮವಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆನಂದಕುಂದ ಹೆಗ್ಗಡೆ (ಬ್ರಹ್ಮಾವರ). —ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಂತಹ ೧೬ ಖಾತೆಗಳ ಬೇಡಿಕೆಗಳನ್ನು ಬೆಂಬಲಿಸುವುದರೊಂದಿಗೆ ಕೆಲವು ವಿಚಾರಗಳನ್ನು ಹೇಳಬೇಕೆಂದಿದ್ದೇನೆ. ಈ ದೇಶವನ್ನು ಮೂರು ಮಂದಿ ಮಾತ್ರ ಎಂಬುದಾಗಿ ಹೇಳಿದ್ದಾರೆ. ಒಂದು ದೊಡ್ಡ ನೀರಾವರಿ ಯೋಜನೆಗಳು, ದೊಡ್ಡ ಭಾವನೆ ಇರುವಂತಹವರು, ಮತ್ತೊಂದು ಕೈಗಾರಿಕಾ ವೃತ್ತಿ ಈ ಮೂರು ಮಾತ್ರ ಈ ದೇಶವನ್ನು ಕಟ್ಟುತ್ತವೆಂದು ಹೇಳಿದ್ದಾರೆ. ನನ್ನ ದೃಷ್ಟಿಯಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ಮೂರು ಸಾಧನೆ ಉಳ್ಳಂತಹವರು ಆದ್ದರಿಂದ ಅವರು ಎಲ್ಲಾ ಖಾತೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಲ್ಲ ಧೈರ್ಯ ಅವರಿಗೆ ಇದೆ ಎಂಬುದನ್ನು ನಾವು ನಂಬಬಹುದು. ಜೊತೆಯಲ್ಲಿ ಎಲ್ಲಾ ಕಾಯಿದೆ ಮತ್ತು ಸುವ್ಯವಸ್ಥೆ ಸಮಸ್ಯೆಯ ಖಾತೆಯೂ ಅವರಲ್ಲಿಯೇ ಇದೆ. ನಮ್ಮ ನಾಗರೀಕ ಪ್ರಜಾಪ್ರಭುತ್ವದ ಪದ್ಧತಿಯಲ್ಲಿ ಶಾಸಕಾಂಗ, ನ್ಯಾಯಾಂಗ ಹಾಗೂ ಕಾರ್ಯಾಂಗ ಹಾಗೂ ಸಾರ್ವಜನಿಕಾಂಗ ಈ ನಾಲ್ಕು ಅಂಗಗಳು ಬಹಳ ಪ್ರಮುಖವಾದುವುಗಳು. ಇದಕ್ಕೆ ಶಕ್ತಿಯನ್ನು ತುಂಬತಕ್ಕವರು ಇದರಿಂದ ಶಕ್ತಿಯನ್ನು ಪಡೆಯತಕ್ಕವರು ಈ ನಾಲ್ಕು ಅಂಗಗಳು ಒಂದಕ್ಕೊಂದು ಪೂರಕವಾಗಿ ಹೊಂದಾಣಿಕೆಯಿಂದ ಹೋಗುವಂತೆ ಮಾಡಿದರೆ ಮಾತ್ರ ಸತ್ಪರಿಣಾಮವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ಸುವ್ಯವಸ್ಥೆ ಎನ್ನುವುದು ಯಾವಾಗಲೂ ತಪ್ಪಾಗಿದೆ. ತಪ್ಪು ಮಾಡುವಂತಹ ವ್ಯಕ್ತಿಗೆ ಶಿಕ್ಷೆಯನ್ನು ಕೊಡಲೇಬೇಕಾಗುತ್ತದೆ. ಶ್ರೀಮಂತರು ಶಕ್ತಿ ಇದ್ದವರು ಈ ದೇಶದಲ್ಲಿ ಕಾನೂನು ಮತ್ತು ನಿಯಮಗಳನ್ನು ಇಳಿಸಿದ್ದಾರೆ ಎನ್ನುವುದು ಸತ್ಯ. ದುರ್ಬಲರು ಬಡವರು ಮತ್ತು ಹಿಂದುಳಿದವರು ಮಾತ್ರ ಕಾನೂನು ಕಾಯಿದೆಗಳನ್ನು ಪಾಲನೆ ಮಾಡುತ್ತಿದ್ದಾರೆ. ಇವರಲ್ಲಿ ಎಲ್ಲರೂ ನಿರ್ವಹಿಸ

ಬೇಕಾದ ಪಾತ್ರ ಇದೆ. ಇದರಿಂದ ಮಾತ್ರ ಪ್ರಜಾಪ್ರಭುತ್ವದ ಮೂಲಗಳನ್ನು ರಕ್ಷಿಸಿಕೊಳ್ಳುವುದಕ್ಕೆ ಕಾಯಿದೆ ವ್ಯವಸ್ಥೆಯನ್ನು ಸುವ್ಯವಸ್ಥಿತ ರೀತಿಯಲ್ಲಿ ಕಾಪಾಡಿಕೊಂಡು ಬರುವುದಕ್ಕೆ ಸಾಧ್ಯವಾಗುತ್ತದೆ. ಒಬ್ಬ ನಾಗರೀಕನು ಒಂದು ಕಛೇರಿಗೆ ಹೋಗಿ ಅಧಿಕಾರಿಗಳ ಹತ್ತಿರ ಹೋಗಿ ಯಾವುದಾದರೂ ಒಂದು ಅರ್ಜಿಯನ್ನು ಕೊಟ್ಟರೆ ವಾರಗಟ್ಟಲೆ ಅದನ್ನು ಅಲ್ಲಿಯೇ ಇಟ್ಟುಕೊಳ್ಳುತ್ತಾರೆ. ಅದರ ಬಗ್ಗೆ ಯಾವುದೇ ನಿರ್ಣಯ ತೆಗೆದುಕೊಳ್ಳುವುದಿಲ್ಲ. ಮೇಲಾಧಿಕಾರಿಗಳ ಹೇಳುತ್ತೇನೆಂದರೆ ಹೇಳಿ ಹೋಗಿ ಎಂಬುದಾಗಿ ಹೇಳುತ್ತಾರೆ. ಆದ್ದರಿಂದ ಸಾರ್ವಜನಿಕರ ಹತ್ತಿರ ಅಧಿಕಾರಿಗಳು ಸರಿಯಾಗಿ ವರ್ತನೆ ಮಾಡುವ ರೀತಿಯಲ್ಲಿ ಸೂಕ್ತ ಆದೇಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಬಂದರುಗಳ ಪೈಕಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ದೇಶದಲ್ಲಿ ಮೂರು ಸಾವಿರ ಮೈಲಿ ಕರಾವಳಿ ಇದೆ. ನಮ್ಮ ರಾಜ್ಯದಲ್ಲಿ ೧೬೦ ಅಥವಾ ೩೦೦ ಕಿಲೋಮೀಟರ್ ಕರಾವಳಿ ಇದೆ. ಇದರಲ್ಲಿ ಮಂಗಳೂರು ನೂತನ ಬಂದರು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದೆ. ರಾಜ್ಯಸರ್ಕಾರದ ಅಧೀನದಲ್ಲಿ ೧೯ ಬಂದರುಗಳಿವೆ. ನಮ್ಮ ರಾಜ್ಯದಲ್ಲಿರುವ ೧೯ ಬಂದರುಗಳನ್ನು ೧೯ ದೇವರುಗಳು ಕಾಪಾಡುತ್ತವೆ ಎಂಬ ನಂಬಿಕೆ ಜನರಲ್ಲಿದೆ. ಅವುಗಳಲ್ಲಿ ವಿಠಲೇಶ್ವರ, ಸೋಮೇಶ್ವರ, ಸೂರತ್ಕಲೇಶ್ವರ ಕಾರ್ಕಳೇಶ್ವರ, ಮರವಂತೇಶ್ವರ, ದೀರೇಶ್ವರ, ಗೋಕರ್ಣೇಶ್ವರ ಹಾಗೂ ಇತ್ಯಾದಿ. ನಮ್ಮ ರಾಜ್ಯ ಸರ್ಕಾರದವರು ೧೦ ಬಂದರುಗಳ ಅಭಿವೃದ್ಧಿಯನ್ನು ತೆಗೆದುಕೊಂಡಿದ್ದಾರೆ. ಇದರಲ್ಲಿ ೧೯ ಬಂದರುಗಳ ಪೈಕಿ ಮಂಗಳೂರು ಹಳೇ ಬಂದರಿಗೆ ರಾಜ್ಯ ಸರ್ಕಾರದವರು ಈಗಾಗಲೇ ದುರಸ್ತಿ ಕಾರ್ಯವನ್ನು ವ್ಯವಸ್ಥೆ ಮಾಡಿದ್ದಾರೆ. ಮಲ್ಪೆಯನ್ನು ಕೇಂದ್ರ ಸರ್ಕಾರದ ಹದ್ದುಬಸ್ತಿನಲ್ಲಿ ಬರುತ್ತದೆ. ನಾಲ್ಕೂವರೆ ಕೋಟಿ ರೂಪಾಯಿಗಳ ಯೋಜನೆಯಲ್ಲಿ ಈ ಒಂದು ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಮತ್ತೆ ಮಂಗಳೂರು ಹಳೇ ಬಂದರಿನಲ್ಲಿ ಸುಮಾರು ೬ ಕೋಟಿ ರೂಪಾಯಿಗಳ ಯೋಜನೆ ಇದ್ದು ಈಗಾಗಲೆ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಆದರೆ ಉಳಿದ ೧೫ ಬಂದರುಗಳಿಗೆ ಯಾವ ವ್ಯವಸ್ಥೆಯೂ ಇಲ್ಲ. ನಮ್ಮ ಜಿಲ್ಲೆಗೆ ಸೇರಿದಂತಹ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಇದರಿಂದ ಸಾಕಷ್ಟು ಅನುಕೂಲ ಸಿಕ್ಕುತ್ತದೆ. ನಮ್ಮಲ್ಲಿರುವ ಬಂದರುಗಳ ಮಹತ್ವ ಬಹಳ ದೊಡ್ಡದು ಇದೆ. ಜೊತೆಯಲ್ಲಿ ಮೀನುಗಾರರ ಅನುಕೂಲಕ್ಕಾಗಿ ನಮ್ಮಲ್ಲಿ ೧೭೦೦ ಯಾಂತ್ರಿಕ ದೋಣಿಗಳು ಇವೆ. ೧೫೦ರಿಂದ ೨೦೦ರ ವರೆಗೆ ಪರ್ಸಿಯನ್ ಬೋಟ್‌ಗಳು ಇವೆ. ಜೊತೆಯಲ್ಲಿ ರಂಪಣಿ ಹಾಗೂ ಪರ್ಸಿನ್ ಬಲೆಗಳೆಂದು ಇವೆ. ಇವು ಬಂದರುಗಳಲ್ಲಿ ತುಂಬಾ ಪಾತ್ರವನ್ನು ನಿರ್ವಹಿಸುತ್ತದೆ. ಪರ್ಸಿಯನ್ ಬೋಟುಗಳು ಹಿಡಿದ ಮೀನುಗಳನ್ನು ತೆಗೆದುಕೊಂಡು ಬರುವುದಕ್ಕೆ ಉಪಯೋಗಿಸುತ್ತಾರೆ. ಅವುಗಳು ಬಂದರಿಗೆ ಬರಬೇಕಾದರೆ ಸಮುದ್ರ ಆಳ ಇಲ್ಲದಿದ್ದರೆ ಬರುವುದಕ್ಕಾಗುವುದಿಲ್ಲ. ಆದ್ದರಿಂದ ಬಂದರಿನಲ್ಲಿ ಸಮುದ್ರದ ಆಳವನ್ನು ಹೆಚ್ಚು ಮಾಡಬೇಕು. ಮತ್ತೆ ನಮ್ಮಲ್ಲಿಂದ ಬೊಂಬಾಯಿಗೆ ಹೋಗಬೇಕಾಗಿದ್ದರೆ ವ್ಯಾಪಾರ ಗಾಳಿ ಬಂದರೆ ೩ ದಿವಸಗಳಲ್ಲಿ ಹೋಗಬೇಕು. ವಿರುದ್ಧ ಗಾಳಿ ಬಂದರೆ ೧೫ ದಿವಸಗಳವರೆಗೂ ಹೋಗಬೇಕಾಗುತ್ತದೆ. ಮತ್ತೆ ಸ್ಥಳ ಇಲ್ಲದೆ ದಿವಸಗಟ್ಟಲೆ ಕಾಯಬೇಕಾಗುತ್ತದೆ. ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಮಾಡುತ್ತಿದ್ದಾರೆ, ಕಾಯುವುದನ್ನು ತಪ್ಪಿಸಿ ಬಂದ ತಕ್ಷಣ ಅದನ್ನು ಬಂದರಿಗೆ ತರುವಂತಹ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು.

ಮತ್ತೆ ನಮ್ಮ ಬಂದರಿನಲ್ಲಿ ಸಾಕಷ್ಟು ಸಗಟುಗಳಿವೆ. ಆದರೆ ಈಗ ಅದನ್ನು ಕೆಲವು ನಿಗದಿಯಾದ ವೇಳೆಯಲ್ಲಿ ಮಾತ್ರ ಮೀನುಗಾರರು ತಂದ ಮೀನುಗಳನ್ನು ಹೊರಗಡೆ ತೆಗೆಯುವುದಕ್ಕೆ ಅನುಕೂಲ ಇದೆ. ಉಳಿದ ಸಮಯದಲ್ಲಿ ಈ ರೀತಿಯ ಅನುಕೂಲ ಇಲ್ಲ. ಆದರೆ ಮೀನುಗಾರರು ೫ ಸಾವಿರ ಕಿಲೋಮೀಟರ್ ದವರೆಗೂ ಹೋಗಿ ವಾಪಸ್ಸು ಬರುವ ಸಮಯದಲ್ಲಿ ಅವರಿಗೆ ಮೀನುಗಳನ್ನು ಹೊರಗಡೆ ತರಲು ಸೂಕ್ತ ಅನುಕೂಲ ಇಲ್ಲದೆ ಇರುವುದರಿಂದ ಬಹಳಷ್ಟು ತೊಂದರೆಯಾಗಿದೆ. ಇದರಿಂದ ಸುಮಾರು ಒಂದು ಲಕ್ಷ ಟನ್ ಮೀನನ್ನು ಮಣ್ಣಿನಲ್ಲಿ ಊತು ಹಾಕಿದ್ದು ಇದೆ. ಆದ್ದರಿಂದ ಇದರ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಈ ಯಾಂತ್ರಿಕ ದೋಣಿಗಳಿಗೆ ಮತ್ತು ಪರ್ಸಿಯನ್ ದೋಣಿಗಳಿಗೆ ನಮ್ಮ ಸರ್ಕಾರ ಸಹಾಯ ಧನ ಕೊಟ್ಟಿದೆ, ಇದು ನಮ್ಮ ದೇಶದಲ್ಲಿರುವ ಹಾಗೆ ಬೇರೆ ಎಲ್ಲೂ ಇಲ್ಲ. ಹೋದ ವರ್ಷ ಈ ಒಂದು ಯಾಂತ್ರಿಕ ದೋಣಿಯಿಂದ ೮೦ ಸಾವಿರ ಟನ್ ಮೀನನ್ನು ಹಿಡಿದಿದ್ದರು. ಈ ವರ್ಷ ಅದರ ಎರಡು ಪಾಲಿನಷ್ಟು ಮೀನನ್ನು ಹಿಡಿದಿದ್ದಾರೆ. ೧ ಲಕ್ಷ ೬೦ ಸಾವಿರ ಟನ್ ಅಷ್ಟು ಮೀನನ್ನು ಹಿಡಿದಿದ್ದಾರೆ.

ಇದರಿಂದ ೪ ಕೋಟಿ ರೂಪಾಯಿ ೧೪ ಕೋಟಿ ರೂಪಾಯಿನಷ್ಟು ವಿದೇಶಿ ವಿನಿಮಯ ಪಡೆದಿದೆ. ನಮ್ಮ ರಾಜ್ಯ ಇದರಿಂದ ಪಡೆದಿರುವಷ್ಟು ವಿದೇಶಿ ವಿನಿಮಯ ಬೇರೆ ಯಾವ ರಾಜ್ಯವೂ ಪಡೆದಿಲ್ಲ. ಇದು ಬಹಳ ಸಂತೋಷದ ವಿಷಯ.

ಇನ್ನು ಪಶುಸಂಗೋಪನೆ ವಿಚಾರದಲ್ಲಿ ಹೇಳುವುದಾದರೆ ಕೋಳಿ ಸಾಕಾಣಿಕೆಗೆ ಈಗ ೪ ಜಿಲ್ಲೆಗಳನ್ನು ಇದರಲ್ಲಿ ಅಳವಡಿಸಿದ್ದಾರೆ. ಇವರಲ್ಲಿ ಮುಖ್ಯವಾಗಿ ಇರಬೇಕಾದಂಥಾದ್ದು ಅನುಭವ. ಈ ಒಂದು ಅನುಭವಕ್ಕಾಗಿ ಎನ್.ಡಿ.ಡಿ.ಬಿ. ಯವರು ಬೇರೆ ಬೇರೆ ರಾಜ್ಯಗಳಿಂದ ಅವರನ್ನು ಕರೆಸಿಕೊಳ್ಳುತ್ತಿದ್ದಾರೆ. ತಮಗೆ ಹೇಳಬೇಕಾದರೆ ಗುಜರಾತಿನ ಆನಂದ ಡೈರಿ ಫಾರಂನವರು ವರ್ಷದಲ್ಲಿ ೧೦-೨೦ ಕೇಂದ್ರದಿಂದ ಅನುಭವಕ್ಕಾಗಿ ಕರೆಸಿಕೊಳ್ಳುತ್ತಾರೆ. ಇದರಿಂದ ಅವರ ಅನುಭವವೂ ಕೂಡ ಇದರಲ್ಲಿ ಹೆಚ್ಚಾಗಿ ದೊರೆಯುತ್ತವೆ. ಅಲ್ಲಿ ಪಶುಪಾಲನೆ ಅನುಭವ, ಮತ್ತು ಪಶುಗಳನ್ನು ಪೋಷಣೆ ಮಾಡುವ ಅನುಭವ ಮತ್ತು ಹಾಲಿನ ವಿತರಣೆ ಮತ್ತು ವಿಭಾಗಗಳ ಅನುಭವ ಮತ್ತು ಮುಖ್ಯ ಕೇಂದ್ರಗಳು ಪರಸ್ಪರ ಪೂರಕವಾಗಿ ಕೆಲಸ ಮಾಡುವ ಒಂದು ವಿಧಾನ ಮತ್ತು ಇದರಲ್ಲಿ ಲಾಭ ಮಾಡುವ ವಿಧಾನ ಇವೆಲ್ಲವೂ ಕೂಡ ಚೆನ್ನಾಗಿ ಗೊತ್ತಾಗುತ್ತದೆ. ಇದು ಒಂದು ಆ ರಾಜ್ಯಕ್ಕೆ ವರದಾನ ಇದ್ದಂತೆ. ಇದಕ್ಕೆ ಎನ್.ಡಿ.ಡಿ.ಬಿ. ಯವರಿಂದ ಯಾವ ರೀತಿ ಒಂದು ಸಹಾಯ ಪಡೆಯುತ್ತಾರೋ ಅದೇ ರೀತಿ ನೀವೂ ಕೂಡ ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ ಇದರಲ್ಲಿ ಸಾಕಷ್ಟು ಸೋರಿ ಹೋಗುತ್ತಾ ಇದೆ ಎಂದು ಮಾನ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಸುಮಾರು ೩೦-೪೦ ಪರ್ಸೆಂಟ್ ಅಷ್ಟು ಸೋರಿ ಹೋಗುತ್ತಾ ಇದೆ. ಇದನ್ನು ಸಾಧ್ಯವಾದಷ್ಟು ಪರಿಶೀಲನೆ ಮಾಡಿ ಇದಕ್ಕೆ ಅಗತ್ಯವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳುತ್ತೇನೆ. ಮತ್ತು ಈ ಬಗ್ಗೆ ಹೇಳಬೇಕಾದರೆ ಉತ್ತರ ಪ್ರದೇಶ ಸರ್ಕಾರದವರು ಈ ಎಲೆಕ್ಟ್ರಿಸಿಟಿ ಏನು ಸೋರಿ ಹೋಗುತ್ತಾ ಇದೆ ಇದಕ್ಕೆ ೧೦೦-೧೨೦ ಕೋಟಿ ರೂಪಾಯಿಯಷ್ಟು ಹಣವನ್ನು ಕೇಂದ್ರದಿಂದ ಧನ ಸಹಾಯ ಪಡೆಯುತ್ತಿದ್ದಾರೆ. ಅದೇ ರೀತಿ ನಮ್ಮ ರಾಜ್ಯ ಸರ್ಕಾರವೂ ಕೂಡ ಪಡೆಯುವುದಕ್ಕೆ ಏತಕ್ಕೆ ಪ್ರಯತ್ನ ಮಾಡಬಾರದು? ಕೇಂದ್ರ ಸರ್ಕಾರದವರು ವಿಶಿಷ್ಟ ಖಾತೆಗಳಿಗಾಗಿ ಒಟ್ಟು ೨ ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ಧನ ಸಹಾಯ ಕೊಡುತ್ತಾ ಇರುವಾಗ ಅಧಿಕೃತವಾಗಿ ಕೊಡುತ್ತಾ ಇರುವಾಗ ತಾವೂ ಕೂಡ ನಮ್ಮ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದಿಂದ ಈ ಬಗ್ಗೆ ಏನು ಸಹಾಯ ಬರಬೇಕೋ ಅದನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ, ಏತಕ್ಕೆಂದರೆ ಇದನ್ನು ನೀವೆ ಹಂಚುತ್ತಿರುವಾಗ ಅವರನ್ನು ಏತಕ್ಕೆ ಕೇಳಬಾರದು ಎಂದು ಕೇಳುತ್ತೇನೆ.

ಇನ್ನು ಬಂದರುಗಳ ಬಗ್ಗೆ ನನ್ನ ಅಭಿಪ್ರಾಯ ಹೇಳುವುದಾದರೆ ಈ ಮೀನುಗಾರಿಕೆಯವರು ಸಮುದ್ರದ ಮಧ್ಯೆ ಹೋಗಿ ಅಪಾಯಕ್ಕೆ ತುತ್ತಾಗುವ ಸಂದರ್ಭ ಇದೆ. ಆದುದರಿಂದ ಇಂತಿಂಥವರು ಅಂದರೆ ಸಾಮಾನ್ಯ ಬೆಸ್ತರು ಇಷ್ಟು ಮೀಟರ್‌ನವರೆಗೆ, ಲಾಂಚ್‌ನವರು ಇಷ್ಟು ಮೀಟರ್‌ನವರೆಗೆ ಹೋಗಬೇಕು ಅದರ ಮುಂದೆ ಹೋಗಬಾರದು ಅಂತ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಮಂಗಳೂರಿನಲ್ಲಿ ಮೀನುಗಾರಿಕೆ ಕಾಲೇಜು ಏನು ಇದೆ ಅದು ಏಷ್ಯಾದಲ್ಲೆಲ್ಲಾ ಅತ್ಯಂತ ದೊಡ್ಡದು. ಅಲ್ಲದೆ ಇದರ ಒಂದು ಉತ್ಪಾದನೆಯೂ ಕೂಡ ಬಾಕಿ ಎಲ್ಲಾ ದೇಶಗಳಿಗಿಂತಲೂ ಹೆಚ್ಚಿಗೆ ಇದೆ. ಆದ್ದರಿಂದ ಪರದೇಶದಿಂದ ಇದರ ಬೇಡಿಕೆ ಬಹಳ ಹೆಚ್ಚಾಗಿ ಇದೆ. ಇದು ಅಂತ ಒಂದು ಉತ್ತಮ ಪ್ರಶಸ್ತಿಯನ್ನು ಪಡೆದಿದೆ. ಈ ಕಾಲೇಜಿನಲ್ಲಿ ದೊಡ್ಡ ಜಾತಿಯ ಮೀನುಗಳನ್ನು ಮತ್ತು ಅನೇಕ ತರಹದ ಜಾತಿಯ ಮೀನುಗಳನ್ನು ತರಿಸುತ್ತಾರೆ. ಅಲ್ಲದೆ ಈ ಒಂದು ವಿಭಾಗ ಸಂಶೋಧನಕ್ಕೂ ಕೂಡ ಒಳಗಾಗಿದೆ. ಈ ಬಗ್ಗೆ ಅತಿ ಮುಖ್ಯವಾಗಿ ಒಂದು ವಿಚಾರ ಹೇಳುವುದೇನೆಂದರೆ ಈ ಕೆಲಸದಲ್ಲಿ ತೊಡಗಿರುವ ಬೆಸ್ತರ ಮಕ್ಕಳು ಏನು ಇದ್ದಾರೆ ಅವರಿಗೆ ಈ ಮೀನುಗಾರಿಕೆ ಕಾಲೇಜಿನಲ್ಲಿ ಓದುವುದಕ್ಕೆ ೨೫ ಪರ್ಸೆಂಟ್ ಅಷ್ಟು ಸೀಟನ್ನು ಮೀಸಲಾತಿಯಾಗಿ ಇಡಬೇಕು ಎಂದು ಹೇಳುತ್ತೇನೆ. ಸಾಮಾನ್ಯವಾಗಿ ಈ ಕೆಲಸವನ್ನು ಮಾಡುವವರು ಸುಮಾರು ೬೦ ಸಾವಿರ ಜನ ಇದ್ದಾರೆ. ಆದ್ದರಿಂದ ನನ್ನ ಅಭಿಪ್ರಾಯ ಹೇಳುವುದಾದರೆ ಈ ಕಾಲೇಜಿನಲ್ಲಿ ಈ ಕೆಲಸದಲ್ಲೇ ತೊಡಗಿರುವ ಬೆಸ್ತರ ಮಕ್ಕಳಿಗೆ ೪೦-೫೦ ಪರ್ಸೆಂಟ್ ಅಷ್ಟಾದರೂ ಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನು ಇದಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಈ ಮೀನುಗಾರಿಕೆಯಲ್ಲಿ ತೊಡಗಿರುವಂಥಾ ಬೆಸ್ತರು ಸಮುದ್ರದಲ್ಲಿ ಮಧ್ಯದಲ್ಲಿ ಮೀನು ಹಿಡಿಯುವುದಕ್ಕೆ ಹೋದಾಗ ಆಕಸ್ಮಾತಾಗಿ ಮರಣ ಹೊಂದುವ ಸಂದರ್ಭವೂ ಉಂಟು. ಒಟ್ಟು ಇವರ ಒಂದು ಪಾಪ್ಯುಲೇಷನ್ ೧ ಲಕ್ಷ ೬೦ ಸಾವಿರ ಜನರು ಇದ್ದಾರೆ. ತಾವು ಯಾವುದಾದರೂ ಒಂದು ರೈಲ್ವೆಯಲ್ಲಿ ಆಕ್ಸಿಡೆಂಟ್ ಆದರೆ ಅಥವಾ ಕೆ.ಎಸ್.ಆರ್.ಟಿ.ಸಿ ಬಸ್‌ನಲ್ಲಿ ಆಕ್ಸಿಡೆಂಟ್ ಆದರೆ ಆತನು ಮರಣ ಹೊಂದಿದರೆ ಅದಕ್ಕೆಲ್ಲಾ ಪರಿಹಾರ ಕೊಡುತ್ತೀರಿ. ಆದರೆ ಈ ಮೀನುಗಾರಿಕೆಯಲ್ಲಿ ಕೆಲಸ ಮಾಡುವ ಜನರು ಅವರ ಒಂದು ವೃತ್ತಿಯಲ್ಲಿ ನಿರತರಾಗಿರುವಾಗ ಆಕಸ್ಮಾತಾಗಿ ಮರಣ ಹೊಂದಿದರೆ ಅವರಿಗೆ ಪರಿಹಾರ ಧನ ಇಲ್ಲಾ. ಈ ಒಂದು ಬಡ ಕುಟುಂಬದವರ ಜೀವನದ ಬಗ್ಗೆ ತಾವು ವಿಮರ್ಶೆ ಮಾಡಿ ಇವರಿಗೂ ಸಹ ಪರಿಹಾರ ಧನ ಒದಗಿಸುವಂತೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಮೀನುಗಾರಿಕೆಗೆ ಸಂಬಂಧಪಟ್ಟ ಹಾಗೆ ಕೇಂದ್ರ ಸರ್ಕಾರದವರು ಒಂದು ಕಾಯಿದೆ ಮಾಡಿದ್ದಾರೆ, ಯಾವ ರೀತಿ ಎಂದರೆ ಸಾಮಾನ್ಯ ಬೆಸ್ತರು ಅಂದರೆ ಆರ್ಡಿನರಿ ಬೆಸ್ತರು ೫ ಮೀಟರ್ ಒಳಗೆ ಹೋಗಬೇಕು ಎಂತಲೂ ಮತ್ತು ಲಾಂಚ್‌ನಲ್ಲಿ ಹೋಗುವವರು ಮುಂದಿನ ೫ ಮೀಟರ್ ಒಳಪಟ್ಟು ಹೋಗಬಹುದು ಎಂತಲೂ ಕೊನೆಯಲ್ಲಿ ಪರ್ಶಿಯನ್ ಬೋಟ್‌ಯಲ್ಲಿಯವರೆಗೆ ಬೇಕಾದರೂ ಹೋಗಬಹುದು ಅಂತ ಮಾಡಿದ್ದಾರೆ. ಈ ಬಗ್ಗೆ ನಾನು ಹೇಳುವುದು ಏನೆಂದರೆ ಈ ಬಗ್ಗೆ ಖಡ್ಡಾಯವಾಗಿ ಆರ್ಡಿನರಿ ಬೆಸ್ತರು ೫ ಮೀಟರ್‌ನಿಂದಾಚೆಗೆ ಹೋಗಬಾರದೆಂತಲೂ ಮತ್ತು ಲಾಂಚ್‌ನವರು ಮಧ್ಯದವರೆಗೆ ಮಾತ್ರ ಹೋಗಬೇಕು ಅದರಿಂದಾಚೆ ಹೋಗಬಾರದೆಂತಲೂ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಹೆಚ್ಚು ಮಾತನಾಡಲು ಸಮಯಾವಕಾಶ ಇಲ್ಲದೆ ಇರುವುದರಿಂದ ನಾನು ನನ್ನ ಮಾತನ್ನು ಇಷ್ಟಕ್ಕೆ ನಿಲ್ಲಿಸಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ (ಬೆಳ್ಳಾವಿ).— ಮಾನ್ಯ ಅಧ್ಯಕ್ಷರೇ, ಈ ೧೬ ಬೇಡಿಕೆಗಳನ್ನು ನಾನು ನೋಡಿದ ಮೇಲೆ ರಾಮಾಯಣದ ರಾವಣನ ಜ್ಞಾಪಕ ಬಂದಿದೆ. ರಾವಣನಿಗೆ ೧೦ ತಲೆ ೨೦ ಕೈಗಳು ಇದ್ದುವು. ಆದರೆ ನಮ್ಮ ಈಗಿನ ಆಧುನಿಕ ರಾವಣ ಆದಂಥಾ ಶ್ರೀಮಾನ್ ದೇವರಾಜ ಅರಸ್‌ರವರಿಗೆ ಒಂದು ತಲೆ ಎರಡು ಕೈಗಳು ಮಾತ್ರ ಇದೆ. ಇದರಲ್ಲಿ ಐರಾವಣ ಶ್ರೀಮಾನ್ ಡಿ. ಬಿ. ಚಂದ್ರೇಗೌಡರು, ಮೈರಾವಣ ಶ್ರೀಮಾನ್ ಬಸವಯ್ಯನವರು. ಇವರುಗಳನ್ನೂ ಕೂಡಿಕೊಂಡು ಈ ಒಂದು ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದನ್ನು ನಾನು ವಿರೋಧ ಮಾಡಬೇಕೇ, ಬಿಡಬೇಕೇ ಅನ್ನುವ ಬಗ್ಗೆ ಸ್ವಲ್ಪ ಅನುಮಾನ ಬಂದಿದೆ. ಅದು ಏನೆಂದರೆ ಮಾನ್ಯ ಮುಖ್ಯಮಂತ್ರಿಗಳು ಒಂದು ವರ್ಷದಲ್ಲಿ ೬೦ ದಿವಸ ಮಾತ್ರ ಬೆಂಗಳೂರಿನಲ್ಲಿ ಇದ್ದುದು ಎಂದು ನಾನು ಕೇಳಿದ್ದೇನೆ. ಆದರೆ ಈ ೧೬ ಇಲಾಖೆಗಳೂ ಸತತವಾಗಿ ಹೇಗೆ ನಡೆದುಕೊಂಡು ಹೋಗುತ್ತಾ ಇವೆ ಎಂದರೆ ಅಲ್ಲಿರತಕ್ಕಂಥಾ ಸೇನಾಧಿಪತಿಗಳಾದಂಥಾ ಸೆಕ್ರೆಟೆರಿಯಟ್ ಅಧಿಕಾರಿಗಳು ನಡೆಸಿಕೊಂಡು ಹೋಗುತ್ತಾ ಇರುವುದರಿಂದ, ಇದಕ್ಕೆ ಅವರೇ ಕಾರಣರಾಗಿರುವುದರಿಂದ ಮೊಟ್ಟಮೊದಲಾಗಿ ನಾನು ಅವರನ್ನು ಅಭಿನಂದಿಸಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ಬೇರೆಯವರು ಹೇಳಿದ ವಿಚಾರವನ್ನು ನಾನು ಮಾತನಾಡುವುದಿಲ್ಲ. ನಾನು ಪಬ್ಲಿಕ್ ಸರ್ವಿಸ್ ಕಮೀಷನ್ ಬಗ್ಗೆ ಮೊಟ್ಟ ಮೊದಲಾಗಿ ಮಾತನಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಅವರ ವಿಚಾರ ಕಿವಿಗೆ ಬಿದ್ದಿರಬೇಕು. ಯಾವ ವಿಚಾರ ಎಂದರೆ ಭ್ರಷ್ಟಾಚಾರದ ಮಾತು, ಈ ಮಾತು ನಮ್ಮ ನಿಮ್ಮಲ್ಲೇ ಅಲ್ಲ, ಎಲ್ಲಿ ಹೋದರೂ ಅಂದರೆ ರೈಲಿನಲ್ಲಿ, ಬಸ್ಸಿನಲ್ಲಿ ಎಲ್ಲಾ ಕಡೆಯಲ್ಲೂ ಇದೇ ಪಿ.ಎಸ್.ಸಿ. ಮಾತನ್ನೇ ಆಡುತ್ತಾರೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದರೆ ಅದೇನು ಇಲ್ಲ, ಯಾವುದಾದರೂ ಒಂದು ಉದಾಹರಣೆ ಕೊಡಿರಿ ಎಂದು ಹೇಳುತ್ತಾರೆ. ನಾನು ಅವರಿಗೆ ಹೇಳುತ್ತೇನೆ ಈ ಮಾತನ್ನು ಈ ಬಗ್ಗೆ ಎಲ್ಲರೂ ಕೂಡ ವ್ಯಾಪಕವಾಗಿ ಮಾತನಾಡಬೇಕಾದರೆ ಇದರಲ್ಲಿ ಏನಾದರೂ ಇದ್ದೇ ಇದೆ ... ತನಗೆ ಹೇಳಿದೆ ಕಾಪರೆ ಹೇಗೆ ಆಡಿದರೆ ಅಲ್ಲಿ ಬೆಂಕಿ ಇದ್ದೇ ಇದೆ ಅನ್ನುವುದು ಅರ್ಥ. ಹಾಗೆ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ. ಇದರಲ್ಲಿ ರಾಜಕೀಯದ ಕೃತ್ಯ ದಿನಗಳಲ್ಲಿ ಅಥವಾ ರಾಜಕೀಯದ ಒಂದು ಭ್ರಷ್ಟಾಚಾರ ಗಳು ಕೇಳಿನ ಆದೇ ಹೋದರೆ ಅಧಿಕಾರಿಗಳ ಭ್ರಷ್ಟಾಚಾರ ಖಂಡಿತವಾಗಿಯೂ ಕಡಿಮೆಯಾಗುವುದಿಲ್ಲಾ. ಯಾವ ಒಂದು ವಿಧಾನಸಭೆ ಇದೆ ಇಲ್ಲಿ ಎಂದರೆ ವಿಧಾನಸೌಧದಲ್ಲಿ ಮೊದಲು ಇದನ್ನು ಅಚ್ಚುಕಟ್ಟು ಮಾಡಿದರೆ ಅನಂತರ

ಕೆಳಗಡೆ ಇರುವ ಜನರು ಅಂದರೆ ಕೆಳ ಅಧಿಕಾರಿಗಳು ಎಫಿಷಿಯೆಂಟ್ ಎಂದು ಏನು ಹೇಳುತ್ತೇವೋ ಆ ಅಧಿಕಾರಿಗಳಲ್ಲಿ ನಾವು ಸ್ವಲ್ಪ ಮಟ್ಟಿಗೆ ಆದರೂ ಕೂಡ ದಕ್ಷತೆಯನ್ನು ಊಹಿಸಬಹುದು. ನಾನು ಈ ಒಂದು ಪಿ.ಎಸ್.ಸಿ. ಮತ್ತು ಜಿ.ಎ.ಡಿ. ಬಗ್ಗೆ ಇಷ್ಟು ಮಾತ್ರ ಹೇಳುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಅಫರ್ಮೇಷನ್ ಸ್ಕೀಂ ಅನ್ನುವ ಒಂದು ಯೋಜನೆ ಏನು ಇದೆ ಇದರಲ್ಲಿ ೨/೩ ಭಾಗ ಹಣ ಕೇಂದ್ರದ ಸಹಾಯ ಮತ್ತು ೧/೩ ಭಾಗ ಹಣ ರಾಜ್ಯ ಸರ್ಕಾರದ ಸಹಾಯ ಧನ ಸಿಗುತ್ತದೆ ಎಂದು ನಾನು ತಿಳಿದಿದ್ದೇನೆ. ನಿಜವಾಗಿಯೂ ಹೇಳಬೇಕಾದರೆ ನಮ್ಮ ರಾಜ್ಯದಲ್ಲಿ ದುರದೃಷ್ಟ ವಶಾತ್ ಎಲ್ಲರೂ ಸಹ ಅಧಿಕಾರಿಗಳ ಮೇಲೆ ಬೀಳುತ್ತಾರೆ. ಯಾವುದು ಯೋಜನೆ ಬಂದರೂ ಕೂಡ ಅಧಿಕಾರಿಗಳು ಮಾಡುತ್ತಾರೆ ಎಂದು ಹೇಳುತ್ತಾರೆ. ಜನಗಳು ಮಾಡತಕ್ಕಂಥಾ ಸ್ಕೀಂಗಳು ಇದ್ದರೂ ಸಹ ಹೀಗೆ ಹೇಳುತ್ತಾರೆ. ಅವರಿಗೆ ಪರಿಪಾಠ ಇನ್ನೂ ಫಲಿಸಲಿಲ್ಲಾ. ಅವರು ಇದನ್ನು ನಮ್ಮದು ಅನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಹೋಗುವುದಿಲ್ಲ.

ಇನ್ನು ಜಾಬ್ ಓರಿಯೆಂಟೆಡ್ ಸ್ಕೀಂ ಬಗ್ಗೆ ಹೇಳಬೇಕಾದರೆ ಮೇಲಧಿಕಾರಿಗಳು ನಮಗೆ ಎಷ್ಟು ದುಡ್ಡು ಬಂದಿದೆ, ಎಷ್ಟು ಖರ್ಚಾಗಿದೆ ಅನ್ನುವುದನ್ನು ನೋಡುತ್ತಾರೆ. ಗೋಧಿ ನಮಗೆ ಎಷ್ಟು ತಲುಪಿದೆ, ಕಾಮಗಾರಿ ಎಷ್ಟು ಆಗಿದೆ ಅನ್ನುವುದನ್ನು ಸರಿಯಾಗಿ ನೋಡುವುದಿಲ್ಲಾ. ಅವರು ಈ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿಲ್ಲಾ. ಆದರೆ ಈ ಸಂದರ್ಭದಲ್ಲಿ ನನ್ನ ಕ್ಷೇತ್ರದ ಒಂದು ಭಾಗದಲ್ಲಿ ಅಧಿಕಾರಿಗಳು ಕೆಲಸ ಮಾಡಿರುವುದನ್ನು ನೋಡಿದರೆ ಅದನ್ನು ನಾನು ಸಮರ್ಥಿಸಲೇ ಬೇಕಾಗಿದೆ. ಅವರ ಬಗ್ಗೆ ನಾನು ಪ್ರಶಂಸೆಯನ್ನು ವ್ಯಕ್ತಪಡಿಸಬೇಕಾಗಿದೆ. ಏತಕ್ಕೆಂದರೆ ೨೦ ವರ್ಷದಿಂದಲೂ ಮಾಡದೇ ಇರುವಂಥಾ ಕೆಲಸಗಳನ್ನು ಈ ಒಂದು ಯೋಜನೆ ೩ ತಿಂಗಳ ಒಳಗೆ ಅವರು ಮಾಡಿದ್ದಾರೆ.

ಸುಮಾರು ಎರಡು ಲಕ್ಷ ರೂಪಾಯಿ ಗಳಿಗೂ ಆಗದೇ ಇರತಕ್ಕ ಕೆಲಸವನ್ನು ಸುಮಾರು ೪೫ ಸಾವಿರ ರೂಪಾಯಿಗಳಲ್ಲಿ ಮಾಡಿ ಮುಗಿಸಿದ್ದಾರೆ. ಒಂದು ಕೆರೆಯ ಕೆಲಸವನ್ನು ಮುಗಿಸಿದ್ದಾರೆ. ಇದನ್ನು ನೋಡಿದರೆ ಮೊದಲಿನಿಂದಲೂ ಕೂಡ ನಮ್ಮ ಯೋಜನೆಗಳು ಜನತೆಯ ಯೋಜನೆಯೆಂದು ಅವರು ಭಾಗವಹಿಸಿ ಹಣವನ್ನು ಖರ್ಚು ಮಾಡಿದ್ದರೆ ಕೆಲಸಗಳು ಸರಿಯಾಗಿ ನಡೆಯುತ್ತಿತ್ತು. ಈ ದಿಸೆಯಲ್ಲಿ ತಾವು ಸ್ವಲ್ಪ ಎಡವಿದ್ದೀರಿ ಎಂದು ಕಾಣುತ್ತದೆ. ಅದೇ ರೀತಿಯ ಲ್ಲಿ ಜಾಬ್ ಅಫರ್ಮೇಷನ್ ಸ್ಕೀಂ. ಈ ಸ್ಕೀಂನಲ್ಲಿ ನಮ್ಮ ಕಡೆ ಆಗಿರುವಷ್ಟು ಕೆಲಸಗಳು ಬೇರೆ ಕಡೆಯಲ್ಲಿ ಏಕೆ ಆಗಿಲ್ಲ ?

೩-೩೦ ಪಿ.ಎಂ.

[ಚೇರ್ಮನ್) (ಶ್ರೀ ಎಂ.ಸಿ. ನಾಸಯ್ಯ ನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.]

ಕಳೆದ ೨೦ ವರ್ಷಗಳಿಂದ ಆಗದೇ ಇರತಕ್ಕ ಕೆಲಸ ಕಾರ್ಯಗಳು ಆಗಿವೆ. ಕೆರೆಗಳನ್ನು ಜನರೊಂದಿಗೆ ಸೇರಿ ಅಧಿಕಾರಿಗಳು ಕಟ್ಟಿದ್ದಾರೆ. ಸಣ್ಣ ಪುಟ್ಟ ಕೆರೆಗಳ ರಿಪೇರಿಯ ಕೆಲಸವನ್ನು ಮಾಡಿದ್ದಾರೆ. ಇಷ್ಟು ಕೆಲಸಗಳು ನಮ್ಮ ಹೋಬಳಿಯಲ್ಲಿ ಹೇಗೆ ಆಯಿತು ? ಅಲ್ಲಿ ಅಧಿಕಾರಿಗಳು ನಿಜವಾಗಿಯೂ ಕೂಡ ಅಧಿಕಾರಿಗಳು ಎನ್ನುವ ಮನೋಭಾವವನ್ನು ಬಿಟ್ಟು ನಾವೂ ಸಹ ರಾಷ್ಟ್ರದ ಜನತೆ ಈ ನಮ್ಮ ಸಮಾಜಕ್ಕೆ ನಾವೂ ಒಂದು ಋಣ ತೀರಿಸಬೇಕು. ರಾಷ್ಟ್ರಕ್ಕೆ ಸೇವೆಯನ್ನು ಸಲ್ಲಿಸಬೇಕು ಎನ್ನುವ ಒಂದು ಒಳ್ಳೆಯ ಮನಸ್ಸು ಮಾಡಿ ಅವರು ಹಳ್ಳಿ ಹಳ್ಳಿಗೆ ಹೋಗಿ ಈ ಯೋಜನೆಯಲ್ಲಿ ಭಾಗವಹಿಸಿ ಪ್ರಚಾರ ಮಾಡಿದರು. ಜನತೆಯೂ ಕೂಡ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಅವರ ಜೊತೆಯಲ್ಲಿ ಕೆಲಸ ಮಾಡಿದ್ದಾರೆ ಹರಿಜನರೂ ಸಹ ನಮ್ಮ ಕಡೆ, ಅವರಿಗೆ ಬೇಕಾದಂಥ ಕೆಲಸವನ್ನು ಅಧಿಕಾರಿಗಳಿಂದ ಮಾಡಿಸಿಕೊಂಡಿದ್ದಾರೆ. ಮತ್ತು ಮಾಡಿದ್ದಾರೆ, ಅಧಿಕಾರಿಗಳು ಈ ಸ್ಕೀಂನ್ನು ಜನತೆಯ ಸ್ಕೀಂ ಎಂದು ತಿಳಿದುಕೊಳ್ಳುವ ರೀತಿಯಲ್ಲಿ ಪ್ರಚಾರ ಮಾಡಿ ಜನಗಳಿಗೆ ಅನುಕೂಲವಾಗುವ ರೀತಿಯಲ್ಲಿ ಕಾರ್ಯಗತ ಮಾಡಿದ್ದಾರೆ. ನಾನು ಮೊನ್ನೆ ಶಿರಾ ತಾಲ್ಲೂಕಿಗೆ ಹೋದಾಗ, ಅಲ್ಲಿ ಜನರು ತಮ್ಮ ಬೆಳೆಯನ್ನು ಹೋದ ವರ್ಷ ಮಂಡಿಗೆ ಹಾಕಿ, ಈ ವರ್ಷ ಬಿಲ್ಲನ್ನು ತೆಗೆದುಕೊಂಡಿದ್ದಾರೆ. ಕೊರಟಗೆರೆಯಲ್ಲಿ ಸುಮಾರು ೨೫ ಮೂಟೆ ಗೋಧಿ ಒಬ್ಬ ಕಂಟ್ರಾಕ್ಟರು ಮನೆಯಲ್ಲಿ ೩೫ ಮೂಟೆ ಅಕ್ಕಿ ಇನ್ನೊಬ್ಬ ಕಂಟ್ರಾಕ್ಟರ್ ಮನೆಯಲ್ಲಿತ್ತು. ಇವರುಗಳ ಮನೆಗಳಿಗೆ ಇದು ಹೋಗುವುದಕ್ಕೆ ಹೇಗೆ ಸಾಧ್ಯ ? ಈ ಒಂದು ಯೋಜನೆಯಲ್ಲಿ ಅಧಿಕಾರಿಗಳೂ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಹೇಗೆ ಸಾಧ್ಯವಿದೆ ಎನ್ನುವುದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಇನ್ನು ಪೋಲೀಸ್ ಇಲಾಖೆಯ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಅನೇಕ ಜನ ಸದಸ್ಯರುಗಳು ಆಗಲೇ ಮಾತನಾಡಿದ್ದಾರೆ. ನಾನು ಆ ವಿಚಾರಗಳನ್ನು ಹೇಳದೆ ಒಂದೆರಡು ಮಾತನ್ನು ಮಾತ್ರ ಹೇಳುತ್ತೇನೆ. ಮೊದಲನೆಯದಾಗಿ, ಅವರಿಗೆ ಕೊಡತಕ್ಕ ಸಂಬಳ ಏನು ಇದೆ ಅದು ಪ್ರಾರಂಭದಲ್ಲಿ ಒಳ್ಳೆಯ ಸಂಬಳವಾಗಿದ್ದು ಮುಂದೆ ಅವರಿಗೆ ಯಾವ ಪ್ರಮೋಷನ್ ಇಲ್ಲ, ಇನ್‌ಕ್ರಿಮೆಂಟ್ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಇತ್ತೀಚೆಗೆ ಎಲ್ಲರೂ ಪೋಲೀಸರನ್ನು ಕಂಡರೆ ಬಹಳ ಆಸೆಯಿಂದಿದ್ದಾರೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ನಾನು ಎರಡನ್ನೂ ಹೇಳುತ್ತೇನೆ. ಒಂದು ಕೈಯನ್ನು ಎರಡು ಮಾಡುವ ವಿದ್ಯೆ ತಮಗೆ ಬಹಳ ಚೆನ್ನಾಗಿ ಬರುತ್ತದೆ. ನಾವು ನಮ್ಮ ಎದುರಿಗೆ ಮಾತನಾಡಬೇಕಾದರೆ ಎಲ್ಲಾ ರೀತಿಯಿಂದಲೂ ಅನುಭವಿಸಿ ಮಾತನಾಡಬೇಕಾಗುತ್ತದೆ. ಈಗ ಈ ಇಲಾಖೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಹುದ್ದೆಯನ್ನು ಮಾಡಿದ್ದಾರೆ, ಇದನ್ನು ಬೇರೆ ರಾಜ್ಯಗಳಲ್ಲಿ ಗೆಜೆಟೆಡ್ ಹುದ್ದೆಯನ್ನಾಗಿ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಏಕೆ ಆ ರೀತಿ ಮಾಡಬಾರದು ? ಮತ್ತೇ ನಮ್ಮ ರಾಜ್ಯದಲ್ಲಿ ಕಳೆದ ೧೬ ವರ್ಷಗಳಿಂದಲೂ ಸರ್ಕಲ್ ಇನ್ಸ್‌ಪೆಕ್ಟರ್‌ಗಳಿಗೆ ಪ್ರಮೋಷನ್ ಇಲ್ಲದೆ ಹೋಗಿದೆ. ಇವರಿಗೆ ಬರಬೇಕಾದಂಥ ಪ್ರಮೋಷನನ್ನು ಏಕೆ ತಡೆಹಿಡಿದಿದ್ದೀರಿ ? ಮತ್ತೆ ಯಾರು ನಿಜವಾಗಿಯೂ ಒಳ್ಳೆ ಕೆಲಸ ಮಾಡುತ್ತಾರೆಯೋ ಅಂಥವರನ್ನು ಸಿಓಡಿಗೆ ಹಾಕಿದ್ದೀರಿ. ಈ ರೀತಿಯಾಗಿ ಸಿಓಡಿ ಹಾಕಲಿಕ್ಕೆ ಏನಾದರೂ ಸ್ಪೆಷಲ್ ಅರ್ಹತೆಗಳು ಇರಬೇಕೇ ? ಇವರು ಒಂದೇ ಜಾತಿಯಲ್ಲಿ ಸಿಕ್ಕುತ್ತಾರೆಯೋ ? ಒಂದೇ ಜನಾಂಗದವರನ್ನು ಏಕೆ ಸಿಓಡಿಗೆ ಹಾಕಿದ್ದೀರಿ ಎಂದು ನಾನು ತಮ್ಮನ್ನು ಪ್ರಶ್ನೆ ಮಾಡಬೇಕಾಗಿದೆ.

ನಮ್ಮ ಕಾನ್‌ಸ್ಟೇಬಲ್ಸ್ ಏನು ಇದ್ದಾರೆ ಅವರು ನಿಜವಾಗಿಯೂ ಸಹ ಬಹಳ ಕಷ್ಟದಲ್ಲಿದ್ದಾರೆ. ತಮ್ಮ ಅವಧಿಯಲ್ಲಾದರೂ ಅವರಿಗೆ ವಾಸಕ್ಕೆ ಮನೆಗಳನ್ನು ಕಟ್ಟಿಸಿಕೊಡಿ. ಇದು ಕನಿಷ್ಟವಾಗಿ ಅವರಿಗೆ ಬೇಕಾಗಿರತಕ್ಕದ್ದು. ಕಾಕಿ ಬಟ್ಟೆಯನ್ನು ಹಾಕಿಕೊಂಡು ದೇವರೇ ಬಂದರೂ ಜನ ನಂಬುವುದಿಲ್ಲ ಎಂದು ನಮ್ಮ ಸಿದ್ದವೀರಪ್ಪನವರು ಹೇಳುತ್ತಿದ್ದರು. ೧೯೫೨ ರಿಂದಲೂ ನಾನು ರಾಜಕೀಯದಲ್ಲಿ ಸತತವಾಗಿ ಒಂದಲ್ಲ ಒಂದು ರೀತಿಯಿಂದ ಇದ್ದೇನೆ. ಇದರ ಒಂದು ಅನುಭವದಿಂದ ಹೇಳುವುದಾದರೆ ಪ್ರತಿಯೊಂದು ಇಲಾಖೆಯಲ್ಲಿ ಎಂದೂ ಇಲ್ಲದಂಥ ರಾಜಕೀಯ ಭ್ರಷ್ಟಾಚಾರ ಇಂದು ಇದೆ, ಮುಂದೆ ಇರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಪೋಲೀಸರಿಗೆ ಒಂದು ಅಭಿಪ್ರಾಯ ಬಂದಿದೆ. ಏನೆಂದರೆ, ಮಾನ್ಯ ದೇವರಾಜ ಅರಸ್ ಅವರ ಹೆಸರನ್ನು ಹೇಳಿದರೆ, ಪ್ರಮೋಷನ್ ಸಿಕ್ಕುತ್ತದೆ, ಕಾಂಗ್ರೆಸ್‌ನವರನ್ನು ಏನೂ ಮಾಡದಿದ್ದರೆ ನಾವು ಸುಖವಾಗಿ ಬಾಳಬಹುದು ಎಂದು ತಿಳಿದುಕೊಂಡಿದ್ದಾರೆ. ಕಾಂಗ್ರೆಸ್ ಪರ ಕೆಲಸ ಮಾಡಿದರೆ ನಮಗೆ ಟ್ರಾನ್ಸ್‌ಫರ್ ಇಲ್ಲ. ಒಂದೇ ಸ್ಟೇಷನ್‌ನಲ್ಲಿಯೇ ಇರಬಹುದು ಎಂದು ತಿಳಿದುಕೊಂಡಿದ್ದಾರೆ. ಕೆಲವರು ಒಂದೇ ಸ್ಟೇಷನ್‌ನಲ್ಲಿರಬೇಕು ಎಂದು ೧೦–೧೫ ಸಾವಿರ ರೂಪಾಯಿಗಳ ಲಂಚವನ್ನು ಕೊಟ್ಟಿದ್ದಾರೆಂದು ಕೇಳಿದ್ದೇನೆ. ಈಗ ಹೊಸ ಐ.ಜಿ.ಪಿ ಬಂದಿದ್ದಾರೆ, ಇವರ ಕಾಲದಲ್ಲಿ ಹೇಗೆ ಆಗುತ್ತದೆಯೋ ನೋಡೋಣ.

ಶ್ರೀ ಡಿ. ದೇವರಾಜ ಅರಸ್.—ಹಿಂದಿನವರು ಹೋದ ಮೇಲೆ ಹೇಳುತ್ತಿದ್ದೀರಲ್ಲಾ ?

ಶ್ರೀ ಜಿ.ಎಸ್. ಶಿವನಂಜಪ್ಪ.—ಅವರು ಇದ್ದಾಗ ಹೇಳುವುದಕ್ಕೆ ನನಗೆ ಅವಕಾಶವೇ ಸಿಕ್ಕಲಿಲ್ಲ. ತಮಗೆ ನಾನು ಇನ್ನೊಂದು ನಿದರ್ಶನವನ್ನು ನಾನು ಕೊಡುತ್ತೇನೆ. ತಾವು ತುಮಕೂರಿಗೆ ಹೊಸದಾಗಿ ಒಬ್ಬ ಸಬ್ ಇನ್ಸ್‌ಪೆಕ್ಟರನ್ನು ಹಾಕಿದ್ದೀರಿ. ಇವರು ಜನತಾ ಪಾರ್ಟಿಯವರು ಯಾರೇ ದೂರುಗಳನ್ನು ಕೊಟ್ಟರೂ ತೆಗೆದುಕೊಳ್ಳುವುದಿಲ್ಲ. ಕಾಂಗ್ರೆಸ್‌ನವರು ಏನು ಬೇಕಾದರೂ ಮಾಡಿ ಎಂದು ಹೇಳುತ್ತಿದ್ದಾರೆ. ತುಮಕೂರಿನ ಜನತೆ ತಮಗೆ ಬೆಳ್ಳಿ ಗಧೆಯನ್ನು ಕೊಟ್ಟಿದ್ದಾರೆ ಅದಕ್ಕೋಸ್ಕರ ಇಂಥ ಸಬ್ ಇನ್ಸ್‌ಪೆಕ್ಟರನ್ನು ತಾವು ಪೋಸ್ಟ್ ಮಾಡುವುದೇ ? ತಮ್ಮ ಸಿಐಡಿ ಯನ್ನು ಅಲ್ಲಿಗೆ ಕಳುಹಿಸಿ ವರದಿಯನ್ನು ತರಿಸಿಕೊಂಡು ನೋಡಿ. ಕಲ್ಲಹಳ್ಳಿ, ಕೆಸರಮಡು, ಕ್ಯಾತ್ಸಂದ್ರ, ಮತ್ತು ತುಮಕೂರಿನ ಸುಮಾರು ೨-೩ ಮೈಲಿ ಸುತ್ತಳತೆ ಮಾನ ಮರ್ಯಾದೆ ಇಟ್ಟುಕೊಂಡಿರತಕ್ಕ ಜನ ಯಾರೂ ಹೊರಗಡೆ ಬರುವುದಕ್ಕೆ ಸಾಧ್ಯವೇ ಇಲ್ಲವಾಗಿದೆ. ಮನೆಗಳನ್ನು ಲೂಟಿ ಮಾಡುತ್ತಿದ್ದಾರೆ. ಪೊಲೀಸರು ಹೋಗುತ್ತಾರೆ. ಯಾರು ಒದೆಯನ್ನು ತಿಂದಿರುತ್ತಾರೋ ಅವರನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಒ ಸರ್ಕಲ್ ಇನ್ಸ್‌ಪೆಕ್ಟರ್ ಬಹಳ ದೊಡ್ಡ ಮನುಷ್ಯ ಇದ್ದಾರೆ. ಅವರು ಹರಿಜನರು ಇದ್ದರೂ ಸಹ ಬಹಳ ಒಳ್ಳೆಯ ರೀತಿಯಿಂದ ಮಾತನಾಡುತ್ತಾರೆ. ಈ ವಿಚಾರದ ಬಗ್ಗೆ ನಾವು ಐಜಿಯ

ವರಿಗೂ ಒರೆದಿದ್ದೇವೆ. ಅಲ್ಲಿರುವಂಥ ಧಾರುಣ ಸ್ಥಿತಿ ಯಾವ ದೇಶಕ್ಕೂ ಬರಬಾರದು ಎಂದು ನಾನು ಹೇಳುತ್ತೇನೆ. ಅನೇಕ ಪಾಳ್ಯಗಾರರು ನಮ್ಮ ದೇಶವನ್ನು ಆಳಿದ್ದಾರೆ, ಮಹಮದೀಯರು ಆಳಿದ್ದಾರೆ, ಬ್ರಿಟೀಷರು ಆಳಿದ್ದಾರೆ, ನೀವು ಆಳುತ್ತಿದ್ದೀರಿ ತಮ್ಮ ಅಧಿಕಾರದಲ್ಲಿ ದಕ್ಷತೆ ಇರಬೇಕು. ಮಾನ್ಯ ಹನುಮಂತಯ್ಯನವರು ಬೆಂಗಳೂರಿನಿಂದ ಶಿವಮೊಗ್ಗಕ್ಕೆ ಹೋಗುತ್ತಾರೆಂದರೆ ಆಗಿನ ಕಾಲದಲ್ಲಿ ಮೂರು ರಸ್ತೆಗಳ ಮಾರ್ಗ ಅಕ್ಕಪಕ್ಕದಲ್ಲಿ ಅಧಿಕಾರಿಗಳು ಭಯದಿಂದ ಯಾವಾಗ ಬರುತ್ತಾರೆಂದು ಸತತವಾಗಿ ನೋಡುತ್ತಿದ್ದರು. ಇವತ್ತಿನ ದಿವಸ ಬೇರೆ ಯಾರಾದರೂ ನಾಯಕರು ಮಂತ್ರಿಗಳು ಬರುತ್ತಾರೆಂದರೆ ಅಧಿಕಾರಿಗಳು ಕೇರ್ ಮಾಡುವುದಿಲ್ಲ. ಇದು ಏಕೆ ಆಯಿತು. ರಾಜ್ಯದಲ್ಲಿ ರಾಜಕೀಯ ಭ್ರಷ್ಟಾಚಾರ ಬಹಳ ಜಾಸ್ತಿಯಾಗಿದೆ. ಮೊದಲು ತಾವು ವಿಧಾನಸೌಧದಲ್ಲಿರತಕ್ಕ ಬ್ರಷ್ಟಾಚಾರವನ್ನು ಕೊನೆಗ ಣಿಸಿದರೆ, ಒಳ್ಳೆಯ ಆಡಳಿತವನ್ನು ತಾವು ನೋಡಬಲ್ಲಿರಿ. ಪರಮಾತ್ಮ ತಮಗೆ ಎಲ್ಲಾ ಶಕ್ತಿಯನ್ನು ಕೊಟ್ಟಿದ್ದಾನೆ. ನೀವು ಮಗುವನ್ನು ತೂಗುವುದು ಬಲ್ಲಿರಿ, ಚಿವುಟುವುದನ್ನೂ ಬಲ್ಲಿರಿ. ನಿಮಗೆ ಎರಡೂ ಬರುತ್ತವೆ. ತಾವು ಕರ್ನಾಟಕದಲ್ಲಿಯೇ ಒಬ್ಬ ಮಹಾನ್ ವ್ಯಕ್ತಿಯಾಗಿದ್ದೀರಿ. ಇಡೀ ರಾಷ್ಟ್ರದಲ್ಲಿಯೇ ಮಹಾನ್ ವ್ಯಕ್ತಿಯಾಗುವುದಕ್ಕೆ ಹೊರಟಿದ್ದೀರಿ. ತಾವು ಆದರೆ ನಾನೂ ತುಂಬಾ ಆಶೆಪಡುತ್ತೇನೆ. ಆದರೆ ಕರ್ನಾಟಕ ಜನಕ್ಕೆ ತಾವು "ಸರ್ವೇ ಜನೋ ಸುಖಿನೋ ಭವಂತು" ಅನ್ನುವ ಹಾಗೆ ಮೊದಲು ಮಾಡ ಬೇಕು. ಎಲೆಕ್ಷನ್‌ಗಳು ಬರುತ್ತವೆ ಹೋಗುತ್ತವೆ, ನಾನು ಒಂದು ಕಡೆ ಇರುತ್ತೇನೆ, ನೀವು ಒಂದು ಕಡೆ ಇರುತ್ತೀರಿ. ಅದು ಮುಖ್ಯವಲ್ಲ. ಜನತೆಯ ಮನೆಗಳು ಲೂಟಿಯಾಗದಂತೆ ನೋಡಿಕೊಳ್ಳಬೇಕಾದ್ದು ತಮ್ಮ ಕರ್ತವ್ಯ. ಬೇರೆಯವರು ನಮ್ಮ ಹೆಂಡಿರ, ತಾಯಿಯ ತಾಳಿಯನ್ನು ಕಿತ್ತುಕೊಂಡು ಹೋಗತಕ್ಕ ದುಷ್ಕೃತ್ಯ ನಮ್ಮ ದೇಶದಲ್ಲಿ ಬರಬಾರದು ಎಂದು ನಾನು ಹೇಳುತ್ತೇನೆ. ನೀವೇ ಇನ್ನೂ ಹತ್ತು ವರ್ಷ ರಾಜ್ಯದಲ್ಲಿ ರಾಜ್ಯಭಾರ ಮಾಡಿ ಆದರೆ ಸಾರ್ವಜನಿಕರ ಶಾಂತಿಗೆ ಭಂಗ ಆಗದಂತೆ ನೋಡಿಕೊಳ್ಳಬೇಕು. ನಮ್ಮ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಬಗ್ಗೆ ಅವರ ನಡತೆ ಬಗ್ಗೆ ನಾನು ೧೦೦ ಜನ ಅಲ್ಲ ೫೦೦ ಜನರಿಂದ ಸಾಕ್ಷಿ ಹೇಳಿಸುವುದಕ್ಕೆ ತಯಾರಾಗಿದ್ದೇನೆ, ಅವರನ್ನು ಬೇರೆ ಕಡೆಗೆ ಹಾಕಿ. ಇವೊತ್ತು ಯಾರನ್ನು ಸಿ.ಒ.ಡಿ.ಗೆ ಹಾಕಿದ್ದೀರೋ ಅವರೆಲ್ಲರೂ ಇವತ್ತು ಹೆಚ್ಚಿನ ಸಂಖ್ಯೆಯಲ್ಲಿ ಒಂದೇ ಜಾತಿಗೆ ಸೇರಿದವರಾಗಿದ್ದಾರೆ. ಆ ಜಾತಿಯವರು ನಿಮಗೆ ಏನು ಮಾಡಿದ್ದಾರೆಂದು ನಾನು ನಿಮ್ಮನ್ನು ಪ್ರಶ್ನೆ ಮಾಡುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಯಾವ ಜಾತಿಯವರು ?

ಶ್ರೀ ಜಿ.ಎಸ್. ಶಿವನಂಜಪ್ಪ.—ಅದು ಯಾವ ಸ್ಪೆಷಲ್ ಕ್ವಾಲಿಫಿಕೇಷನ್ ಸ್ವಾಮಿ ? ಅವರು ಯಾವ ಜಾತಿ ಎನ್ನುವುದನ್ನು ನೀವೇ ಹೇಳಬೇಕು.

ಶ್ರೀ ಡಿ. ದೇವರಾಜ ಅರಸ್.—ನಿಮಗೆ ಗೊತ್ತಿದ್ದರೆ ಹೇಳಿ, ಯಾವ ಜಾತಿಯವರು ಅವರು ?

ಶ್ರೀ ಜಿ. ಎಸ್. ಶಿವನಂಜಪ್ಪ.—ನನಗೆ ಖಂಡಿತವಾಗಿಯೂ ಗೊತ್ತಿಲ್ಲ. ನೀವು ತಮ್ಮಲ್ಲಿ ನಾವು ಎಂ.ಎಲ್.ಎ.ಗಳು. ಮೊದಲು ಭ್ರಷ್ಟಾಚಾರವನ್ನು ಕಡಿಮೆ ಮಾಡಿಕೊಂಡರೆ ನಮ್ಮ ಕೆಳಗಿನವರಲ್ಲಿ ಕಡಿಮೆ ಮಾಡಿಸಬಹುದು. ತಾವು ದೊಡ್ಡ ಮನಸ್ಸು ಮಾಡಿದರೆ ನಿಜವಾಗಿಯೂ ಕೂಡ ಒಳ್ಳೆಯ ರಾಜ್ಯವನ್ನು ಕಟ್ಟಬಲ್ಲಿರಿ. ಇರಿಗೇಷನ್ ಬಗ್ಗೆ ಹೇಳಬೇಕೆಂದರೆ, ತುಮಕೂರಿನ ೩ ತಾಲ್ಲೂಕುಗಳ ಪರವಾಗಿ ತಮ್ಮನ್ನು ಅಭಿನಂದಿಸಬೇಕಾಗಿದೆ. ಏಕೆಂದರೆ, ಹೇಮಾವತಿ ನೀರನ್ನು ತುಮಕೂರು ಜಿಲ್ಲೆಗೂ ಕೊಡುವುದಕ್ಕೆ ತಾವು ವ್ಯವಸ್ಥೆ ಮಾಡಿದ್ದೀರಿ ಇದರ ಚಾನಲ್ ಕೆಲಸ ೯೮೦ರಲ್ಲಿ ಪೂರೈಸುತ್ತದೆಂದು ಹೇಳಿದ್ದೀರಿ. ಆದರೆ ನಮ್ಮ ಜಿಲ್ಲೆಯಲ್ಲಿ ಸರಿಯಾಗಿ ಮಳೆ ಬರದೆ ಸತತವಾಗಿ ಬರಗಾಲ ಅನುಭವಿಸುತ್ತಿರುವ ಇನ್ನೂ ೫ ತಾಲ್ಲೂಕುಗಳಿವೆ. ಅವುಗಳೆಂದರೆ, ಪಾವಗಡ, ಶಿರಾ, ತುಮಕೂರು, ಕೊರಟಗೆರೆ ಹಾಗೂ ಕುಣಿಗಲ್, ಮಧುಗಿರಿ. ತಮ್ಮ ಕಾಲದಲ್ಲಿಯೇ ಈ ತಾಲ್ಲೂಕುಗಳಿಗೂ ಏನಾದರೂ ಮಾಡಿ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ತಮಗೆ ತುಮಕೂರಿನ ಬಗ್ಗೆ ಬಹಳ ಕನಿಕರವಿದೆ. ಈಗ ತುಮಕೂರಿನಲ್ಲಿ ಎಚ್.ಎಂ.ಟಿ. ಯೂನಿಟ್ ಇದೆ. ಎಚ್.ಎ.ಎಲ್. ನವರು ಅಲ್ಲಿ ಒಂದು ಕಾರ್ಖಾನೆ ತೆರೆಯಬೇಕೆಂದಿದ್ದಾರೆ. ಅದೇ ರೀತಿ ಐ.ಟಿ.ಐ.ನವರು ತಮ್ಮ ಒಂದು ಶಾಖೆಯನ್ನು ಅಲ್ಲಿ ತೆರೆಯುತ್ತೇವೆಂದು ಹೇಳುತ್ತಿದ್ದಾರೆ. ಆದಕಾರಣ ತುಮಕೂರಿಗೆ ವ್ಯವಸಾಯಕ್ಕೆ ನೀರು ಕೊಡದಿದ್ದರೂ ಸರಿಯೇ ಅಲ್ಲಿಯ ಜನರಿಗೆ ಕುಡಿಯಲು ನೀರನ್ನಾದರೂ ಒದಗಿಸಿ ಎಂದು ಹೇಳುತ್ತೇನೆ. ತುಮಕೂರಿಗೆ ೮ ಮೈಲಿ ದೂರದಲ್ಲಿರುವ ಚೇಳೂರಿನಿಂದ ನೀರನ್ನು ಬೆಳ್ಳಾವೆ ಕೆರೆಗೆ ಬಿಟ್ಟು, ಅಲ್ಲಿಂದ ತುಮಕೂರು ನಗರಕ್ಕೆ ನೀರನ್ನು ಒದಗಿಸಬೇಕೆಂದು ತಮ್ಮಲ್ಲಿ ಅಲ್ಲಿಯ ನಾಗರೀಕರ ಪರವಾಗಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೇ, ನನಗೆ ಮತ್ತೊಂದು ಪ್ರಿಯವಾದ ಬೇಡಿಕೆ ಎಂದರೆ, ಪಶುಸಂಗೋಪನೆಗೆ ಸಂಬಂಧಪಟ್ಟ ಬೇಡಿಕೆ. ಈಗ ತುಮಕೂರಿನಲ್ಲಿ ಒಂದು ಆಸ್ಪತ್ರೆ ಇದೆ. ಆದರೆ ಮೊಬೈಲ್ ಆಸ್ಪತ್ರೆ ಇದೆ. ಮನುಷ್ಯನಿಗೆ ಕಾಯಿಲೆ ಬಂದರೆ ಕಾರಿನಲ್ಲಿಯೊ, ಗಾಡಿಯಲ್ಲಿಯೋ ಅಥವಾ ಟ್ರೈನ್‌ನಲ್ಲಿಯೋ ಹೋಗಿ ಡಾಕ್ಟರ್‌ಗೆ ತೋರಿಸಬಹುದು. ಆದರೆ ದನಗಳಿಗೆ ಕಾಯಿಲೆ ಬಂದರೆ ಅವುಗಳನ್ನು ಹೊತ್ತು ಕೊಂಡು ಹೋಗುವುದಕ್ಕಾಗುವುದಿಲ್ಲ. ಆದಕಾರಣ ಇವುಗಳಿಗೆ ಕಾಯಿಲೆ ಬಂದರೆ ಫಸ್ಟ್-ಏಡ್ ಮಾಡು ವುದಕ್ಕೆ ಪ್ರತಿ ತಾಲ್ಲೂಕಿನಲ್ಲಿಯೂ ಮೊಬೈಲ್ ಆಸ್ಪತ್ರೆಗಳನ್ನು ಇಡಬೇಕೆಂದು ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಇವುಗಳ ಅಗತ್ಯವಿದೆ ಎಂಬುದರ ಅರಿವು ಅವರಿಗೆ ಆಗಿರಬಹುದು ; ಆದಕಾರಣ ಇವುಗಳ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಡೈರಿ ಡೆವಲಪ್‌ಮೆಂಟ್ ಬಗ್ಗೆ ಹೇಳಬೇಕೆಂದರೆ, ಈ ಸರ್ಕಾರದವರು ಯಾವಾಗಲೂ ಹರಿಜನರ ಮತ್ತು ಗಿರಿಜನರ ಉದ್ಧಾರ ಮಾಡುತ್ತೇವೆಂದು ಘೋಷಣೆ ಮಾಡುತ್ತಾರೆ. ಆದರೆ ಎಷ್ಟು ಜನರಿಗೆ ಎರಡು ಹೊತ್ತಿನ ಊಟ ಸಿಗುತ್ತಿದೆ ಎಂಬುದು ತಮಗೂ ಗೊತ್ತಿದೆ. ಆದಕಾರಣ ತಮಗೇ ನಾದರೂ ಹರಿಜನ ಮತ್ತು ಗಿರಿಜನರ ಬಗ್ಗೆ ಕಳಕಳಿ ಇದ್ದರೆ ಹಾಗೂ ಬಡವರನ್ನು ಉದ್ಧಾರ ಮಾಡ ಬೇಕೆಂಬ ಕಳಕಳಿ ಇದ್ದರೆ, ತಾವು ಕೃಪೆ ಮಾಡಿ ಈ ಇಲಾಖೆಯನ್ನು ರಾಜಕೀಯದಿಂದ ದೂರವಿಟ್ಟು. ಈ ಎಲ್ಲ ಕುಟುಂಬಸವರಿಗೂ ಒಂದೊಂದು ಹಾಲು ಕರೆಯುವ ಎಮ್ಮೆಗಳನ್ನು ಕೊಡುವ ಏರ್ಪಾಡು ಮಾಡಿ. ಒಂದು ಎಮ್ಮೆ ೨-೩ ಲೀಟರ್ ಹಾಲು ಕರೆದರೆ, ವಾರಕ್ಕೆ ೬೦-೭೦ ರೂಗಳನ್ನು ಸಂಪಾದನೆ ಮಾಡ ಬಹುದು. ಖರ್ಚು ಇಪ್ಪತ್ತು ರೂಪಾಯಿಗೆ ಬರಬಹುದು. ಈ ರೀತಿ ಅವರಿಗೆ ಆದಾಯ ಬಂದರೆ, ಅವರಿಗೆ ಹಣದ ಕೊರತೆ ಎಂಬುದು ಇರುವುದಿಲ್ಲ. ಮತ್ತು ಅವರು ಹಣಕ್ಕಾಗಿ ಯಾರ ಮುಂದೆಯೂ ತಲೆ ಬಾಗ ಬೇಕಾದ ಪರಿಸ್ಥಿತಿ ಬರುವುದಿಲ್ಲ. ಆದಕಾರಣ ಈ ಜನರಿಗೆ ಎಮ್ಮೆಗಳನ್ನು ಹಂಚುವುದರ ಮೂಲಕ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತಾ, ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಲ್ಲಿ ಒಂದು ಸಂಬಳದ ವ್ಯತ್ಯಾಸವೇನಿದೆ, ಅದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಈ ಡೈರಿ ಡೆವಲಪ್‌ಮೆಂಟ್ ಬಗ್ಗೆ ಇನ್ನೂ ದುಡ್ಡು ಜಾಸ್ತಿ ಖರ್ಚು ಮಾಡಬೇಕೆಂದು ಹೆಚ್ಚು ರೂಟ್‌ಗಳನ್ನು ತೆಗೆಯಬೇಕೆಂದು ಹೇಳುತ್ತೇನೆ. ನನಗೆ ಈ ಎರಡು ಮಾತುಗಳನ್ನು ಹೇಳಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಿ. ರಾಮೂಗೌಡ (ಹಾಸನೂರು).— ಮಾನ್ಯ ಅಧ್ಯಕ್ಷರೇ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಣ್ಣ ನೀರಾವರಿ ಸಚಿವರು ಈ ಸದನದ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಪೂರ್ಣವಾಗಿ ಸಮರ್ಥಿಸುತ್ತಾ ಕೆಲವು ವಿಷಯಗಳನ್ನು ಅದರಲ್ಲಿಯೂ ಮುಖ್ಯವಾಗಿ ಪೋಲೀಸ್ ಇಲಾಖೆಗೆ ಸಂಬಂಧ ಪಟ್ಟಂತೆ ಕೆಲವು ವಿಷಯಗಳನ್ನು ಪ್ರಸ್ತಾವ ಮಾಡುತ್ತೇನೆ.

ಮೊಟ್ಟ ಮೊದಲನೆಯದಾಗಿ, ಈ ರಾಜ್ಯದ ಆಡಳಿತ ಯಾವ ರೀತಿ ಇರಬೇಕೆಂದರೆ, ಭ್ರಷ್ಟಾಚಾರ ವಿಲ್ಲದೆ ರೈತರಿಗೆ ಉಚಿತವಾಗಿ ಪೋಲೀಸರ ರಕ್ಷಣೆ ಹಾಗೂ ಉನ್ನತ ಮಟ್ಟದ ಶಿಕ್ಷಣ ದೊರೆಯಬೇಕು. ನ್ಯಾಯಾಲಯದ ತೀರ್ಪು ಅಗ್ಗವಾಗಿ ಸಿಗುವಂತಾಗಬೇಕು ಎಂಬತಕ್ಕಂಥ ನೀತಿಯನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅಳವಡಿಸಿಕೊಂಡು, ಈ ರಾಜ್ಯದ ಮೂಲೆ ಮೂಲೆಗಳಲ್ಲಿಯೂ ಶಾಂತಿ ಮತ್ತು ನೆಮ್ಮದಿ ತಾಂಡವವಾಡುವ ರೀತಿಯಲ್ಲಿ ಆಡಳಿತ ನಡೆಸಿಕೊಂಡು ಬಂದಿದ್ದಾರೆ. ಈ ರಾಜ್ಯದಲ್ಲಿ ಕಾನೂನು ಪರಿಪಾಲನೆ ಎಷ್ಟರ ಮಟ್ಟಿಗಿದೆ ಎಂಬುದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇನೆ. ಏನೆಂದರೆ, ಸ್ಫುರ ದ್ರೂಪಿಯಾದಂಥ ಒಬ್ಬ ಮಹಿಳೆ ಅಮೂಲ್ಯವಾದಂಥ ಆಭರಣಗಳನ್ನು ಮೈಮೇಲೆ ಹಾಕಿಕೊಂಡು ಒಂಟಿ ಯಾಗಿ ಈ ರಾಜ್ಯದ ಮೂಲೆ ಮೂಲೆಯಲ್ಲಿಯೂ ಯಾವ ತೊಂದರೆಯೂ ಇಲ್ಲದಂತೆ ಓಡಾಡಿಕೊಂಡು ಬರಬಹುದಾಗಿದೆ. ಈ ರೀತಿಯಲ್ಲಿ ಕಾನೂನಿನ ವ್ಯವಸ್ಥೆಯನ್ನು ಪರಿಪಾಲನೆ ಮಾಡಿಕೊಂಡು ಬರಲಾಗು ತ್ತಿದೆ. ಈ ಇಲಾಖೆಯಲ್ಲಿ ದಕ್ಷವಾದಂಥ ಮತ್ತು ಪ್ರಾಮಾಣಿಕವಾದಂಥ ಅಧಿಕಾರಿಗಳಿದ್ದಾರೆಂಬುದನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಕೆಲವು ರಾಜ್ಯಗಳಲ್ಲಿ ತಮ್ಮ ಸರ್ಕಾರದ ಅಸ್ತಿತ್ವವನ್ನು ಉಳಿಸಿಕೊಳ್ಳು ವುದಕ್ಕಾಗಿ ಪೋಲೀಸ್ ಪಡೆಯನ್ನು ಬಳಸಿಕೊಳ್ಳುತ್ತಿದ್ದರೆ, ಈ ರಾಜ್ಯ ಆ ಒಂದು ಅಪವಾದದಿಂದ ಹೊರ ಗುಳಿದಿದೆ. ಶ್ರೀಮತಿ ಇಂದಿರಾಗಾಂಧಿಯವರನ್ನು ಲೋಕಸಭೆಯಿಂದ ಉಚ್ಛಾಟನೆ ಮಾಡಿದಾಗ ಈ ದೇಶದ ನಾನಾ ಭಾಗಗಳಲ್ಲಿ ದಂಗೆಗಳಾದವು. ಅದರಂತೆ ನಮ್ಮ ರಾಜ್ಯದ ಕೆಲವು ಕಡೆಗಳಲ್ಲಿ ದಂಗೆಗಳಾದವು. ಆ ಸಮಯದಲ್ಲಿ ಒಂದು ದಿವಸ ಪೋಲೀಸರು ನಿಷ್ಕ್ರಿಯರಾಗಿದ್ದರು. ಮತ್ತೊಂದು ದಿವಸ ಪೋಲೀಸ್

ಕಾರ್ಯಾಚರಣೆ ಅತಿರೇಖವಾಗಿತ್ತು. ಆದಕಾರಣ ಈ ಎರಡು ಅಂಶಗಳ ಬಗ್ಗೆ ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆಯಾಗಬೇಕೆಂದು ವಿರೋಧ ಪಕ್ಷದವರು ಒತ್ತಾಯ ಮಾಡಿದಾಗ, ಮಾನ್ಯ ಮುಖ್ಯಮಂತ್ರಿಗಳು ಅಂತಹ ಪ್ರಕರಣ ಯಾವ ಸ್ಥಳಗಳಲ್ಲಿ ನಡೆದಿದೆ ಎಂಬುದನ್ನು ನಿರ್ದಿಷ್ಟವಾಗಿ ತಮ್ಮ ಗಮನಕ್ಕೆ ತಂದರೆ, ಅದರ ಬಗ್ಗೆ ಖಂಡಿತವಾಗಿ ವಿಚಾರ ಮಾಡುವುದಾಗಿ ಹೇಳಿದರು. ಇದರ ಒಂದು ಅರ್ಥವೇನೆಂದರೆ, ಈ ರಾಜ್ಯದಲ್ಲಿ ಈ ಇಲಾಖೆಯ ದಕ್ಷತೆಯನ್ನು ಹೆಚ್ಚಿಸುವ ಒಂದು ದ್ಯೋತಕವಾಗಿದೆ ಎಂದು ಅವರ ಉತ್ತರದಿಂದ ಹೇಳಬಹುದು; ಮಾನ್ಯ ಮುಖ್ಯಮಂತ್ರಿಗಳು ಈ ಇಲಾಖೆಯನ್ನು ಸರಿಯಾಗಿ ನಡೆಸಿಕೊಂಡು ಹೋಗುತ್ತಿದ್ದಾರೆಂಬುದಕ್ಕೆ ಇದೊಂದು ನಿದರ್ಶನವೇ ಸಾಕು. ಯಾವ ಅಂತಸ್ಥಿನ ಅಧಿಕಾರಿಯೇ ತಪ್ಪು ಮಾಡಲಿ, ಆ ಬಗ್ಗೆ ಬಹಿರಂಗವಾಗಿ ವಿಚಾರಣೆ ಮಾಡಿಸುವುದರ ಮೂಲಕ ಈ ಸರ್ಕಾರ ಬೇರೆ ರಾಜ್ಯಗಳ ಸರ್ಕಾರಗಳಿಗೆ ಮಾದರಿಯಾಗಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಪೋಲೀಸ್ ದಳ ಯಾವ ಅಸ್ತಿತ್ವಕ್ಕೆ ಬಂತು ಎಂಬುದನ್ನು ಯೋಚನೆ ಮಾಡಿದಾಗ ಬಹುಶಃ ೧೮೬೧ರಲ್ಲಿ ಕಲ್ಕತ್ತೆಯಲ್ಲಿ ಮೊದಲು ಪ್ರಾರಂಭವಾಯಿತು. ಬ್ರಿಟೀಷರು ಈ ಭಾರತ ದೇಶವನ್ನು ಆಳುತ್ತಿದ್ದಾಗ ಅವರ ವಿರುದ್ಧವಾಗಿ ಬಂಡಾಯವೇಳತಕ್ಕಂಥ ಜನರನ್ನು ಸದೆಬಡಿಯಲು ಈ ಪೋಲೀಸ್ ಪಡೆಯನ್ನು ಅವರು ಅಸ್ತಿತ್ವದಲ್ಲಿ ತಂದರು. ನಮಗೆ ಸ್ವಾತಂತ್ರ್ಯ ಬಂದ ನಂತರ ಅದೇ ದಳವನ್ನು ಈಗಿನ ಒಂದು ವಾತಾವರಣಕ್ಕೆ ಸಜ್ಜು ಮಾಡಲಾಗಿದೆ. ಈ ಪೋಲೀಸ್ ಪಡೆ ಅನೇಕ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ನಾಗರಿಕರ ಹಕ್ಕುಬಾಧ್ಯತೆಗಳನ್ನು ಹಾಗೂ ಕಾನೂನಿನ ರಕ್ಷಣೆಯನ್ನು ಅದು ಕಾಪಾಡಿಕೊಂಡು ಬರುತ್ತಿದೆ. ಈ ಒಂದು ಇಲಾಖೆಯನ್ನು ಯಾವ ದೃಷ್ಟಿಯಲ್ಲಿ ನೋಡಬೇಕೋ ಆ ಒಂದು ದೃಷ್ಟಿಯಲ್ಲಿ ನೋಡಲಿಲ್ಲವೆಂದು ನನ್ನ ಸ್ನೇಹಿತರೊಬ್ಬರು ಹೇಳಿದರು. ಇನ್ನೊಬ್ಬರು ಮಾನ್ಯ ಸದಸ್ಯರು ಹೇಳಿದರು, ಪೋಲೀಸಿನವರು ಲಾರಿ ನಿಲ್ಲಿಸಿ ಹತ್ತು ರೂಗಳನ್ನು ಪಡೆದುಕೊಂಡರು ಎಂದು, ಇದೊಂದು ಕಾರಣದಿಂದಲೇ ಈ ಇಲಾಖೆ ಭ್ರಷ್ಟಾಚಾರದಿಂದ ಕೂಡಿದೆ ಎಂದು ಹೇಳುವುದು ಸರಿಯಲ್ಲ. ಭ್ರಷ್ಟಾಚಾರ ನಡೆಯಲು ಸಾರ್ವಜನಿಕರೂ ಕಾರಣಕರ್ತರೆಂದು ಹೇಳಬೇಕಾಗುತ್ತದೆ. ಪೋಲೀಸಿನವರು ಹಣ ಕೇಳಿದಾಗ ಲಾರಿ ಮಾಲೀಕ ಅದನ್ನು ಮೇಲಿನ ಅಧಿಕಾರಿಗಳ ಗಮನಕ್ಕೆ ತರಬೇಕಾಗಿತ್ತು. ಆಗ ಅವರು ಅದನ್ನು ವಿಚಾರಣೆ ಮಾಡುತ್ತಿದ್ದರು. ಆದರೆ ಲಾರಿಯವರು ಮಾಡುವ ತಪ್ಪನ್ನು ಮುಚ್ಚಿಕೊಳ್ಳಲು ತೆರೆಯ ಮರೆಯಲ್ಲಿ ಪೋಲೀಸಿನವರ ಕೈಬಿಸಿ ಮಾಡುವುದು ಭ್ರಷ್ಟಾಚಾರವಲ್ಲವೇ? ಇಂತಹ ಜನರೇ ಅಲ್ಲಿ ಕೆಲಸ ಸರಿಯಾಗಿ ಆಗುತ್ತಿಲ್ಲ, ಅದು ಭ್ರಷ್ಟಾಚಾರದಿಂದ ಕೂಡಿದೆ ಎಂದು ಆಪಾದನೆ ಮಾಡುತ್ತಾನೆ. ಈ ಸದನದ ಮೂಲಕ ನಾನು ಸಾರ್ವಜನಿಕರಿಗೆ ಒಂದು ಸವಾಲು ಹಾಕುತ್ತೇನೆ. ಏನೆಂದರೆ, ಸಬ್–ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಭರ್ತಿ ಮಾಡತಕ್ಕಂಥ ಸಮಿತಿಯಲ್ಲಿ ದಕ್ಷರಾದಂಥ ಹಾಗೂ ಪ್ರಾಮಾಣಿಕರಾದಂಥ ಅಧಿಕಾರಿಗಳಿದ್ದಾರೆ. ಆದರೂ ಕೂಡ ಅವರ ಬಗ್ಗೆ ಯಾರಾದರೂ ತಪ್ಪುಗಳನ್ನು ತೋರಿಸಿದ್ದೇ ಆದರೆ, ನಾನು ಯಾವ ಶಿಕ್ಷೆ ಬೇಕಾದರೂ ಅನುಭವಿಸಲು ಸಿದ್ಧನಾಗಿದ್ದೇನೆ. ಅಲ್ಲಿ ಒಳ್ಳೆಯ ಪ್ರಾಮಾಣಿಕ ರೀತಿಯಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳಿದ್ದಾರೆ. ಅವರ ಬಗ್ಗೆ ಈ ರೀತಿಯಾಗಿ ಚುಚ್ಚಿ ಮಾತನಾಡುವುದು ಸರಿಯಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯದ ಎಲ್ಲ ಕಡೆಗಳಲ್ಲಿಯೂ ಪೋಲೀಸ್ ಠಾಣೆಗಳಿವೆ ಮತ್ತು ಪೋಲೀಸ್ ಸಿಬ್ಬಂದಿಗಳಿದ್ದಾರೆ. ಆದರೆ ರಾಜ್ಯದಲ್ಲಿ ಎಲ್ಲಿಯೋ ಒಂದು ಕಡೆ ಕಳ್ಳತನವಾಯಿತು, ಹಗಲು ದರೋಡೆ ನಡೆಯಿತು ಎಂದ ಮಾತ್ರಕ್ಕೆ ಎಲ್ಲ ಪೋಲೀಸ್ ಠಾಣೆಗಳನ್ನು ಮುಚ್ಚಿಬಿಡುವುದಕ್ಕಾಗುವುದಿಲ್ಲ. ಎಲ್ಲೋ ಏನೋ ನಡೆಯಿತೆಂದು, ಈ ಇಲಾಖೆಯ ಬಗ್ಗೆ ಈ ರೀತಿ ಮಾತನಾಡುವುದು ಸರಿಯಲ್ಲವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅತಿ ಮುಖ್ಯವಾಗಿ ತಕ್ಕದ್ದು ಪಟ್ಟಣಗಳಿಗಿಂತ ಹಳ್ಳಿಗಳಲ್ಲಿ ಹೆಚ್ಚಿನ ಸಮಸ್ಯೆ ಇರುವುದರಿಂದ ಗ್ರಾಮಗಳಲ್ಲಿ ಪೋಲೀಸ್ ಠಾಣೆಗಳನ್ನು ಹೆಚ್ಚು ಮಾಡಬೇಕು. ೮೦ ಪರ್ಸೆಂಟ್ ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ಭೂ ವಿವಾದಗಳು ಸಾಮಾಜಿಕ ಕೆಲಸ ಕಾರ್ಯಗಳು ಸಾಮಾಜಿಕ ಬಿಕ್ಕಟ್ಟುಗಳು, ಸಂಪತ್ತಿಗೆ ಸಂಬಂಧಪಟ್ಟ ವ್ಯವಹಾರಗಳು ಹಾಗೂ ರಾಜಕೀಯ ಪ್ರಜ್ಞೆ ಉಂಟಾಗಿರುವುದು. ಈ ಕಾರಣಗಳಿಂದಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಪೋಲೀಸರ ಉಪಯುಕ್ತತೆ ಹೆಚ್ಚಾಗಿದೆ. ಈಗಿರತಕ್ಕ ಪೋಲೀಸ್ ಠಾಣೆಗಳಿಂದ ಸಮಸ್ಯೆಗಳನ್ನು ಎದುರಿಸಲು ಕಷ್ಟವಾಗಿದೆ. ಈ ದೃಷ್ಟಿಯಿಂದ ಪೋಲೀಸ್ ಠಾಣೆಗಳನ್ನು ಹೆಚ್ಚು ಮಾಡಬೇಕಾಗಿದೆ. ಪಂಚಾಯಿತಿಗಳಿಗೆ ಕೆಲವು ಕೆಲಸಗಳನ್ನು ವಹಿಸಿದ್ದರೂ ಕೂಡ ಇವತ್ತು ಅವು ನಿಷ್ಕ್ರಿಯವಾಗಿಕೊಂಡಿವೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಸವರ್ಣೀಯರು ಸವರ್ಣ ಹಿಂದುಗಳು ಹಾಗೂ ಹರಿಜನ ಗಿರಿಜನರು ಇವರುಗಳ ಮಧ್ಯೆ ಬಿಕ್ಕಟ್ಟುಗಳು ಬರುತ್ತ ಇವೆ. ದೊಡ್ಡ ಜಮೀನುದಾರರ ಭೂ ಸಂಬಂಧವ ವ್ಯಾಜ್ಯ ಹಕ್ಕಿ [illegible] ಪ್ರಕರಣಗಳು ಇವುಗಳಿಂದಾಗಿ ಗ್ರಾಮಾಂತರ ಜನಗಳು ತತ್ತರಿಸು

ತ್ತಿದ್ದಾರೆ. ಈ ಕಾರಣದಿಂದಾಗಿ ಪೋಲೀಸ್ ಠಾಣೆಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ನಿರ್ಮಾಣ ಮಾಡಬೇಕು. ಗ್ರಾಮಾಂತರ ಪ್ರದೇಶದಲ್ಲಿ ಪೋಲೀಸರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವಂತೆ ಸಜ್ಜು ಮಾಡಬೇಕು. ಇವತ್ತು ನಮ್ಮ ಜನಸಂಖ್ಯೆಗೆ ಅನುಗುಣವಾಗಿ ಪೋಲೀಸರ ಜನಸಂಖ್ಯೆ ಹೆಚ್ಚಿಲ್ಲ. ಇವತ್ತು ಗ್ರಾಮಾಂತರ ಪೋಲೀಸ್ ಠಾಣೆಯ ಔಟ್ ಪೋಸ್ಟ್‌ಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪೋಲೀಸ್ ಪೇದೆಗಳು ಇಲ್ಲ. ಅಕ್ರಮ ಅನ್ಯಾಯಗಳನ್ನು ತಡೆಗಟ್ಟುವುದಕ್ಕೆ ಪೋಲೀಸರ ಸಜ್ಜು ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಅಕ್ರಮ ಮತ್ತು ಕಳ್ಳತನ, ದರೋಡೆ ಇವುಗಳನ್ನು ತಡೆಗಟ್ಟಬೇಕಾದರೆ ಪೋಲೀಸ್ ಪೇದೆಗಳ ಸಂಖ್ಯೆ ಹೆಚ್ಚಬೇಕು.

ಇನ್ನು ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಪೋಲೀಸ್ ಇಲಾಖೆಯಲ್ಲಿ ಸೇವೆಯನ್ನು ಸಲ್ಲಿಸುವವರು ನಿವೃತ್ತರಾಗುವುದಕ್ಕೆ ಎರಡು ಮೂರು ತಿಂಗಳುಗಳ ಮುಂಚೆ ಅವರನ್ನು ಯಾವುದೇ ಕೊಲೆ, ದರೋಡೆ ಮುಂತಾದ ಕೇಸುಗಳ ತನಿಖೆಗೆ ನೇಮಿಸಬಾರದು. ಏತಕ್ಕೆಂದರೆ ಆ ಅಧಿಕಾರಿ ತನ್ನ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವುದಿಲ್ಲ. ಇನ್‌ವೆಸ್ಟಿಗೇಷನ್ ಸರಿಯಾಗಿ ಮಾಡುವುದಿಲ್ಲ ಇದರಿಂದ ಜನಗಳಿಗೆ ಅನ್ಯಾಯವಾಗುತ್ತದೆ. ನಮ್ಮ ಕಡೆ ಒಂದು ಆಗಬಾರದ ಕೆಲಸ ಆಯಿತು. ಎರಡು ಕೊಲೆಗಳು ಆಯಿತು. ಯಾರು ಕೊಲೆಗೆ ಪ್ರಚೋದನೆ ಕೊಟ್ಟು ಕೊಲೆ ಮಾಡಬೇಕೆಂದು ಉದ್ದೇಶಪೂರ್ವಕವಾಗಿ ಮಾಡಿದರೋ ಅಂಥಹವರನ್ನು ಅಪರಾಧಿ ಸ್ಥಾನದಿಂದ ಬಿಟ್ಟು ಬಿಟ್ಟಿದ್ದಾರೆ. ಬೇರೆಯವರನ್ನು ಅಪರಾಧಿ ಸ್ಥಾನಕ್ಕೆ ತಂದಿದ್ದಾರೆ. ಈ ದೃಷ್ಟಿಯಿಂದ ಯಾವ ಪೋಲೀಸ್ ಅಧಿಕಾರಿಯು ಈ ಅಪರಾಧವನ್ನು ವಿಚಾರಣೆಗಾಗಿ ತೆಗೆದುಕೊಂಡಿದ್ದರೋ ಅವರು ನಿವೃತ್ತರಾಗುವವರಿದ್ದರು. ಆದ್ದರಿಂದ ಅವರು ಸರಿಯಾದ ರೀತಿಯಲ್ಲಿ ತನಿಖೆ ಕೆಲಸ ಮಾಡಲಿಲ್ಲ. ನಿವೃತ್ತರಾಗುವುದಕ್ಕೆ ೨-೩ ತಿಂಗಳು ಅವಧಿ ಇರತಕ್ಕವರನ್ನು ಯಾವುದೇ ಇನ್‌ವೆಸ್ಟಿಗೇಷನ್‌ಗೂ ನೇಮಕ ಮಾಡಬಾರದು.

ಇನ್ನು ನೀರಾವರಿಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ೧೯೫೬–೫೭ನೇ ಸಾಲಿನಲ್ಲಿ ರಾಜ್ಯದಲ್ಲಿ ನೀರಾವರಿಗೆ ಒಳಪಟ್ಟಂತಹ ಕ್ಷೇತ್ರ ಶೇಕಡ ೪೪.೩೧. ಇದರಲ್ಲಿ ೨೨.೩ ಪರ್ಸೆಂಟ್ ನಾಲೆಗಳಿಂದ ಕೆರೆಗಳಿಂದ, ೧೭.೫ ಪರ್ಸೆಂಟ್ ಬಾವಿಗಳಿಂದ ಹಾಗೂ ೧೫.೯ ಇತರೆ ಮೂಲಗಳಿಂದ ನೀರನ್ನು ಪಡೆಯುತ್ತಿದ್ದರು. ೭,೪೦.೨೬೦ ಹೆಕ್ಟೇರ್ ನೀರಾವರಿ ೧೯೫೬–೫೭ರಲ್ಲಿ ಇತ್ತು. ಆಮೇಲೆ ೨೦ ವರ್ಷಗಳಲ್ಲಿ ಈ ನೀರಾವರಿ ಕ್ಷೇತ್ರ ದ್ವಿಗುಣವಾಗಿದೆ. ೧೯೭೫–೭೬ರಲ್ಲಿ ೧೩,೭೪ ೫೫೫ ಹೆಕ್ಟೇರ್ ಪ್ರದೇಶ ನೀರಾವರಿಯಾಗಿದೆ. ಇದರಲ್ಲಿ ನಾಲೆಗಳಿಂದ ೩೫.೫ ಪರ್ಸೆಂಟ್ ನೀರನ್ನು, ಕೆರೆಗಳಿಂದ ೩೦.೫ ಪರ್ಸೆಂಟ್ ನೀರನ್ನು, ಬಾವಿಗಳಿಂದ ೨೪.೮ ಪರ್ಸೆಂಟ್ ನೀರನ್ನು ಪಡೆಯುತ್ತಿದ್ದೇವೆ. ಕಳೆದ ೨೦ ವರ್ಷಗಳಲ್ಲಿ ನಾಲೆಗಳು ಬಾವಿಗಳು. ಇವುಗಳಿಂದ ನೀರನ್ನು ಪಡೆಯುತಕ್ಕ ಕ್ಷೇತ್ರ ಜಾಸ್ತಿಯಾಗಿದೆ. ಆದರೆ ಕೆರೆಗಳ ನಿರ್ಮಾಣ ಕಡಿಮೆ ಆಗಿದೆ. ಈ ಬಗ್ಗೆ ನಿಮಗೆ ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಹಳ್ಳಗಳ ಮುಖಾಂತರ ನೀರನ್ನು ಕೆರೆಗಳಿಗೆ ಶೇಖರಿಸುತ್ತೇವೆ. ಆದರೆ ಇದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಸ್ವಲ್ಪ ದಿವಸಗಳಲ್ಲಿ ಕೆರೆಯಲ್ಲಿ ಹೂಳು ತುಂಬಿ ನೀರನ್ನು ಶೇಖರಣೆ ಮಾಡತಕ್ಕಂತಹ ಪ್ರಮಾಣ ಕಡಿಮೆಯಾಗುತ್ತದೆ. ಆದಕಾರಣ ಈ ಕೆರೆಗಳಿಗೆ ಖರ್ಚು ಮಾಡಿದಂತಹ ಹಣಕ್ಕೆ ಸರಿಯಾದ ಪ್ರತಿಫಲ ಬರುವುದಿಲ್ಲ. ಇದಕ್ಕೆ ಬದಲಾಗಿ ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಸಣ್ಣಪುಟ್ಟ ತೊರೆಗಳು ಏನು ಹರಿಯುತ್ತವೆ ಅವುಗಳ ಪ್ರವಾಹ ಹೋಗದೆ ಹೋಗದಹಾಗೆ ನೀರನ್ನು ತಡೆದು ಭೂಮಿಯಲ್ಲಿ ಇಂಗಿಸಬೇಕು. ಇದರಿಂದ ಅಂತರ ಜಲ ಸಂಪತ್ತು ಜಾಸ್ತಿಯಾಗುತ್ತದೆ. ಇದರಿಂದ ಬಾವಿಗಳಲ್ಲಿ ಹೆಚ್ಚು ನೀರು ಸಂಗ್ರಹವಾಗುತ್ತದೆ. ನೀರು ಹೊಳೆಗಳಲ್ಲಿ ಹರಿದು ಹೋಗುವಾಗ ೧ ಕಿ.ಮಿ. ೨ ಫರ್ಲಾಂಗ್, ೩ ಫರ್ಲಾಂಗ್ ಅಂತರದಲ್ಲಿ ಇವುಗಳಿಗೆ ಕಲ್ಲಿನ ಕಟ್ಟೆಗಳನ್ನು ಹಾಕಿ ನೀರನ್ನು ಇಂಗಿಸಬೇಕು. ಅದನ್ನು ಹೊರಕ್ಕೆ ಬಿಡಬಾರದು. ಇದರಿಂದಾಗಿ ಬಾವಿಗಳಲ್ಲಿ ನೀರು ಬರುವುದಕ್ಕೆ ಅವಕಾಶವಾಗುತ್ತದೆ. ಹಾಗೂ ನೀರಿನ ಮಟ್ಟ ಜಾಸ್ತಿಯಾಗುತ್ತದೆ. ಈ ನೀರನ್ನು ಸದುಪಯೋಗಪಡಿಸಿಕೊಳ್ಳಬಹುದು.

ಇನ್ನು ನಮ್ಮ ಮೈಸೂರು ಜಿಲ್ಲೆಯಲ್ಲಿ ಸಣ್ಣ ನೀರಾವರಿಗೆ ಸಂಬಂಧಪಟ್ಟ ಹಾಗೆ ಒಬ್ಬರು ತನಿಖಾಧಿಕಾರಿಯನ್ನು ಹಾಕಿದ್ದೀರಿ. ಅವರು ೧೭ ಕೇಸುಗಳನ್ನು ಮಾತ್ರ ಮಾಡುವುದಕ್ಕೆ ಸಾಧ್ಯ. ಅಲ್ಲಿರತಕ್ಕ ೩೫ ಇನ್‌ವೆಸ್ಟಿಗೇಷನ್‌ಗಳನ್ನು ಸಕಾಲದಲ್ಲಿ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಎಲ್ಲೆಲ್ಲಿ ಕೆಲಸ ಜಾಸ್ತಿ ಇದೆ ಅಲ್ಲೆಲ್ಲಾ ಇನ್ನೊಂದು ವಿಭಾಗವನ್ನು ತೆರೆದು ಅದಕ್ಕೆ ಬೇಕಾದಂತಹ ಇಂಜಿನಿಯರ್

ಗಳನ್ನು ನೇಮಿಸಿ ಹೆಚ್ಚಿನ ರೀತಿಯಲ್ಲಿ ಕೆಲಸ ಆಗುವಂತೆ ಮಾಡಬೇಕು. ಸಣ್ಣ ನೀರಾವರಿಗೆ ಸಂಬಂಧಪಟ್ಟ ಹಾಗೆ ವರ್ತೋಲಿನ ಇರುವಂತೆ ಮಾಡಬೇಕು. ಅಸಮಾನತೆಗೆ ಅವಕಾಶ ಕೊಡಬಾರದು. ನಮ್ಮ ಮೈಸೂರು ಜಿಲ್ಲೆಯಲ್ಲಿ ಸಾಕಷ್ಟು ಕೆಲಸ ಆಗಿಲ್ಲ. ಒಂದೆರಡು ಕೆರೆಗಳನ್ನು ಮಾತ್ರ ಮಾಡಿದ್ದಾರೆ. ಒಂದು ದೊಡ್ಡ ಜಲಾಶಯವನ್ನು ಮಾಡುವುದಕ್ಕೆ ಮಾನ್ಯ ಮಂತ್ರಿಯವರ ಪ್ರೀತಿಯಿಂದ ಮಂಜೂರು ಮಾಡಿದ್ದಾರೆ. ಅಲ್ಲಿ ಸಾಕಷ್ಟು ಕೆಲಸ ನಡೆದಿಲ್ಲ. ಆದ್ದರಿಂದ ದಯವಿಟ್ಟು ಅಲ್ಲಿ ಕೆಲಸ ಕಾರ್ಯಗಳು ನಡೆಯುವಂತೆ ಗಮನಿಸಬೇಕು.

ಇನ್ನು ಮೈನ್ಸ್ ಅಂಡ್ ಜಿಯಾಲಜಿ ಬಗ್ಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಕರೀ ಕಲ್ಲು ಹೇರಳವಾಗಿ ಸಿಕ್ಕುತ್ತದೆ. ಆದ್ದರಿಂದ ಸರ್ಕಾರಕ್ಕೆ ಬರತಕ್ಕದ್ದು ಟನ್ನಿಗೆ ಕೇವಲ ೧೦ ರೂಪಾಯಿ. ಆದರೆ ಇದರಿಂದ ನಷ್ಟ ಜಾಸ್ತಿಯಾಗುತ್ತಿದೆ. ಆ ಕರೀ ಕಲ್ಲಿನ ಬಂಡೆಯನ್ನು ಹೊಡೆದು ಕೆಳಕ್ಕೆ ಉರುಳಿಸಿದಾಗ, ಆ ಕಲ್ಲು ಕೆಳಗೆ ಸಿಕ್ಕಿದ ವೃಕ್ಷ ಸಂಪತ್ತು ಹಾಳಾಗುತ್ತಿದೆ. ಫಲವತ್ತಾದ ಮಣ್ಣು ಕೆಳಕ್ಕೆ ಹೋಗುತ್ತದೆಂದು ಆದ್ದರಿಂದ ಅನೇಕ ವರ್ಷ ಅಲ್ಲಿ ಏನನ್ನೂ ಬೆಳೆಯುವುದಕ್ಕಾಗುವುದಿಲ್ಲ. ಆದ್ದರಿಂದ ಅಲ್ಲಿ ಕಲ್ಲು ಹೊಡೆಯುವುದಕ್ಕೆ ಯಾರಿಗೂ ಅವಕಾಶವನ್ನು ಕೊಡಬಾರದು. ಕಾಡನ್ನು ಕಾಪಾಡಬೇಕು.

ಇನ್ನು ಮಾನ್ಯ ಮುಖ್ಯಮಂತ್ರಿಗಳು ೧೦–೧೫ ಲಕ್ಷ ರೂಪಾಯಿಗಳನ್ನು ಒದಗಿಸಿ ಜನತಾ ವಸತಿ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಇದು ನಮ್ಮ ಮುಖ್ಯಮಂತ್ರಿಗಳ ಹೃದಯಪೂರ್ವಕ ಮತ್ತು ಅಚ್ಚುಮೆಚ್ಚಿನ ಒಂದು ಯೋಜನೆ. ರಸ್ತೆ ಮತ್ತು ಕೆರೆಗಳ ಕೆಲಸ ಮಾಡುವುದಕ್ಕಿಂತ ಇದ ಉತ್ತಮವಾದ ಕೆಲಸ. ಇದರಿಂದ ರೈತರಿಗೆ, ಬಡವರಿಗೆ ಹರಿಜನ ಗಿರಿಜನರಿಗೆ ಜನತಾ ವಸತಿ ಯೋಜನೆ ಮುಖಾಂತರ ಮನೆಗಳನ್ನು ಕಟ್ಟಿಕೊಡತಕ್ಕ ಕೆಲಸ ಏನಿದೆ ಇದು ಒಳ್ಳೆಯ ಸ್ತುತ್ಯಾರ್ಹವಾದ ಕೆಲಸ. ಇವತ್ತು ನಮ್ಮ ಕ್ಷೇತ್ರದಲ್ಲಿ ಸುಮಾರು ೨೦೦ ಮನೆಗಳನ್ನು ಕಟ್ಟಿಸಿದ್ದಾರೆ. ಎಲ್ಲೆಲ್ಲಿ ಬಡವರಿಗೆ ನಿವೇಶನಗಳನ್ನು ಒದಗಿಸಿದೆ ಅಂಥ ಕಡೆಗಳಲ್ಲಿ ಅವರಿಗೆ ಮನೆಗಳನ್ನು ಕಟ್ಟಿಕೊಡುವುದಕ್ಕೆ ಈ ಜನತಾ ವಸತಿ ಯೋಜನೆಯಲ್ಲಿ ಹಣವನ್ನು ಒದಗಿಸಿ ಅವುಗಳನ್ನು ಪೂರ್ತಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೪–೦೦ ಪಿ. ಎಂ.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಶ್ರೀಮಾನ್ ಚಂದ್ರೇಗೌಡರು ಸುಮಾರು ೧೬ ಬೇಡಿಕೆಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಇದರ ಒಟ್ಟು ಮೊತ್ತ ೩೦೪ ಕೋಟಿ ರೂಪಾಯಿಗಳಾಗುತ್ತವೆ. ೨೮ ಕೋಟಿ ರೂಪಾಯಿಗಳ ಶ್ರೀಮಾನ್ ಚಂದ್ರೇಗೌಡರ ಬೇಡಿಕೆಯನ್ನು ಬಿಟ್ಟರೆ ಮಾನ್ಯ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಇಟ್ಟಿರತಕ್ಕಂಥಾದ್ದು ನಮ್ಮ ೮೮೯ ಕೋಟಿ ರೂಪಾಯಿಗಳ ವಾರ್ಷಿಕ ವರಮಾನ ಏನಿದೆ ಅದರ ಮೂರನೇ ಒಂದು ಭಾಗದಷ್ಟು ಹಣವನ್ನು ಖರ್ಚುಮಾಡತಕ್ಕಂಥ ಬೇಡಿಕೆಯನ್ನು ಇಟ್ಟಿದ್ದಾರೆ. ಎರಡು ದಿವಸಗಳಲ್ಲಿ ಈ ಚರ್ಚೆಮುಕ್ತಾಯವಾಗಬೇಕು ಎಂದು ನಿಗದಿಮಾಡಿದ್ದಾರೆ, ಆಗಬಹುದು. ಆದರೆ ಈ ೧೬ ಬೇಡಿಕೆಗಳ ಮೇಲೆ ನಾನು ಚರ್ಚೆಮಾಡದೆ ಬಹುಶಃ ನನ್ನ ಭಾವನೆಯಲ್ಲಿ ಬಹಳ ಮುಖ್ಯವಾದಂಥ ಭಾರಿ ನೀರಾವರಿ ಹಾಗೂ ಆಡಳಿತಯಂತ್ರದ ಬಗ್ಗೆ ಕೆಲವು ಸಲಹೆಗಳನ್ನು, ಸೂಚನೆಗಳನ್ನು ಕೊಡಬೇಕು ಎಂದು ನಾನು ಅಭಿಪ್ರಾಯ ಪಡುತ್ತೇನೆ. ಸ್ವಾಮಿ, ನಾನು ಮೈಸೂರು ಜಿಲ್ಲೆಯವನಾಗಿ ಬಹುಶಃ ಮೊಟ್ಟ ಮೊದಲನೆಯದಾಗಿ ಈ ಅಧಿವೇಶನದಲ್ಲಿ ನಮ್ಮ ಜಿಲ್ಲೆಯಲ್ಲಿ ಒಂದು ಯಶಸ್ವಿಯಾದ ಕಾರ್ಯವನ್ನು ಈ ವರ್ಷ ಮಾನ್ಯ ಮುಖ್ಯ ಮಂತ್ರಿಗಳು ನಡೆಸಿಕೊಟ್ಟಿದ್ದಾರೆ. ಬಹುಶಃ ಕನ್ನಂಬಾಡಿಯಿಂದ ವರುಣಾನಾಲೆ ಮಾಡತಕ್ಕಂಥಾದ್ದು ಏನಿದೆ ಇದೊಂದು ರಾಜಕೀಯ ಕುತಂತ್ರ ಪೊಲಿಟಿಕಲ್ ಸ್ಟಂಟ್ ಎಂದು ಬಹಳ ದಿವಸ ತಿಳಿದುಕೊಂಡಿದ್ದ ನಮ್ಮ ನೆರೆ ಜಿಲ್ಲೆಯಾದ ಮಂಡ್ಯ ಜಿಲ್ಲೆಯ ರೈತರಲ್ಲಿ ಈ ವರುಣಾ ನಾಲೆ ಬಗ್ಗೆ ಏನು ಒಂದು ತಪ್ಪು ಕಲ್ಪನೆ ಇತ್ತು, ಅದನ್ನು ಈ ವರ್ಷ ಮಾನ್ಯ ಮುಖ್ಯ ಮಂತ್ರಿಗಳು ಸಂಪೂರ್ಣವಾಗಿ ಹೋಗಲಾಡಿಸಿ ಎರಡೂ ಜಿಲ್ಲೆಯ ರೈತರಲ್ಲಿ ವಿಶ್ವಾಸ ಮೂಡಿಸಿ ಬಹಳ ಕಾಲದ ಕನಸು ಏನಿತ್ತು ಅದನ್ನು ನನಸು ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಬಹುಶಃ ಅವರು ಪ್ರಯತ್ನ ಪಡದೇ ಇದ್ದ ಪಕ್ಷದಲ್ಲಿ ಅಥವಾ ಹೆಚ್ಚಿನ ಪ್ರಯತ್ನ ಪಡದೇ ಇದ್ದರೆ ಅದು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ, ಬಹಳ ದಿವಸದಿಂದ ಮಾಡಬೇಕು ಎಂದು ಇದ್ದಂಥ

ನಾಲೆ, ಅಷ್ಟೇ ಇಲ್ಲ ಎರಡೂ ಜಿಲ್ಲೆಗಳ ರೈತರಲ್ಲಿ ಒಂದುರೀತಿಯ ಜಿಜ್ಞಾಸೆ ಬಂದಿತ್ತು. ಏನೆಂದರೆ, ಬಹುಶಃ ವರುಣಾನಾಲೆ ಆಗುವುದರಿಂದ ನಮ್ಮ ವ್ಯವಸಾಯಕ್ಕೆ ಧಕ್ಕೆ ಬರುತ್ತದೆ ಎನ್ನತಕ್ಕಂಥ ತಪ್ಪುಕಲ್ಪನೆ ಮಂಡ್ಯ ಜಿಲ್ಲೆಯ ರೈತರಲ್ಲಿತ್ತು, ಬಹುಶಃ ಇದು ಆಗುವುದಿಲ್ಲವೇನೋ ಎನ್ನುವ ಕಲ್ಪನೆ ಮೈಸೂರು ಜಿಲ್ಲೆಯ ರೈತರಿಗೆ ಬಂದಿತ್ತು. ಇದನ್ನು ಬಗೆಹರಿಸುವುದಕ್ಕಾಗಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೈ ಪವರು ಕಮಿಟಿ ಮಾಡಿದ್ದರು. ಆ ಕಮಿಟಿಯವರ ತಜ್ಞರ ವರದಿಯನ್ನು ತರಿಸಿಕೊಂಡು ಬಹುಶಃ ಮಂಡ್ಯ ಜಿಲ್ಲೆಯ ರೈತರಿಗೆ ಇದರಿಂದ ಅನುಕೂಲವಾಗಬೇಕು. ಹುಲಿಕೆರೆ ಟನಲ್ ಮತ್ತು ಛಾನಲ್ಸ್ ರೀ ಅಲೈನ್‌ಮೆಂಟ್ ಅದರ ಕೆಪಾಸಿಟಿ ಇನ್‌ಕ್ರೀಸ್ ಮಾಡಬೇಕು ಎಂದು ಏನು ಶಿಫಾರಸು ಮಾಡಿದ್ದಾರೆ. ಆ ಕೆಲಸವನ್ನು ಪ್ರಾರಂಭಮಾಡಿ ರೈತರ ಹೆದರಿಕೆಯನ್ನು ಹೋಗಲಾಡಿಸಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಸ್ವಾಮಿ ಮೈಸೂರು ಜಿಲ್ಲೆಯಲ್ಲಿ ನೀರಾವರಿ ಪ್ರಗತಿ ಎಷ್ಟರಮಟ್ಟಿಗೆ ಆಗಿದೆ ಎನ್ನುವುದಕ್ಕೆ ಕಬಿನಿ ಜಲಾಶಯವನ್ನು ನಾವು ಅವಲೋಕನೆ ಮಾಡತಕ್ಕಂಥಾದ್ದು ಒಳ್ಳೆಯದೆಂದು ಕಾಣುತ್ತದೆ. ಸದಸ್ಯರಿಗೆ ಏನು ಪರ್‌ಫಾರ್ಮೆನ್ಸ್ ಬಜೆಟ್ ಕೊಟ್ಟಿದ್ದಾರೆ ಅದನ್ನೂ ಕೂಡ ನಾನು ನೋಡುತ್ತಾ ಇದ್ದೇನೆ ಬಹುಶಃ ೧೯೭೫ರಲ್ಲಿ ಕಬಿನಿ ಜಲಾಶಯದ ಕೆಲಸವನ್ನು ಮುಗಿಸಿ ಛಾನಲ್‌ಗಳನ್ನು ಮಾಡಬೇಕಾದುದು ಬಾಕಿ ಇತ್ತು. ಈ ವರ್ಷ ಕೂಡ ಛಾನಲ್‌ಗಳಿಗೆ ಹಣವನ್ನು ಕೊಡುತ್ತಾ ಇದ್ದಾರೆ. ಬಹುಶಃ ತಾವು ಕೊಟ್ಟಿರತಕ್ಕ ಫರ್‌ಫಾರ್ಮೆನ್ಸ್ ಬಡ್ಜೆಟ್‌ನ್ನು ನೋಡುವುದಾದರೆ, ಕೆನಾಲ್ಸ್ ಮತ್ತು ಬ್ರಾಂಚಸ್‌ಗೆ ೧೯೭೭–೭೮ ಲ್ಲಿ ೪೭೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ರಿವೈಸ್ಡ್ ಎಸ್ಟಿಮೇಟ್ಸ್ ಫಾರ್ ೧೯೭೮–೭೯ನಲ್ಲಿ ಸುಮಾರು ೬೨೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ೧೯೭೯–೮೦ ಕ್ಕೆ ಕ್ಯಾನಲ್ಸ್ ಅಂಡ್ ಬ್ರ್ಯಾಂಚಸ್‌ಗೆ ೪೫೨ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ ಇದಕ್ಕೆ ಕಾರಣವೇನು ತಾವು ಕಬಿನಿ ಅಂದಾಜನ್ನು ನೋಡುವುದಾದರೆ ೧೯೭೭–೭೮ ಕ್ಕೆ ೫ ಕೋಟಿ ೪೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅದು ಖರ್ಚಾಗಿದೆ. ೧೯೭೮–೭೯ರಲ್ಲಿ ೫ ಕೋಟಿ ೭೦ ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೀರಿ. ಆದರೆ ವರ್ಷದ ಕೊನೆಯಲ್ಲಿ ಅಂದಾಜು ರಿವೈಜಾಗಿ ೭ ಕೋಟಿ ೭೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಈ ವರ್ಷ ೬ ಕೋಟಿ ೫೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈ ವರ್ಷಹಣವನ್ನು ಕಡಿಮೆ ಮಾಡಿದ್ದಾರೆ. ಅದಲ್ಲೂ ಪ್ರಾಜೆಕ್ಟ್ ಮುಗಿದಿದೆ. ನೀರನ್ನು ತೆಗೆದಿದ್ದಾರೆ. ಆದಕ್ಕೆ ಹೆಚ್ಚಿನ ರೀತಿಯಲ್ಲಿ ಹಣವನ್ನು ಪ್ರೊವೈಡ್ ಮಾಡದೆ ಕಡಿಮೆ ಮಾಡುತ್ತಾ ಇರುವುದರಿಂದ ಬಹುಶಃ ಅಲ್ಲಿನ ಪ್ರಗತಿ ಕುಂಠಿತವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ತಾವು ತಮ್ಮ ವರದಿಯಲ್ಲಿ ಹೇಳುತ್ತೀರಿ ಏನೆಂದರೆ ಇನ್ನು ಒಂದು ವರ್ಷದಲ್ಲಿ, ' Right back canal is cpmpleted upto 26 k m. and an area of 1050 hectares of potential has been created It is programmed to complete the right bank caral upto 95 k. m. in all respects and create potential of 3,920 hectares by June 1979. During 1979-80 a potential of 10,080 hectares will be created and the canal will be completed upto 18 k m " ಬಹುಶಃ ತಾವು ಕಳೆದ ವರ್ಷ ೭ ಕೋಟಿ ೭೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ ಆದಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡುವುದಾದರೆ ಈ ವರ್ಷ ಕಬಿನಿ ಪ್ರಾಜೆಕ್ಟ್ ಕೆಳಗೆ ೨೫ ೩೦ ೪೫ ಸಾವಿರ ಎಕರೆಗಳಿಗೆ ನೀರಾವರಿಯಾಗಿ ಸಾಗುವಳಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ವರ್ಷ ಏನು ಹಣವನ್ನು ಒದಗಿಸಿಟ್ಟಿದ್ದೀರಿ ಅದು ಸಂಪೂರ್ಣವಾಗಿ ಸಾಲುವುದಿಲ್ಲ ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಅಪೇಕ್ಷೆ ಪಡುತ್ತೇನೆ. ಮತ್ತು ಎರಡನೇ ಕಾಲಂ ನೋಡುವುದಾದರೆ, ಕಬಿನಿ ಪ್ರಾಜೆಕ್ಟ್‌ನಲ್ಲಿ ಎರಡು ಸ್ಟೇಜ್‌ಗಳಲ್ಲಿ ಒಂದಾದ ರೈಟ್ ಬ್ಯಾಂಕ್‌ನಲ್ಲಿ ಸುಮಾರು ೨ ಲಕ್ಷ ಎಕರೆಗೆ ನೀರನ್ನು ಒದಗಿಸುವುದರ ಜೊತೆಗೆ ಕಬಿನಿ ನದಿ ವಿಶೇಷವಾಗಿ ನೀರು ಇರತಕ್ಕ ನದಿ ಎನ್ನುವುದು ತಜ್ಞರ ಅಭಿಪ್ರಾಯ. ಬಹುಶಃ ಸೆಕೆಂಡ್ ಸ್ಟೇಜ್ ಆಫ್ ಕಬಿನಿ ಬಗ್ಗೆ ನಮ್ಮ ತಜ್ಞರ ಅಭಿಪ್ರಾಯ ಏನು ಪಟ್ಟಿದ್ದಾರೆ ಎಂದರೆ ಕಬಿನಿ ವ್ಯಾಲಿಯಿಂದ ೧೨೦ ಅಡಿ ಲಿಫ್ಟ್ ಮಾಡುವುದಾದರೆ ನುಗು ವ್ಯಾಲಿಗೆ ನೀರನ್ನು ತರಬೇಕು, ನುಗು ವ್ಯಾಲಿಯಿಂದ ಕೆನಾಲ್ ತೆಗೆದುಕೊಂಡು ಹೋದರೆ ಗುಂಡ್ಲುಪೇಟೆ, ಬೇಗೂರು ಹೋಬಳಿ ನಂಜನಗೂಡಿನ, ಕಾಪಲಂದಿ ಹೋಬಳಿ, ಚಾಮರಾಜನಗರ ತಾಲ್ಲೂಕು ಹಾರ್ವೆ ಹೋಬಳಿಯ ಕೆಲವು ಗ್ರಾಮಗಳಿಗೆ ಅಂದರೆ ೬೫ ಸಾವಿರ ಎಕರೆಗೆ ಸಾಗು ಆಗತಕ್ಕಂಥಾದ್ದು ಕಬಿನಿ ಸೆಕೆಂಡ್ ಸ್ಟೇಜಿನಲ್ಲಿದೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಇದರ ಬಗ್ಗೆ ತಾವು ಯಾವ ಪ್ರಯತ್ನವನ್ನೂ ಇನ್ನೂ ಕೈಗೊಂಡಿಲ್ಲ. ಈಗಾಗಲೇ ಬಹಳಷ್ಟು ವಿಳಂಬವಾಗಿದೆ.

ಈ ದಿಶೆಯಲ್ಲಿ ಕೆಲಸವನ್ನು ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಬಹುಶಃ ತಾವು ಮೈಸೂರು ತಾಲ್ಲೂಕಿನ ಬವಣೆಯನ್ನು ನೋಡಿ ೪೫–೫೦ ಸಾವಿರ ಎಕರೆಗೆ ಮಳೆ ಇಲ್ಲದೇ ಇರತಕ್ಕಂಥಾದ್ದಕ್ಕೆ ಕನ್ನಂಬಾಡಿಯಿಂದ ನೀರನ್ನು ಕೊಡುತ್ತಿದ್ದೀರಿ. ಅದೇರೀತಿಯಲ್ಲಿ ಗುಂಡ್ಲುಪೇಟೆ, ಚಾಮರಾಜನಗರ, ನಂಜನಗೂಡು ಕಡೆಯಲ್ಲಿ They are under the eratic conditions of nature. ಮಳೆ ಬಂದರೆ ಬರಬಹುದು, ಬರದೇ ಹೋದರೆ ಇಲ್ಲ, ಫಸಲು ಆದರೆ ಆಗಬಹುದು, ಇಲ್ಲದೇ ಹೋದರೆ ಇಲ್ಲ ಕಬಿನಿ ಪೊಟೆನ್‌ಷಿಯಲ್ ಇದ್ದು ಕ್ರೀಯೇಟ್ ಮಾಡದೇ ಹೋದರೆ ತಪ್ಪಾಗುತ್ತದೆ. ಆ ದೃಷ್ಟಿಯಿಂದ ಅದನ್ನು ಉಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕಾವೇರಿ ಬೇಸಿನ್ ಬಗ್ಗೆ ಒಂದು ಅಂಶವನ್ನು ಹೇಳುತ್ತೇನೆ. ತಾವು ಪ್ಲಾನಿಂಗ್ ಕಮಿಷನ್ ಮೀಟಿಂಗ್ ಮುಗಿಸಿಕೊಂಡು ಬಂದಾಗ ಈ ಮನೆಯಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಿದ್ದೀರಿ. ಆ ಸ್ಟೇಟ್‌ಮೆಂಟನ್ನು ಮಾಡುವಾಗ ಒಂದು ಸೆಂಟೆನ್ಸ್‌ನ್ನು ಕಾವೇರಿ ಬೇಸಿನ್ ಬಗ್ಗೆ ಹೇಳಿದ್ದೀರಿ ಅದರ ಅಭಿಪ್ರಾಯ ನನಗೆ ಅರ್ಥವಾಗಲಿಲ್ಲ. ಅದರಲ್ಲಿ "The total outlay of development work in 1978–83 plan has been approved by the Planning Commission at Rs. 2,160 crores including Rs. 125 crores of outlay to Cauvery Basin Projects on the non-plan side" ಎಂದು ಹೇಳಿದ್ದೀರಿ ಬಹುಶಃ ಪ್ಲಾನ್‌ನಲ್ಲಿ ಅಳವಡಿಸದೇ ಇದ್ದ ಪಕ್ಷದಲ್ಲಿ ನಾನ್ ಪ್ಲಾನ್ ಸ್ಕೀಂ ತೆಗೆದುಕೊಂಡು ಮಾಡುತ್ತಿದ್ದೇವೆ. ಈ ೧೨೫ ಕೋಟಿ ರೂಪಾಯಿಗಳನ್ನು ಇಲ್ಲಿ ಉದಹರಿಸಬೇಕಾದ ಅಗತ್ಯವೇನಿತ್ತು, ಇದರ ಉಪಯುಕ್ತತೆ ಏನು ಎನ್ನುವುದನ್ನು ತಾವು ಉತ್ತರ ಕೊಡುವಾಗ ವಿವರಣೆ ಕೊಡುತ್ತೀರಿ ಎಂದು ನಾನು ಭಾವಿಸುತ್ತೇನೆ. ಇದನ್ನು ಹೇಳದೇ ಹೋದರೂ ಪ್ರಾಜೆಕ್ಟ್‌ನ್ನು ನಾವು ಮಾಡಿಕೊಂಡು ಹೋಗುತ್ತಿದ್ದೇವೆ. ಸೆಂಟ್ರಲ್ ಗವರ್ನ್‌ಮೆಂಟ್ ಹಣಕ್ಕೆ ನಾವು ಕಾದಿಲ್ಲ. ಇದನ್ನು ಉದಹರಿಸಬೇಕಾದ ಅಗತ್ಯವೇನಿತ್ತು.

Regarding Krishna Project it is stated in the annual report.

"An agreement has been signed between the International Development Association and the Government of India in May 1978 by the which the association has agreed to make available development credit to the extent of 26 million dollars for the Karnataka Irrigation Project."

ಅಂದರೆ ೨೬ ಮಿಲಿಯನ್ ಡಾಲರ್ಸ್ ಅಂದರೆ ನಮ್ಮ ಕರೆನ್ಸಿಗೆ ಲೆಕ್ಕ ಹಾಕಿದರೆ ಸುಮಾರು ೧೦೦, ೧೨೦ ಕೋಟಿ ರೂಪಾಯಿಗಳನ್ನು ತಂದಿದ್ದೀರಿ. ಆದರೆ ಅಲ್ಲಿ ಪ್ರಾಜೆಕ್ಟ್‌ನಲ್ಲಿ ನಡೆಯುತ್ತಿರತಕ್ಕ ಕೆಲಸಗಳನ್ನು ನಾವು ನೋಡುವುದಾದರೆ ಬಹುಶಃ ಹಣ ಬಂದ ಮೇಲೆ ಹೊಸದಾಗಿ, Two construction zones are created. Two construction circles ae established viz. (1) Narayanapura and (2) Almatti. Two circles for construction of canals are established viz. (1) Hunsagi and (2) Beemnarayanagundi. One circle for construction of the ayacut road has been established. ಅದರಲ್ಲಿ ಅವರು ಕಂಡೀಷನ್ ಹಾಕಿದ್ದಾರೆ ಅದು ಏನೆಂದರೆ ಸುಮಾರು ೧೦ ಲಕ್ಷ ಎಕರೆಯಷ್ಟು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನ ಫಸ್ಟ್ ಫೇಜಿನಲ್ಲಿ ಡೆವಲಪ್ ಮಾಡಿ ೫ ವರ್ಷದೊಳಗೆ ಕೊಡಬೇಕು ಎನ್ನತಕ್ಕ ಒಂದು ಕಂಡೀಷನನ್ನು ಅಗ್ರಿಮೆಂಟ್‌ನಲ್ಲಿ ಹಾಕಿದ್ದಾರೆ ಎಂದು ಭಾಸವಾಗುತ್ತಿದೆ. ಆದರೆ ನಿಮ್ಮ ಅಲಾಟ್‌ಮೆಂಟ್ ಮತ್ತು ಅವರು ಮಾಡಿರತಕ್ಕ ಅಲಾಟ್‌ಮೆಂಟನ್ನು ನೋಡುವುದಾದರೂ ಕೂಡ ೩೭ ಕೋಟಿ. Last year the outlay was Rs. 24 crores and this year you have made a provision of Rs. 37.90 crores ೫ ವರ್ಷದಲ್ಲಿ ೧೦ ಲಕ್ಷ ಎಕರೆಯಷ್ಟು ಫಸ್ಟ್ ಫೇಜಿನಲ್ಲಿ ಅಗ್ರಿಮೆಂಟ್ ಪ್ರಕಾರ ಹಣವನ್ನು ಖರ್ಚು ಮಾಡಬೇಕಾಗಿದೆ.

ಇಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೋ, ಏತಕ್ಕೆಂದರೆ ನನಗೆ ಗೊತ್ತಿರುವ ಪ್ರಕಾರ The first stage of first phase in Krishna Project envisages an expenditure of Rs. 216 crores out of which Rs. 108 crores is assistance from the World Bank ಮತ್ತೆ ಇನ್ನೊಂದು ಪ್ರಶ್ನೆ ತಮ್ಮ ಮುಂದೆ ಇಡಬೇಕಾಗಿದೆ ಅದು ಏನೆಂದರೆ ಸ್ವಾಮಿ ವರ್ಲ್ಡ್ ಬ್ಯಾಂಕಿನವರು ನಮಗೆ ಹಣದ ಸಹಾಯವನ್ನು ಕೊಡುತ್ತಿದ್ದಾರೆ ಇದರ ಬಗ್ಗೆ ಕೂಡ ತಾವು ಮಾತನಾಡುತ್ತಾ ಹೇಳಿದ್ದೀರಿ. They are not charging interest on this amount; they are charging only service charge of three-fourth percent as service charge whereas the Government of India in turn is charging 5¼% as interest towards this amount. Secondly the entire amount is not passed on to the State Government; only 7% of the assistance is passed on to the States. You have taken up this matter at the last N. D. C. meeting. I do not know the outcome of the proceedings of that meeting. ಇವತ್ತು ನಮ್ಮ ಕೃಷ್ಣಾ ವ್ಯಾಲಿ ಕಾವೇರಿ ಬೇಸಿನ ರತಕ್ಕ ಎಲ್ಲಾ ಪ್ರಾಜೆಕ್ಟುಗಳೂ ಕೂಡ ಅನೇಕ ಕಡೆಗಳಿಂದ ಸಂಪೂರ್ಣವಾಗಿ ಕೆಲಸ ಮುಗಿಯುತ್ತಾ ಬಂದಿದೆ. ಆದರೆ ಕೆನಾಲ್ಸ್‌ಗಳ ಕನ್‌ಸ್ಟ್ರಕ್ಷನ್ ನಡೆಯುತ್ತಿದೆ ಮತ್ತ ಕೆನಾಲ್ಸ್ ಆಗುತ್ತಿರುವಂಥ ಜಾಗದಲ್ಲಿ ಏರಿಯಾ ಕೂಡ ಡೆವಲಪ್‌ಮೆಂಟ್ ಆಗಬೇಕಾಗಿದೆ. You have created KADA boards which you have to start functioning under all the projects ಇವು ಕೆಲವು ಕಡೆ ಆಗಿದೆ ಇನ್ನು ಕೆಲವು ಕಡೆ ಆಗಿಲ್ಲ ಆದುದರಿಂದ ಈ ಒಂದು ಏರಿಯಾ ಡೆವಲಪ್‌ಮೆಂಟ್ ಏನಿದೆ, It is most important this work should be taken up along with the excavation of the canals.

ಇನ್ನು ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದೆರಡು ವಿಷಯಗಳನ್ನು ಮಾನ್ಯ ಮುಖ್ಯಮಂತ್ರಿಗಳವರ ಗಮನಕ್ಕೆ ತರಬಯಸುತ್ತೇನೆ. ಅದು ಅವರಿಗೇನೂ ಹೊಸದಲ್ಲ. ಸರ್ಕಾರ ನಡೆಸತಕ್ಕ ಕಾಲದಲ್ಲಿ ಇಂಥಾದ್ದು ಬೇಕಾದಷ್ಟು ಬರುತ್ತದೆ ಅದರಲ್ಲಿ ಪಕ್ಷಗಳಿಂದ ಸರ್ಕಾರ ನಡೆಯುತ್ತಿದ್ದಂಥ ಸಂದರ್ಭದಲ್ಲಿ ಪಕ್ಷಗಳೊಂದಿಗೆ ಯಾವ ರೀತಿಯ ಚಟುವಟಿಕೆಗಳನ್ನು ಮಾಡಬೇಕು, ಸರ್ಕಾರಕ್ಕೂ ಅವರ ಪಕ್ಷಕ್ಕೂ ಯಾವ ಸಂಬಂಧ ವಿರಬೇಕು ? ಅದು ಯಾವ ರೀತಿಯಾಗಬೇಕು ಎನ್ನುವ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುವುದು ಸೂಕ್ತ ಅಂತ ಪ್ರಯತ್ನ ಮಾಡುತ್ತೇನೆ ಸ್ವಾಮಿ ನಮ್ಮ ಮಂತ್ರಿಗಳವರು ಅನೇಕ ಸಂದರ್ಭದಲ್ಲಿ ಪ್ರವಾಸಮಾಡುತ್ತಾರೆ ಆ ರೀತಿ ಮಾಡುವಾಗ ಯಾವ ರೀತಿ ಯಾವ ನೀತಿನಿಯಮಾವಳಿಗಳನ್ನು ಅನುಸರಿಸಬೇಕು ಎನ್ನುವ ಬಗ್ಗೆ ಶ್ರೀ ಹನುಮಂತಯ್ಯನವರು ಒಂದು ಪುಸ್ತಕ ಬರೆದಿದ್ದಾರೆ ಅವನ್ನು ಮಾನ್ಯ ಮುಖ್ಯಮಂತ್ರಿಗಳವರು ಓದಿದ್ದಾರೆ ಓದಿಲ್ಲ ಅಂತ ಅಲ್ಲ, ಆದರಲ್ಲಿರುವ ಎರಡು ಅಂಶಗಳನ್ನು ಮಾತ್ರ ಓದಿ ಹೇಳಿ ಬಿಡುತ್ತೇನೆ.

> "The official tours are solely meant for administrative purpose. They should be systematised and undertaken for well defined purposes such as inspection of projects, discussion of problems with officials and people on the spot to study public reactions, Government policies and so on and so forth.
>
> Unofficial tours for personal, political, social, religious or family reasons should be undertaken at Minister's cost without involving local officials and administration."

ಮಂತ್ರಿಗಳವರು ಪಾರ್ಟಿ ಪ್ರಚಾರಕ್ಕಾಗಿ ಪ್ರವಾಸ ಮಾಡಬಹುದು ನಾವು ಬೇಡ ಎಂದು ಹೇಳುವುದಿಲ್ಲ, ಆದರೆ ಅಫಿಷಿಯಲ್ ಪ್ರೋಗ್ರಾಂ ಅರೇಂಜ್ ಮಾಡಿ ಪಾರ್ಟಿ ಪ್ರಚಾರ ಮಾಡುವುದಕ್ಕೆ ಹೋದಾಗ ಸ್ವಲ್ಪ ಕಷ್ಟವಾಗುತ್ತದೆ. ಮಾನ್ಯ ಶ್ರೀ ಚಂದ್ರೇಗೌಡರವರು ಮಂತ್ರಿಯಾದ ತಕ್ಷಣ ನಮ್ಮ ತಾಲ್ಲೂಕಿಗೆ

ಬಂದರು, ಬಂದು ಒಂದು ಅಪ್ಪ ಇರಿಗೇಷನ್ ಒಪನ್ ಮಾಡಿದರು. ಆದಕ್ಕೆ ಬಹುಶಃ ನಿಮ್ಮ ಅಧಿಕಾರಿಗಳು ಬಿ. ಎಂ. ಶಹಾಬುದ್ದೀನ ಮತ್ತು ಬಿ. ಸುಬ್ಬಯ್ಯ ಗೆಸ್ಟ್‌ಗಳ ಹೆಸರನ್ನು ಪ್ರಿಂಟ್ ಮಾಡಿದ್ದರು ಆದರೆ ಆದೇ ಕೊಳ್ಳೇಗಾಲದಲ್ಲಿ ಒಂದು ಲಿಫ್ಟ್ ಇರಿಗೇಷನ್ ಒಪನ್ ಮಾಡುವುದಕ್ಕೆ ಇಬ್ಬರು ಮಂತ್ರಿಗಳವರ ಹೆಸರು ಇತ್ತು ಒಬ್ಬರು ಶ್ರೀ ಡಿ.ಬಿ ಚಂದ್ರೇಗೌಡ ಇನ್ನೊಬ್ಬರು ಶ್ರೀ ಕೆ. ಬಿ ಶಿವಯ್ಯ, ಅದು ೧೪-೩-೧೯೭೯ ರಂದು ಇತ್ತು ಆದರೆ ಅಲ್ಲಿಗೆ ಒಬ್ಬ ಕಾಂಗ್ರೆಸ್ ಸದಸ್ಯರಲ್ಲದವರೊಬ್ಬರು ಗೆಸ್ಟ್ ಆಗಿ ಇದ್ದುದರಿಂದ ತಾವು ಅಲ್ಲಿಗೆ ಹೋಗಲಿಲ್ಲ. ಈ ರೀತಿಯಾಗಿ ನೀವು ಆಫೀಸರ್ ಹತ್ತಿರ ರಾಜಕೀಯ ಮಾಡಿಸುತ್ತಿದ್ದರೆ ಅಡ್ಮಿನಿಸ್ಟ್ರೇಷನ್ ಹೇಗೆ ಟ್ಯೂನ್ ಅಪ್ ಆಗುತ್ತದೆ ? ನೀವು ಪಾರ್ಟಿಯನ್ನು ಬೆಳೆಸುವುದಕೋಸ್ಕರವಾಗಿ ಟೂರ್‌ಗಳು ಹೋಗಬೇಕಾಗುತ್ತದೆ ಇಲ್ಲವೆಂದು. ಅಲ್ಲ ಆದರೆ ನೀವು ಪಾರ್ಟಿ ಪ್ರಚಾರ ಮಾಡುವುದಕ್ಕಾಗಿ ಸರ್ಕಾರ ಹೆಸರಿನಲ್ಲಿ ಹೋಗುವುದು ಬೇಡ. ನೀವು ಕಾನ್‌ಫರೆನ್ಸ್‌ಗಳನ್ನು ಮಾಡುವುದಕ್ಕೆ ಹೋಗುತ್ತೀರಿ ಬೇಡವೆನ್ನುವುದಿಲ್ಲ. ಇನ್ನು ಪ್ರೈವೇಟ್ ಟೂರ್ ಹಾಕಿಕೊಂಡು ಏನು ಬೇಕಾದರೂ ಮಾಡಿ, ನಿಮ್ಮ ಪಾರ್ಟಿ ಬೆಳವಣಿಗೆಗೋಸ್ಕರವಾಗಿ ಮಾಡಬೇಕಾಗುತ್ತದೆ. ಆದರೆ ಪಾರ್ಟಿ ಕೆಲಸಕ್ಕಾಗಿ ಸರ್ಕಾರಿ ಯಂತ್ರವನ್ನು ಉಪಯೋಗಿಸುವುದನ್ನು ಮಾತ್ರ ನಾವು ವಿರೋಧಿಸಬೇಕಾಗುತ್ತದೆ. ಆ ರೀತಿ ಮಾಡಬಾರದಾಗಿತ್ತು ಮಾಡಿದ್ದೀರಿ. ನಿಮ್ಮ ಅಧಿಕಾರಿಗಳು ಹೆಸರನ್ನು ಪ್ರಿಂಟ್ ಮಾಡುವಾಗ ಕಾಂಗ್ರೆಸ್ ಸದಸ್ಯರು ಮತ್ತೆ ಬೇರೆ ಪಕ್ಷದ ಸದಸ್ಯರನ್ನು ಪ್ರಿಂಟ್ ಮಾಡಿದ್ದಾರೆಂದು.........

ಶ್ರೀ ಡಿ. ಬಿ. ಚಂದ್ರೇಗೌಡ —ಅದು ನಮ್ಮ ಆದೇಶದಿಂದ ಏನೂ ಆಗಿಲ್ಲ, ಅದು ಡಿಪಾರ್ಟ್‌ಮೆಂಟಲ್ ಫಂಕ್ಷನ್ ಅಷ್ಟೇ. ಅದರಲ್ಲಿ ಯಾವ ರಾಜಕೀಯ ಇಲ್ಲ.

SRI M. C. BASAPPA —This is a departmental function. Invications are printed in the name of officers. They have no business to play politics ; they are there to look after Government work. You give them a warning; you must tell them not to repeat it.

ತಾವು ಪ್ರವಾಸ ಬಂದ ಸಂದರ್ಭದಲ್ಲೂ ಕೂಡ ನಾವು ಆ ಭಾಗಗಳಿಗೆ ಹೋಗಬೇಡಿ ಅನ್ನುವುದಿಲ್ಲ ಹೋಗಿ. ಆದರೆ ಅಲ್ಲಿ ವಿರೋಧ ಪಕ್ಷದ ಸದಸ್ಯರುಗಳಿದ್ದರೆ ಅವರನ್ನು ಕರೆದು ಮಾತನಾಡಿಸುವುದು ನಿಮ್ಮ ಕರ್ತವ್ಯ. ನಮ್ಮ ಸ್ವಂತಕ್ಕಾಗಿ ನಾವು ಏನನ್ನು ಕೇಳುವುದಿಲ್ಲ, ನಮ್ಮ ನಮ್ಮ ಕ್ಷೇತ್ರದ ಸಲುವಾಗಿ ನಾವು ಏನಾದರೂ ಕೇಳುತ್ತೇವೆ. ಆದ್ದರಿಂದ, ಈ ರೀತಿ ಎಡರು ತೊಡರುಗಳು ಆದ ಸಂದರ್ಭದಲ್ಲಿ ಅದನ್ನು ಸರಿಪಡಿಸತಕ್ಕದ್ದು ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಬಂಧಿಸಿದ್ದು. ಆದ್ದರಿಂದ, ಅವರು ಸದರಿ ವಿಚಾರದ ಕಡೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ, ಮಾನ್ಯ ಕೆ. ಹನುಮಂತಯ್ಯನವರು, ಆಡಳಿತದಲ್ಲಿ ಬಗ್ಗೆ ಹೇಳಿರತಕ್ಕ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು ಈ ರೀತಿ ಇದೆ.

> "There must be someone to supervise and enforce strict observance of this principle. The Chief Minister as the head of the Ministry is the proper person to do so."

With these words I thank the Chairman for giving me this opportunity to speak.

†SRI V. . BHAVI (Mundargi) —Mr. Speaker, in support of the 15 Demands presented by the Chief Minister and one Demand presented by the Minister for Minor Irrigation, I would like to confine my remarks only to the Home Department because I am observing all these days that nobody including the members of the opposition have supported the good cause done by the Police Department. Nobody has raised any voice about the improvements of the police force. So, I have the pleasure to welcome the increased demands of Police Department in comparison to the figures of the previous years. With the increased demand by the modern society from the Police Force to

cater multifarious services in view of increase in the population, modernisation and changing of criminal devices by the criminals, application of advanced sciences in prevention and detection of crime and maintenance of security, safety of life and property internally in the State and as well in the country and the long and deeply felt necessity of changing the attitude of police from that of sheer rule in support of foreign rule prior to independence to that developed consciousness among the police to be of some use and service to all mankind in different walks of life and above all to ensure safety, security, incentive and welfare of a policeman to retain his solidarity, integrity and resistence towards temptation from litigation, agitation to meet his dire necessity or comforts in comparison to other services, it is naturally necessary for more money by the Government.

However, it may not be out of place if I do not give a piece of my mind regarding the working of the police force, betterment of conditions and eradication of evil practices in the force which still sometimes make the force an object of severe criticism. Let me take up some suggestions for improving the Police Force, to make it more efficient, devoted without grumbling with the police force. If one feels that in the force even today though the British Rule is over very long back the unpleasant system of differentiating among different ranks of the Police Force, so called rulers are very cautions and careful to retain their identity from the so called "ruled enmass" in the Police Force. Let me enumerate some instances where the wholehearted application of mind of our beloved and dynamic leader has to be applied for the downtrodden enmass in the department and show his expert hand in bringing the living conditions of the lowest strata of the force For instance, the British had evolved an instrument of cutting short such of those low rank officers who did not fall in line with the intentions of the Foreign Rulers. The British employees prior to independence were never probably appointed to the lower cadre in the force and as such they were defacto rulers of the unit of Police Force. So they introduced a badly coined word and system of writing "Character Rolls", i.e., C.R. of all subordinate Police Officers and to cut short the upright subordinate officers if they were not so loyal to the foreign rule. Probably, that is why the police were branded as for "foreign rule", as in fear of future they remained faith to their master, be it even against self respect, patriotism or good consciousness. After the Independence, the Police continued their loyalty to the new master but in a newly born democratic set up of society practically, these high ranking officers continued to impress that they have substituted the old officers. So

how do you expect a common police official or lowest police officer to change his loyalty from these officers to the public at large in the democratic set up whose powers were quite remote, latent and not immediately effective, except through their elected representatives? Shri Pandit Jawaharlal Nehru when the issue of continuing the Confidential Reports came to him, was favourable for continuance but with palatable nomenclature as "Confidential Report" and they became Annual Confidential Reports when every year they are written. The Head of the Office like the Deputy Commissioner or or Superintendent of Police has to initiate such report annually. But the abuse of powers is found more rampant, harmful and detrimental to the welfare and mental rest and peace of police enmass subordinate in this department in comparison to other departments, probably as I analyse the mental trend of the police officers goes on changing from year to year and they become prosecution minded only. These confidential reports have become a weapon in the hand of high officers to be used against the subordinate officers. If the subordinate officers do not act to the will and pleasure of the higher officers, they can use his confidential report as a weapon. So, they started writing these confidential reports on subordinate officers. There are instances where these confidential records have deprived promotions of subordinate officers. After going through all these things in 1978 the Government of India appointed a Police Commission consisting of high ranking officers. This Commission went into the matter and has suggested what should be done in the matter of writing confidential reports. They have mentioned that short term educational training should be given to higher officers who write the confidential report. This has not been acted upon and put in practice especially in our State. So when the higher officers are using the confidential report as a weapon how can we expect any justice from the higher officers to the subordinate officers? When such instances of wrong came to the notice of the Central Government the Government of India appointed another commission called Mirdha Commission with Sri Mirdha the then Central Government Home Minister; it consisted of some other ministers. They have recommended for modification of rules governing these confidential reports. This has appeared in the Indian Express. I will read only the relevant portion:

"The confidential Report will have a new look soon. The CR an annual assessment of Government employees by their superior officer will become performance oriented The Govt. feels that this will help reduce the subjective elements in the assessment......

The name confidential report may also be changed. The Administrative Reforms Commission recommended in 1969 that the annual report should be called performance report instead of confidential report."

This should be called as a performance report and not confidential report. The duty allotted to the subordinate officers should be studied by the higher officers. The higher officers should go through the work of the subordinate officers to know whether the work is performed correctly and not to give any remarks by using this confidential report as a weapon. These confidential reports have been abolished in States like Andhra Pradesh, Orissa, Tamilnadu and Kerala. I request our Leader also to consider why this system of writing annual confidential reports should not be scrapped in our State. This confidential reports are being used more for harassing the subordinate officers.

4-30 P.M.

In this connection, I would like to quote one instance. How can we expect any justice from an officer of the status of the Assistant Commissioner of Police who has been already convicted in the Judicial Magistrate's Court, Tiptur, and also against whom a Criminal case has been committed to Sessions Court ? Bijapur ? Inspite of all this, he has been allowed to continue in service and write confidential reports of so many subordinate officers working under him. How can such an officer form any constructive and reformative views about the subordinates ? I do not know whether the department has taken any action against him. He is continued in service and is enjoying the powers of the Assistant Commissioner of Police. Therefore, I request the Hon'ble Chief Minister to scrap the system of confidential reports for those who are toiling hard and serving the people. Even though the proceedings will have to be initiated by the Superintendent of Police, at present the Deputy Superintendent of Police is initiating the proceedings. Moreover the laws are not strictly followed by officers. Withholding promotion is nothing but penalising and such arbitrary punishment is going on unchecked and inflicted on the accused without giving him an opportunity to explain, defend, etc., which is guaranteed under Article 311 of the Constitution. An accused facing the trial of a murder has got a very fair opportunity to defend his case, but not the subordinate officials. Is this the rule of law ? Confidential reports written by the officers is only a rule of law.

The I.P.S. officers are having an Association of their own. Why not the non-I.P.S. officers also have an Association of their own? Are they also not protected under Article 14 of the Constitution? If non-I.P.S. officers are not allowed to form an Association, is it not a discrimination? I request our Chief Minister not to allow such things to happen in our State because our state is an ideal State, and our hon. Leader, the Chief Minister is following the democratic principles—democracy for the people, by the people and of the people. I do not find any justification in the discrimination between IPS and non-IPS officers. The Central Police Establishment Act provides for such an Association all over India. I request our Hon'ble Chief Minister to take suitable action in the matter and see that the non-IPS officers are also given a chance to form an Association.

In all the other States, the post of Circle Inspector of Police is treated as a Class II post, but it is not so in our State. There has been a lot of anamoly in regard to pay scales and status of Circle Inspectors of Police. A Tahsildar with a jurisdiction of a Taluka is in the Gazetted rank and get more pay, but the Circle Inspector of Police having no less jurisdiction than of a Tahsildar is still a non-gazetted officer. The allottees of erstwhile Bombay State are holding gazetted posts. When an Inspector of Police of Karnataka goes out of State on investigation of heinous cases he will feel humiliated on account of his inferior status with his counterpart. The Tukol Pay Commission and the Pai Pay Commission have recommended for making the Circle Inspectors' post a Gazetted post. But so far, it is not implemented. I must congratulate our Leader for having revised the pay scales and Police Constables and others. I suggest that the Head Constables and Constables should be given some sort of hardship bonus because they work during nights and holidays. Such a system is in vogue in Japan. I think this is one of the recommendations of the National Commission of Police and that the Government of India are considering this recommendation. I wish that our beloved Chief Minister will knock the credit by implementing the recommendations of the Dharma Vira Commission before they are accepted by the Central Government. If our Hon'ble Chief Minister accepts this recommendation, it will be a credit to our State.

Let me mention here the cases of pensioners. Sri Hosali, retired Indian Police officer, who served our State for a period of 13 years as Inspector General of Police is getting a pension of about Rs. 600 per month whereas Sri Kallur, non-I.P.S. Superintendent of Police is getting a pension of about Rs. 720 per month. We can definitely set right such things. I request the Hon'ble Chief Minister

to see that equal pension is given to all officers, Further, I request the Hon'ble Chief Minister to make the Policemen of our State Self-sufficient to enable them to discharge their duties more efficiently by providing all modern equipments, aids and also make them work round the clock with all mental satisfaction by providing attractive emoluments, welfare facilities, position in the society, etc., so that they certainly desist from malpractices and would be more service-minded.

Coming to my own district, there are only 62 Police Stations in Dharwar district. I request the Hon'ble Chief Minister to increase the number of Police Stations looking to the vastness of the area so that the crimes could be decreased. Thank you, Sir.

†ಶ್ರೀಮತಿ ಎಸ್. ಪ್ರಮೀಳ (ಚಾಮರಾಜಪೇಟೆ).—ಮಾನ್ಯ ಸಭಾಧ್ಯಕ್ಷರೇ, ಇವತ್ತಿನದಿವಸ ಮಾನ್ಯ ಮುಖ್ಯಮಂತ್ರಿಯವರು ಈ ಸಭೆಯ ಮುಂದೆ ಇಟ್ಟಿರತಕ್ಕಂಥ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ನಾನು ಇಲ್ಲಿ ನಿಂತಿದ್ದೇನೆ. ಆದರೆ ಇಲ್ಲಿ ನೋಡಿದರೆ ಇಷ್ಟೊಂದು ಡಿಮ್ಯಾಂಡ್‌ಗಳು ಇದೆ, ನಾನು ಯಾವ ಡಿಮ್ಯಾಂಡ್ ಮೇಲೆ ಮಾತನಾಡುವುದು, ಯಾವ ಡಿಮ್ಯಾಂಡನ್ನು ಬಿಡುವುದು ಎಂಬುದೇ ಪ್ರಶ್ನೆಯಾಗಿದೆ. ಒಬ್ಬ ಮಾನ್ಯ ಮುಖ್ಯ ಮಂತ್ರಿಯವರು ಇಷ್ಟೊಂದು ಪೋರ್ಟ್‌ಫೋಲಿಯೋ ಇಟ್ಟುಕೊಂಡು ಈ ಎಲ್ಲಾ ಕೆಲಸಗಳನ್ನು ನಿರ್ವಹಣೆ ಮಾಡುವುದಕ್ಕೆ ಸಾಧ್ಯ ಇದೆಯೋ ಎಂಬುದು ಮುಖ್ಯವಾದ ಪ್ರಶ್ನೆ. ನನಗೆ ಕೊಟ್ಟಿರತಕ್ಕಂಥ 10 ನಿಮಿಷಗಳ ಕಾಲದಲ್ಲಿ ಇವೆಲ್ಲಾ ಡಿಮ್ಯಾಂಡ್‌ಗಳ ಮೇಲೆ ಮಾತನಾಡುವುದಕ್ಕೆ ಸಾಧ್ಯವಿಲ್ಲದಿರುವಾಗ ಮಾನ್ಯ ಮುಖ್ಯಮಂತ್ರಿಯವರು ಈ ಎಲ್ಲಾ ಪೋರ್ಟ್‌ಫೋಲಿಯೋ ಇಟ್ಟುಕೊಂಡು ಸುಲಲಿತವಾಗಿ ಕಾರ್ಯನಿರ್ವಹಣೆ ಮಾಡುವುದರಲ್ಲಿ ಸ್ವಲ್ಪ ಕಷ್ಟವೂ ಇದೆಯೆಂದು ನನ್ನ ಭಾವನೆ. ಈ ಸದನದಲ್ಲಿ ಸಮರ್ಥ ಮಹಿಳಾ ಸದಸ್ಯರು ಇದ್ದಾರೆ, ಅವರಿಗೆ ಒಂದೊಂದು ಪೋರ್ಟ್‌ಫೋಲಿಯೋ ಕೊಟ್ಟು, ಈ ಎಲ್ಲಾ ಕೆಲಸಗಳನ್ನೂ ಉತ್ತಮವಾಗಿ ನಿರ್ವಹಿಸಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ಇಡೀ ಕರ್ನಾಟಕದಲ್ಲೇ ಅಲ್ಲ, ಇಡೀ ಭಾರತದೇಶದಲ್ಲಿ ಒಬ್ಬರು ನಾಯಕರಾಗಿ ಇರುವುದಕ್ಕೆ ಸಾಧ್ಯ ಎಂದು ಮಾನ್ಯ ಮುಖ್ಯಮಂತ್ರಿಯವರು ನಮಗೆ ತೋರಿಸಿಕೊಡುವುದಕ್ಕೆ ಹೊರಟಿದ್ದಾರೆ; ಬಹಳ ಸಂತೋಷ. ಇಡೀ ಭಾರತಕ್ಕೆ ನಾಯಕರಾಗುವುದಕ್ಕೆ ಹೊರಟಿರತಕ್ಕಂಥ ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ನಮ್ಮ ಕರ್ನಾಟಕವನ್ನು ಮರೆತಹಾಗೆ ಕಾಣುತ್ತದೆ. ಪ್ರಾಯಶಃ ಇದಕ್ಕೆ ಕಾರಣ ವೇನಿರಬಹುದು? ಕೆಲಸ ಜಾಸ್ತಿ ಇರುವುದರಿಂದ ಮಾಡುವುದಕ್ಕಾಗಲಿಲ್ಲವೆಂದು ಕಾಣುತ್ತದೆ. ಇದರಿಂದ ಕರ್ನಾಟಕದಲ್ಲಿ ಆಡಳಿತ ಕ್ಷೀಣಿಸುತ್ತಿದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ಇಡೀ ಕರ್ನಾಟಕದಲ್ಲಿ "ಬೇಲಿಯೇ ಎದ್ದು ಹೊಲ ಮೇಯ್ದರೆ, ಇನ್ನು ನಾವ್ಯಾರ ರಕ್ಷಣೆ ಕೇಳೋಣ" ಎನ್ನುವ ಮಾತು ಕೇಳಿಬರುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಬೇಸರ ಮಾಡಿಕೊಳ್ಳಬಾರದು ಮುಖ್ಯ ಮಂತ್ರಿಗಳ ಶ್ರೀರಕ್ಷೆ ಮೊಡೇಸ್ ಅವರ ಮೇಲಿರುವುದರಿಂದ ಅಬ್ಕಾರಿ ಇಲಾಖೆಯಲ್ಲಿ ಅದಕ್ಷತೆ ಹೆಚ್ಚುವುದಕ್ಕೆ ಕಾರಣವಾಗಿದೆ ಎಂದು ಹೇಳಲಾಗುತ್ತಿದೆ. ಯಾರೇ ಆಗಲಿ, ಅವರು ಎಂತಹ ದೊಡ್ಡವರೇ ಆಗಲಿ ಮಾನ್ಯ ಮುಖ್ಯ ಮಂತ್ರಿಗಳ ಶ್ರೀರಕ್ಷೆ ಇಟ್ಟುಕೊಂಡು ಸಮಾಜವನ್ನು ಶೋಷಣೆ ಮಾಡುವುದು ಸಲ್ಲದು. ಇದರಿಂದ ಇಡೀ ಕರ್ನಾಟಕದ ಪ್ರಗತಿ ಕುಂಠಿತವಾಗುತ್ತಿದೆ; ಇದಕ್ಕೆ ಅವಕಾಶಕೊಡಬಾರದು. ಉದಾಹರಣೆಗೆ ಹೇಳುವುದಾದರೆ ಅವರು ತಯಾರಿಸುವ ಯಾವುದೋ ಒಂದು ಮದ್ಯ—ಅದರ ಹೆಸರು ನನಗೆ ಗೊತ್ತಿಲ್ಲ ಏಕೆಂದರೆ ಅದರ ಪರಿಚಯ ನನಗಿಲ್ಲ—ಉತ್ಪಾದನಾ ವೆಚ್ಚ ಎರಡು ರೂಪಾಯಿಗಳಾದರೆ ಅದು ಮಾರುಕಟ್ಟೆಯಲ್ಲಿ ಸುಮಾರು ಎಪ್ಪತ್ತನಾಲ್ಕು ರೂಪಾಯಿಗಳಿಗೆ ಮಾರಾಟವಾಗುತ್ತಿದೆ. ಹೇಗೆ ಇಷ್ಟೊಂದು ಬೆಲೆಯಲ್ಲಿ ಮಾರಾಟವಾಗುತ್ತಿದೆ ಎನ್ನುವುದು ತಮಗೆ ಗೊತ್ತೆ? ಇದರ ಮೇಲೆ ಇಲಾಖೆಯು ಸೀಲ್ ಹಾಕುತ್ತಾ ಇಲ್ಲ. ಇದಕ್ಕೆ ಇಲಾಖಾಧಿಕಾರಿಗಳು ಶಾಮೀಲಾಗಿದ್ದಾರೆ, ಪೋಲೀಸಿನವರು ಶಾಮೀಲಾಗಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಆ ಬಾಟಲಿನ ಹೆಸರೇನು ?

ಶ್ರೀಮತಿ ಎಸ್. ಪ್ರಮೀಳಾ.—ಹೆಸರು ಗೊತ್ತಿಲ್ಲ; ನಾನದನ್ನು ಕುಡಿಯುವುದಕ್ಕೆ ಹೋಗಿಲ್ಲ. ''ನನ್ನ ಗಂಡ ಕುಡಿದು ಹಾಳಾಗುತ್ತಿದ್ದಾನೆ, ದುಡ್ಡಿಲ್ಲ ಅಂದರೆ ನನ್ನ ಮಾಂಗಲ್ಯ ಮಾರಿಕೊಂಡು ಕುಡಿಯುತ್ತಾನೆ'' ಎಂದು ಹೆಂಗಸರು ನನ್ನ ಬಳಿಗೆ ಬಂದು ಹೇಳಿದ್ದನ್ನು ನಾನು ಕೇಳಿದ್ದೇನೆ. ಇಂತಹ ದೊಡ್ಡ ಮನುಷ್ಯರಿಂದ ತೆರಿಗೆ ವಸೂಲ್ಮಾಡದೆ ಅವರಿನ್ನೂ ದೊಡ್ಡ ಮನುಷ್ಯರಾಗುವುದಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ, ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಚಾವಟಿ ಇದೆ; ಅದನ್ನವರು ಸರಿಯಾಗಿ ಉಪಯೋಗಿಸಬೇಕು. ನಿಮ್ಮ ಐ.ಜಿ.ಪಿ. ಮತ್ತು ಎಸ್.ಪಿ ಗಳು ಸರಿಯಾಗಿ ಕಣ್ಣಿಟ್ಟು ಕೆಲಸ ಮಾಡಿದ್ದೇ ಆದರೆ ರಾಜ್ಯಕ್ಕೆ ಲಕ್ಷಾಂತರ ರೂಪಾಯಿಗಳ ಆದಾಯ ಬರುವ ಸಂದರ್ಭವಿದೆ. ಆದರೆ, ಇದನ್ನು ತಪ್ಪಿಸುವುದಕ್ಕೆ ಇಂದು ಎಲ್ಲರೂ ಶಾಮೀಲಾಗಿದ್ದಾರೆ. ಅವರ ಮೇಲೆ ತಾವು ಕ್ರಮ ತೆಗೆದುಕೊಳ್ಳಬೇಕು. ನನ್ನ ಕ್ಷೇತ್ರದಲ್ಲಿ ಕಳ್ಳಭಟ್ಟಿ ಸಾರಾಯಿ ವ್ಯಾಪಾರ ಹೇಗೆ ನಡೆಯುತ್ತಿದೆ ಎಂಬುದನ್ನು ಹೇಳಬಯಸುತ್ತೇನೆ. ಅಲ್ಲಿನ ಒಬ್ಬಳು ಮಹಿಳೆ ಕಳ್ಳಭಟ್ಟಿ ಸಾರಾಯಿ ವ್ಯಾಪಾರದಲ್ಲಿ ಪ್ರವೀಣಳಾಗಿದ್ದಾಳೆ ಪೋಲೀಸ್ ಅಧಿಕಾರಿಗಳೂ ಸಹ ಅವಳ ಹತ್ತಿರ ಹೋಗುವುದಕ್ಕೆ ಹಿಂಜರಿಯುತ್ತಾರೆ. ಅವಳ ವ್ಯವಹಾರದ ಬಗ್ಗೆ ನಾನು ಪೋಲೀಸರಿಗೆ ಹೇಳಿದಾಗ, ಅವರು ''ಅವಳ ತಂಟೆಗೆ ನಾವು ಹೋಗುವುದಿಲ್ಲವಮ್ಮ. ಅವಳು ನಮ್ಮ ಜುಟ್ಟನ್ನು ಹಿಡಿದು ಅಳ್ಳಾಡಿಸಿಬಿಡುತ್ತಾಳೆ'' ಎಂದು ಹೇಳುತ್ತಾರೆ. ಹೀಗಾಗಿ ಒಬ್ಬ ಪೋಲೀಸ್ ಅಧಿಕಾರಿಯೂ ಅವಳ ಹತ್ತಿರ ಹೋಗುತ್ತಿಲ್ಲ. ಒಬ್ಬ ಹೆಣ್ಣು ಮಗಳ ಹತ್ತಿರ ಹೋಗಿ ಅವಳು ಮಾಡುತ್ತಿರುವ ದುರ್ವ್ಯವಹಾರವನ್ನು ತಪ್ಪಿಸಲಾಗದ ನಿಮ್ಮ ಪೋಲಿಸ್ ಕಾರ್ಯಕ್ಷೇತ್ರ ಇಡೀ ಕರ್ನಾಟಕವನ್ನು ಹೇಗೆ ತಾನೆ ರಕ್ಷಣೆ ಮಾಡಬಲ್ಲದು? ಪೋಲಿಸ್ ಇಲಾಖೆ ಹೀಗಿದ್ದರೆ ಯಾರಿಗಾದರೂ ನ್ಯಾಯ ಸಿಕ್ಕುತ್ತದೆಂದು ನಾವು ಹೇಳಬಹುದೆ? ಅಂತಹದುಕ್ಕೆಲ್ಲ ಹೆದರಿಕೊಳ್ಳಬೇಡಿ ಎಂದು ತಾವು, ತಮ್ಮ ಪೋಲೀಸ್ ಅಧಿಕಾರಿಗಳಿಗೆ ಕಿವಿ ಚುಚ್ಚಿ ಹೇಳಬೇಕು.

''ಕಾನೂನಿಗಿಂತ ದೊಡ್ಡವರಿಲ್ಲ'' ಎಂದು ಹೇಳುತ್ತಾರೆ. ಈ ಪದ ಕರ್ನಾಟಕದ ಆಡಳಿತದಲ್ಲಿ ಇದೆಯೋ ಸ್ವಾಮಿ? ಕಾನೂನು ವ್ಯವಸ್ಥೆ ಇಲ್ಲಿ ಸರಿಯಾಗಿದೆಯೇ? ಯಾರಾದರೂ ಒಬ್ಬ ಹೆಣ್ಣುಮಗಳು ಎರಡನೆ ಆಟ ಮುಗಿಸಿಕೊಂಡು ರಾತ್ರಿ ಹನ್ನೆರಡು ಗಂಟೆ ಹೊತ್ತಿನಲ್ಲಿ ಸುಖವಾಗಿ ಮನೆಯನ್ನು ತಲುಪುವ ಆಸೆ ಇದೆಯೆ? ಕಾಲೇಜಿಗೆ ಹೋಗುವ ವಿದ್ಯಾರ್ಥಿನಿಯರನ್ನು ದಾರಿಯಲ್ಲಿ ಹೋಗುವ ಪುಂಡ ಪೋಕರಿಗಳು ಉಪಯೋಗಿಸುವ ಕೆಟ್ಟ ಮಾತುಗಳು ಮತ್ತು ಬಳಸುವ ಅವಾಚ್ಯ ಶಬ್ದಗಳಿಂದ ತಪ್ಪಿಸಿಕೊಂಡು ಹೋಗುವ ಕಾನೂನು ವ್ಯವಸ್ಥೆ ಕರ್ನಾಟಕದಲ್ಲಿದೆಯೇ? ಬೀದಿಯಲ್ಲಿ ಮರ್ಯಾದೆಯಿಂದ ಹೆಣ್ಣು ಮಕ್ಕಳು ಹೋಗುವುದಕ್ಕಾಗುವುದಿಲ್ಲವೆಂದರೆ, ರಿಕ್ಷಾದಲ್ಲಿ ಸುರಕ್ಷಿತವಾಗಿ ಮನೆ ತಲಪುವುದಿಲ್ಲವೆಂದರೆ, ಇಲ್ಲಿ ಕಾನೂನು ವ್ಯವಸ್ಥೆ ಹೇಗಿದೆ ಎಂದು ನೀವೇ ಯೋಚನೆ ಮಾಡಿ ಕಾನೂನು ವ್ಯವಸ್ಥೆ ಕುಸಿಯುವುದಕ್ಕೆ ಕಾರಣವಾದರೂ ಏನು? ತಾವು ಕರ್ನಾಟಕದಲ್ಲಿ ಹೆಚ್ಚಿನ ಸಮಯ ಕಳೆಯದೆ, ತಮ್ಮ ಸಮಯವನೆಲ್ಲ ದೆಹಲಿಯಲ್ಲಿ ಕಳೆಯುತ್ತಿರುವುದೇ ಇದಕ್ಕೆಲ್ಲ ಕಾರಣವಾಗಿದೆ ಎಂದು ಹೇಳುತ್ತೇನೆ. ನೀವು ದೆಹಲಿಗೆ ಹೋದ ಮೇಲೆ ''ನಾವು ಮಾಡಿದ್ದೇ ಆಯಿತು, ಇದೇ ನಮ್ಮ ರಾಜ್ಯ'' ಎಂದು ಅಧಿಕಾರಿಗಳು ಹೇಳಿಕೊಳ್ಳುತ್ತಾರೆ ಆದುದರಿಂದ, ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹೆಚ್ಚಿನ ಸಮಯವನ್ನು ಕರ್ನಾಟಕದಲ್ಲೇ ಕಳೆಯಬೇಕು ತಾವು ದೆಹಲಿಗೆ ಹೋಗಿ ಹೇಳುವುದನ್ನು ಇಲ್ಲಿಯೇ ಹೇಳಿ, ಪತ್ರಿಕೆಯವರು ಅದನ್ನು ವರದಿ ಮಾಡುತ್ತಾರೆ. ದೇವರ ದಶಾವತಾರ ಯಾವುದಕ್ಕೆ ಕಾರಣ? ಕಾರಣವನ್ನು ಬಲ್ಲ ತಾವು, ದೇವರ ಹನ್ನೊಂದನೆ ಅವತಾರಕ್ಕೆ ಅವಕಾಶ ಕೊಡಬೇಡಿ. ಶ್ರೀ ಕೃಷ್ಣ ಪರಮಾತ್ಮ ಅರ್ಜುನನಿಗೆ ಹೇಳುತ್ತಾನೆ: ''ಪವಿತ್ರಾಣಯ ಸಾಧುನಾ ವಿನಾಶಾಯ ಚ ದುಷ್ಕೃತಾಮ್ ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ'' ಈ ದೇಶದಲ್ಲಿ ವಿನಾಶಗಳು ದುಷ್ಕೃತ್ಯಗಳು ಜಾಸ್ತಿಯಾದಾಗ ನಾನು ಹುಟ್ಟಿ ಬರುತ್ತೇನೆ ಎಂದು ಶ್ರೀಕೃಷ್ಣ ಪರಮಾತ್ಮ ಅರ್ಜುನನಿಗೆ ಹೇಳುತ್ತಾನೆ. ಕರ್ನಾಟಕದಲ್ಲಿ ಅವನು ಮತ್ತೆ ಹುಟ್ಟಿ ಬರುವ ಅವಕಾಶ ಮಾಡಿ ಕೊಡಬೇಡಿ; ಅವನು ಎಲ್ಲಿದ್ದಾನೋ ಅಲ್ಲಿಯೇ ಇರಲಿ. ದೇಶದಲ್ಲಿರುವ ಅಧರ್ಮ ಮತ್ತು ಅನ್ಯಾಯಗಳನ್ನು ತೊಲಗಿಸಿ, ಕಾನೂನು ವ್ಯವಸ್ಥೆಯನ್ನು ಸರಿಪಡಿಸಿರಿ; ಅಧರ್ಮಗಳಿಂದ ನರಳುವವರನ್ನು ರಕ್ಷಿಸಿರಿ, ಆಡಳಿತ ಯಂತ್ರವನ್ನು ಬಿಗಿಗೊಳಿಸಿ.

''ರೂಲ್ ಆಫ್ ಲಾ'' ಎಂದು ನಾವು ಹೇಳುತ್ತೇವೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಸಮಗ್ರ ಕರ್ನಾಟಕದ ಹಿತದೃಷ್ಟಿಯಿಂದ ತಾವು ರಾಜ್ಯಭಾರ ಮಾಡುತ್ತಿದ್ದೀರಾ? ಪ್ರಾದೇಶಿಕ ಅಸಮಾನತೆ ಜಾಸ್ತಿಯಾಗುತ್ತಿಲ್ಲವೇ? ಆಡಳಿತದಲ್ಲಿ ಅವ್ಯವಸ್ಥೆ ಮತ್ತು ಅದಕ್ಷತೆ ಜಾಸ್ತಿಯಾಗುತ್ತಿಲ್ಲವೇ? ಇದಕ್ಕೆಲ್ಲ

ಕಾರಣವನ್ನು ನೀವು ಕಂಡುಹಿಡಿದಿದ್ದೀರಾ? ಹಿಂದುಳಿದ ವರ್ಗದವರಿಗೆ ಹರಿಜನ-ಗಿರಿಜನರಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಿದ್ದೀರಿ; ಕೊಡಿರಿ, ಯಾರು ಬೇಡ ಎಂದು ಹೇಳುತ್ತಾರೆ. ಅವರಿಗೆ ರಾಜ್ಯಾಂಗದಲ್ಲಿ ಕೊಟ್ಟಿರುವುದನ್ನು ಯಾರು ಕಿತ್ತುಕೊಳ್ಳುವುದಕ್ಕೆ ಹೋಗುವುದಿಲ್ಲ. ಆದರೆ, ರಾಜ್ಯದಲ್ಲಿರುವ ಸದ್ಯದ ಅವ್ಯವಸ್ಥೆ ಮತ್ತು ಅದಕ್ಷತೆ ಕಾರಣ: ಹೆಣ್ಣು ಮಕ್ಕಳ ಸಮಾಜವನ್ನು ಕಡೆಗಾಣಿಸಿರುವುದು. ನನ್ನ ಅಭಿಪ್ರಾಯದಲ್ಲಿ ಈ ಸಮಾಜದಲ್ಲಿರುವುದು ಎರಡೇ ಜಾತಿ. ಒಂದು ಗಂಡು, ಇನ್ನೊಂದು ಹೆಣ್ಣು. ಕೇಂದ್ರ ಸರ್ಕಾರದ ನೀತಿ ಸಂಪತ್ತಿನ ವಿಕೇಂದ್ರೀಕರಣ ಮಾಡುವುದಾಗಿದೆ. You please help to decentralise the wealth to one class of society which constitutes 50% of the population i.e., the women, Because the power is concentrated in one section that is the reason for the decline of moral values. I appeal to you with all the force at my command to decentralise that power and share it with the women also so that the 50% of population can also come up with the result your hands would be strenthened. I hope that Chief Minister will come to our rescue.

ಹಿಂದುಳಿದವರ ಸಣ್ಣ ಮಕ್ಕಳಿಗೆ ಮತ್ತು ಗುಡಿಸಲು ವಾಸಿಗಳಿಗೆ, ಡೈರಿಯವರು ಸಕಾಲದಲ್ಲಿ ಹಾಲನ್ನು ಸರಬರಾಜು ಮಾಡದೆ ಇದ್ದುದರಿಂದಲೂ ಹಾಲನ್ನು ಕೊಡಲಿಕ್ಕಾಗಲಿಲ್ಲವೆಂದು ಶ್ರೀಮತಿ ಮನೋರಮಾ ಮಧ್ವರಾಜ್ ಅವರು ತಿಳಿಸಿದರು. ಇದರಿಂದಾಗಿ ನಾಲ್ಕು ಕೋಟಿ ರೂಪಾಯಿಗಳನ್ನು ಡೈರಿ ಇಲಾಖೆ ಸರ್ಕಾರಕ್ಕೆ ಹಿಂದಿರುಗಿಸಿತಂತೆ. ಇದರಿಂದ, ಡೈರಿ ಇಲಾಖೆ ಎಷ್ಟು ಸಮರ್ಪಕವಾಗಿ ನಡೆಯುತ್ತಿದೆ ಎಂದು ತಿಳಿಯಬಹುದು. ಇದಕ್ಕೆ ಕಾರಣಕರ್ತರು ಯಾರು? ಕಳೆದ ವಾರದಿಂದ ಚಾಮರಾಜಪೇಟೆ ನಾಲ್ಕನೆ ರಸ್ತೆಯಲ್ಲಿ ಹಾಲಿನ ಸರಬರಾಜು ಆಗುತ್ತಿಲ್ಲ. ಇದರ ಬಗ್ಗೆ ಸಾರ್ವಜನಿಕರಿಂದ ಬಂದ ದೂರನ್ನು ಮಾನ್ಯ ರಂಗನಾಥ್ ಅವರಿಗೆ ಕಳುಹಿಸಿಕೊಟ್ಟೆ. ಇವತ್ತಿಗೂ ಸಹ ಹತ್ತು ಗಂಟೆಯಾದರೂ ಹಾಲಿನ ಸರಬರಾಜಾಗುತ್ತಿಲ್ಲ. ಹೀಗಾದರೆ ಸಣ್ಣ ಮಕ್ಕಳನ್ನು ಪೋಷಿಸುವವರ ಮತ್ತು ಅಡಿಗೆ ಮಾಡುವವರ ಗತಿ ಏನು? ಮಾನ್ಯ ಸಚಿವರು ಇದರ ಬಗ್ಗೆ ತಕ್ಷಣ ವ್ಯವಸ್ಥೆ ಮಾಡುತ್ತೇನೆ ಎಂದು ತಿಳಿಸಿದ್ದರೂ ಇಲ್ಲಿಯವರೆಗೆ ಯಾವ ಸುಧಾರಣೆಯೂ ಆಗಿಲ್ಲ. ಇದಕ್ಕೆ ಕಾರಣರಾರು? ಹಾಲೂ ಇಲ್ಲ; ನೀರೂ ಇಲ್ಲ ನೀರು ಕುಡಿಯುವುದಕ್ಕೆ ಇವತ್ತು ನೀರು ಕೂಡ ಬರುತ್ತಿಲ್ಲ. ಪ್ರಾಯಶಃ ನೀರನ್ನು ತೆಗೆದುಕೊಂಡು ಬಂದು ಹಾಲಿಗೆ ಸೇರಿಸಿ ತರುವುದಕ್ಕೆ ನಿಧಾನವಾಯಿತು ಅಂತ ಕಾಣುತ್ತೆ. ಸ್ವಾಮಿ ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಬೆಂಗಳೂರು ನಾಗರೀಕರಿಗೆ ಆಗಿರತಕ್ಕ ಈ ತೊಂದರೆಯನ್ನು ತಾವು ಪರಿಹರಿಸದೇ ಹೋದರೆ ಬೆಂಗಳೂರಿನಲ್ಲಿ ಬದುಕುವುದಕ್ಕಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ೫ ಬೆರಳು ಇದ್ದರೆ ಒಂದು ಕೈ ಆಗುತ್ತದೆ; ದೇಹದಲ್ಲಿ ಎಲ್ಲ ಅಂಗಗಳು ಇದ್ದರೆ ದೇಹ ಚೆನ್ನಾಗಿರುತ್ತದೆ. ನಮ್ಮ ಮಂತ್ರಿಮಂಡಲದಲ್ಲಿರತಕ್ಕ ಎಲ್ಲ ಮಂತ್ರಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿದ್ದಾರೆಯೇ? ಇದರ ಬಗ್ಗೆ ತಾವು ಪರೀಕ್ಷೆ ಮಾಡಿದ್ದೀರಾ? ಎಂದು ಪ್ರಶ್ನೆ ಕೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಅವರಿಗೆ ಕೊಟ್ಟಂತಹ ಕೆಲಸವನ್ನು ಯಾವರೀತಿ ಮಾಡುತ್ತಾರೆ; ಯಾವರೀತಿ ನಿರ್ವಹಣೆ ಮಾಡುತ್ತಾರೆಂಬುದನ್ನು ತಾವು ಮುಖ್ಯಮಂತ್ರಿಗಳಾಗಿ ವಿಚಾರ ಮಾಡಿದ್ದೀರಾ? ಅವರವರ ಕ್ಷೇತ್ರದಲ್ಲಿ ಪ್ರವಾಸ ಮಾಡಿಕೊಂಡು; ಕಾರ್ಯದರ್ಶಿಗಳು ಮುಂದಿಟ್ಟ ಕಾಗದಗಳಿಗೆ ರುಜು ಹಾಕಿಕೊಂಡು ಹೋಗುತ್ತಿದ್ದಾರೆಯೋ? ಮಂತ್ರಿಗಳ ತಲೆಯಲ್ಲಿ ಬುದ್ಧಿ ಇದ್ದರೆ; ಪತ್ರಗಳನ್ನು ನೋಡಬಹುದು; ಇಲ್ಲದೇ ಇದ್ದರೆ ಕಾರ್ಯದರ್ಶಿಗಳು ಕೊಟ್ಟಂತ ಪತ್ರಗಳಿಗೆ ರುಜು ಹಾಕಿಕೊಂಡು ಹೋಗುತ್ತಿದ್ದಾರೆಯೆ ? ಇಡೀ ಭಾರತದಲ್ಲಿ ಕರ್ನಾಟಕದಲ್ಲಿ ನ್ಯಾಯಾಂಗವನ್ನು ಒಂದು ವಿಧವಾದ ಕ್ಷೀಣದೃಷ್ಟಿಯಿಂದ ನೋಡುತ್ತಾರೆ; ಕಾರಣ ಏನು ಎಂದು ಕೇಳುತ್ತಾರೆ. ಕಾನೂನು ಮಂತ್ರಿಗಳ ಪ್ರಶ್ನೆ ಆದರೂ ಈ ಪ್ರಶ್ನೆಯಿಂದ ನಿಮಗೆ ಪ್ರತಿಬಿಂಬಿಸುವುದಿಲ್ಲವೇ? ಕರ್ನಾಟಕ ರಾಜ್ಯದ ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿಗಳು ಈ ರೀತಿ ನ್ಯಾಯಾಂಗವನ್ನು ಏಕೆ ನೋಡುತ್ತಾರೆಂದು ಸಾಮಾನ್ಯ ಜನತೆ ಇವತ್ತು ಪ್ರಶ್ನೆ ಕೇಳುತ್ತಾರೆ. ಆ ರೀತಿ ನಡೆಯುವವರನ್ನು ಸರಿಯಾದ ರೀತಿಯಲ್ಲಿ ಸರಿಯಾದ ದಾರಿಯಲ್ಲಿ ತರಬೇಕಾದ್ದು ನಿಮ್ಮ ಕರ್ತವ್ಯವಲ್ಲವೇ? ಸ್ವಾಮಿ, ಉದಾಹರಣೆಗೆ ಹೇಳಬೇಕಾದರೆ, ಈ ಮನೆಯಲ್ಲಿ ಪಾಸಾದಂಥ ಒಂದು ಬಿಲ್‌ಗೆ ಮುಖ್ಯ ನ್ಯಾಯಾಧೀಶರು ಅಡ್ಡಿ ಹಾಕಿದರೊ ಎಂದು ನಿನ್ನೆ ಮಾನ್ಯ ಕಾನೂನು ಮಂತ್ರಿಗಳು ಹೇಳಿದರು.

ನೀವು ಕೇಳಿದಂಥ ಒಪೀನಿಯನ್‌ಗೆ ಮುಖ್ಯ ನ್ಯಾಯಾಧೀಶರು ಕಾನೂನು ಒಪೀನಿಯನ್ ಮಾತ್ರ ಕೊಟ್ಟರೆ? ಮುಖ್ಯ ನ್ಯಾಯಾಧೀಶರ ಮತ್ತು ಮುಖ್ಯಮಂತ್ರಿಗಳ ನಡುವೆ ಮಾತುಕತೆ ನಡೆಯಿತೆಂದು ಕಾನೂನು ಮಂತ್ರಿಗಳು ಹೇಳಿದ್ದಾರೆ. ತಾವು ನಿನ್ನೆ ಸಭೆಯಲ್ಲಿದ್ದರೂ ಕೂಡ ನಡೆದಂಥ ವಿಚಾರದ ಬಗ್ಗೆ ಸ್ಪಷ್ಟನೆ ನೀಡಬಹುದಿತ್ತು? ತಾವು ಆರೀತಿ ಏತಕ್ಕೆ ಮಾಡಲಿಲ್ಲ? ಇವತು ಮುಖ್ಯ ನ್ಯಾಯಾಧೀಶರ ಬಗ್ಗೆ ಆಡಿದಂಥ ಮಾತುಗಳು ಎಲ್ಲ ಪತ್ರಿಕೆಗಳಲ್ಲೂ ಬಂದಿದೆ; ಇದು ನಿಮಗೆ ಗೌರವ ತರತಕ್ಕಂಥ ವಿಷಯವೆ? ಶಾಸಕಾಂಗ ಕಾರ್ಯಾಂಗ ಹಾಗೂ ನ್ಯಾಯಾಂಗ ಒಂದನ್ನೊಂದು ಅರ್ಥಮಾಡಿಕೊಂಡು ಕೆಲಸ ಮಾಡಿದರೆ ಸುಲಭವಾಗುತ್ತದೆ. ಸ್ವಾಮಿ, ಹೊಳೇ ನರಸೀಪುರದಲ್ಲಿ ನಡದಂಥ ಘಟನೆ ತಮಗೆ ಗೊತ್ತಿವೆ. ನ್ಯಾಯಾಧೀಶರು ಅಲ್ಲಿ ಮಾತನಾಡುವುದಕ್ಕೆ ಬರಲಿಲ್ಲ ಕಾರಣ ಏನು? ಸಿಂದನೂರು, ರಾಯಚೂರು, ಯಾದಗಿರಿನಲ್ಲಿ ನ್ಯಾಯಾಧೀಶರುಗಳು ಹೋಗಲಿಲ್ಲ; ಕಾರಣ ಏನು ಅಂತ ಯೋಚನೆ ಮಾಡಿದ್ದೀರಾ? ನ್ಯಾಯಾಂಗ ಮತ್ತು ಶಾಸಕಾಂಗದ ಮಧ್ಯೆ ಬಿನ್ನಾಭಿಪ್ರಾಯ ಇರಬಾರದು. ಇವುಗಳ ಮಧ್ಯೆ ಬಿನ್ನಾಭಿಪ್ರಾಯ ಬಂದರೆ ಜನತೆ ಕಷ್ಟಪಡಬೇಕಾಗುತ್ತದೆ, ಈ ರೀತಿ ಮಂತ್ರಿಗಳು ದಾರಿತಪ್ಪಿ ಹೋದಾಗ ಅವರನ್ನು ಸರಿಯಾದ ದಾರಿಯಲ್ಲಿ ತರುವುದು ತಮ್ಮ ಆದ್ಯಕರ್ತವ್ಯ. ತಾವು ಆ ರೀತಿ ಮಾಡಿದರೆ ತಮ್ಮ ಕೀರ್ತಿ ಅಜರಾಮರವಾಗುತ್ತದೆ; ಕರ್ನಾಟಕ ಕೀರ್ತಿ ಹೆಚ್ಚುತ್ತದೆ; ಕರ್ನಾಟಕದಲ್ಲಿ ನ್ಯಾಯಾಂಗಕ್ಕೂ ಗೌರವ ಇದೆ ಎಂದು ಜನತೆ ಭಾವಿಸುತ್ತದೆ. ಇಂಥ ವಿಚಾರಗಳಲ್ಲಿ ತಾವು ಗಮನ ಕೊಡಬೇಕೆಂದು ಹೇಳುತ್ತೇನೆ. ಇಂಥವರನ್ನು ತೆಗೆದುಹಾಕತಕ್ಕ ಧೀರಸಾಹಸವನ್ನು ತಾವು ಮಾಡಬೇಕು. ತಮ್ಮ ಕೀರ್ತಿ ಹೆಚ್ಚುತ್ತದೆ; ತಮ್ಮ ಮೇಲೆ ಬರತಕ್ಕ ಅಪಕೀರ್ತಿ ತಪ್ಪುತ್ತದೆಯೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಆಂದ್ರಪ್ರದೇಶದಲ್ಲಿ ಹೆಣ್ಣು ಮಕ್ಕಳಿಗೆ ಒಂದು ಪೋಲೀಸ್ ಠಾಣೆಯನ್ನು ತೆಗೆದಿದ್ದಾರೆ. ಕರ್ನಾಟಕದಲ್ಲಿಯೂ ಕೂಡ ಆ ತರಹ ಒಂದು ಪೋಲೀಸ್ ಠಾಣೆಯನ್ನು ತೆಗೆದು ತಪ್ಪುಮಾಡಿದಂಥ ಹೆಣ್ಣು ಮಕ್ಕಳಿಗೆ ಅಲ್ಲಿಡುವಂತ ವ್ಯವಸ್ಥೆ ಮಾಡಿ; ಹೆಣ್ಣು ಮಕ್ಕಳಿಗೆ ಜುರಿಸಡಿಕ್ಷನೆ ಕೊಟ್ಟು ಅವರು ಹೇಗೆ ತಮ್ಮ ಕೆಲಸ ಮಾಡುತ್ತಾರೆಂದು ನೋಡಿ. ಬೆಂಗಳೂರಿನಲ್ಲಿ ಅಥವಾ ಬೇರೆ ಎಲ್ಲಾದರೂ ತೆಗೆಯಿರಿ; ಹೆಣ್ಣು ಮಕ್ಕಳು ಸಮರ್ಪಕವಾಗಿ ಕೆಲಸ ಮಾಡುತ್ತಾರೆಂದು ಕಂಡು ಬಂದರೆ ಇಡೀ ಕರ್ನಾಟಕದಲ್ಲಿ ಪೋಲೀಸ್ ಠಾಣೆಗಳನ್ನು ತೆಗೆಯಿರಿ ಎಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಅಂತರರಾಷ್ಟ್ರೀಯ ಮಕ್ಕಳ ವರ್ಷ; ನಾನು ತಮ್ಮಲ್ಲಿ ಕಳಕಳಿಯ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ತಪ್ಪು ಮಾಡಿದಂತ ಸಣ್ಣ ಸಣ್ಣ ಮಕ್ಕಳು ಯಾರಿದ್ದಾರೆ, ಅವರನ್ನು ರಿಮ್ಯಾಂಡ್ ಹೋಂನಿಂದ ಮಕ್ಕಳ ವರ್ಷದ ದ್ಯೋತಕವಾಗಿ ಬಿಡುಗಡೆ ಮಾಡಲಿಕ್ಕೆ ಆಜ್ಞೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಅವರನ್ನು ಬಿಡುಗಡೆ ಮಾಡಿ ಬೀದಿ ಪಾಲು ಮಾಡಬೇಡಿ. ಅವರಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿ, ಅವರಿಗೆ ಉತ್ತಮ ಆಹಾರ ದೊರೆಯುವಂತೆ ವ್ಯವಸ್ಥೆ ಮಾಡಿ. ಸಮಾಜದಲ್ಲಿ ಬುದ್ಧಿವಂತರಾಗಿ ಬಾಳುವ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಮುಖ್ಯವಾದ ಒಂದು ವಿಷಯವನ್ನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈ ವಿಷಯವನ್ನು ಶ್ರೀನಿವಾಸ್‌ರವರಲ್ಲಿಯೂ ಮತ್ತು ಮನೋರಮ ಮಧ್ವರಾಜ್‌ರವರಲ್ಲಿ ಹೇಳಿಕೊಂಡಿದ್ದೇನೆ, ನವದೆಹಲಿಯಲ್ಲಿ ಮಕ್ಕಳ ಸಂಗ್ರಹಾಲಯ ಮತ್ತು ಬೊಂಬೆಗಳ ಸಂಗ್ರಹಾಲಯ ಇದೆ. ತಾವು ದೆಹಲಿಗೆ ಹೋದಾಗ ಸುಮ್ಮನೆ ಕಣ್ಣಾರೆ ನೋಡಿಕೊಂಡು ಬನ್ನಿ. ಅಂಥ ಸಂಗ್ರಹಾಲಯಗಳನ್ನು ಕರ್ನಾಟಕದಲ್ಲಿಯೂ ತೆರೆಯುವಂತೆ ಮಾಡಿ. ತಮ್ಮ ಕಾಲದಲ್ಲಿ ಮಕ್ಕಳ ಮ್ಯೂಸಿಯಂ ಹಾಗೂ ಬೊಂಬೆಗಳ ಮ್ಯೂಸಿಯಂನ್ನು ಮಕ್ಕಳ ವರ್ಷದ ಕೊಡುಗೆಯಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ನವದೆಹಲಿಯಲ್ಲಿ ವೈಜ್ಞಾನಿಕ ಸಂಗ್ರಹಾಲಯ ಇದೆ, ಅದರಲ್ಲಿ ಸೂರ್ಯನ ಚಲವಲನ ಹಾಗೂ ಚಂದ್ರನ ಚಲವಲನಗಳನ್ನು ಯಾವರೀತಿ ನಡೆಯುತ್ತದೆ ಎಂಬುದನ್ನು ಇಟ್ಟಿದ್ದಾರೆ. ಸಂಗ್ರಹಾಲಯದೊಳಗೆ ಹೋಗಿ ಬಂದರೆ ಚಂದ್ರಲೋಕಕ್ಕೆ ಹೋಗಿ ಬಂದಂತೆ ಆಗುತ್ತದೆ, ಮಕ್ಕಳ ವರ್ಷದಲ್ಲಿ ಕರ್ನಾಟಕದಲ್ಲಿ ಅಂಥ ಒಂದು ವೈಜ್ಞಾನಿಕ ಸಂಗ್ರಹಾಲಯವನ್ನು ತೆರೆಯಬೇಕೆಂದು ಒತ್ತಾಯ ಮಾಡುತ್ತೇನೆ. ಸ್ವಾಮಿ, ತಮ್ಮಲ್ಲಿ ಮಿಸ್‌ಲೇನಿಯಸ್ ಫಂಡ್ಸ್ ಇದೆಯೆಂದು ಕೇಳಿದ್ದೇನೆ, ಆ ಹಣದಲ್ಲಿ ಖರ್ಚುಹಾಕಿ ಇಂಥ ಸಂಗ್ರಹಾಲಯಗಳು ಕರ್ನಾಟಕದಲ್ಲಿ ಬರುವುದಕ್ಕೆ ತಾವು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಸಭಾಪತಿಗಳಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಹೆಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ).—ಸನ್ಮಾನ್ಯ ಸಭಾಪತಿಗಳೇ, ಇವತ್ತಿನದಿವಸ ನಮ್ಮಮುಂದೆ ಇಟ್ಟಿರತಕ್ಕ ಬೇಡಿಕೆಗಳಲ್ಲಿ ಕೆಲವು ಬೇಡಿಕೆಗಳನ್ನು ಮಾನ್ಯ ಮುಖ್ಯಮಂತ್ರಿಗಳೂ ಹಾಗೂ ನೀರಾವರಿ ಸಚಿವರು ತಂದಿದ್ದಾರೆ. ಈ ಬೇಡಿಕೆಗಳನ್ನು ನಾನು ಒಪ್ಪುತ್ತೆ; ನಮ್ಮ ತಾಲ್ಲೂಕಿಗೆ ಸಂಬಂಧ ಪಟ್ಟಂತೆ ಕೆಲವು ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ನಮ್ಮ ತಾಲ್ಲೂಕು ನೀರಾವರಿ ಇಲ್ಲದಂಥ ತಾಲ್ಲೂಕು. ಮಳೆಯ ಆಶ್ರಯವನ್ನೇ ಬಹುಭಾಗದ ಪ್ರದೇಶ ಬೇಸಾಯಕ್ಕಾಗಿ ಅವಲಂಭಿಸಿದೆ. ಇತ್ತೀಚೆಗೆ ಎಲ್ಲಾ ಭಾಗಗಳಲ್ಲಿಯೂ ನೀರಾವರಿ ಪ್ರದೇಶ ಹೆಚ್ಚುತ್ತಾ ಇದೆ. ಸ್ವಾಮಿ, ತಮಗೆ ಗೊತ್ತಿರುವ ಹಾಗೆ ಮದ್ರಾಸಿಗೂ ಗುಂಡ್ಲುಪೇಟೆಗೂ ಮಧ್ಯೆ ಮಾಯೂರ ಹೊಳೆ ಹರಿಯುತ್ತಿದೆ. ಮಾಯಾರ ಹೊಳೆ ನಮಗೂ ಸೇರಿದೆ; ಮದ್ರಾಸ್ ಪ್ರಾಂತ್ಯಕ್ಕೂ ಸೇರಿದೆ.

೫–೦೦ ಪಿ. ಎಂ.

ಅಧ್ಯಕ್ಷರೆ, ಇದರ ಪ್ರಯೋಜನವನ್ನು ಮದ್ರಾಸ್‌ನವರು ಪೂರ್ಣವಾಗಿ ಉಪಯೋಗಿಸಿಕೊಂಡಿದ್ದಾರೆ ಈಗ ಮಾಯೂರ ಹೊಳೆಯಲ್ಲಿ ಎಲೆಕ್ಟ್ರಿಸಿಟಿ ಪ್ರಾಜೆಕ್ಟ್ ಮಾಡಿದ್ದಾರೆ. ಶ್ರಿಂಗಾರ್ ಪ್ರಾಜೆಕ್ಟ್ ಎಂದು ಇನ್ನೊಂದು ಮಾಡಿದ್ದಾರೆ. ಈ ಹೊಳೆ ಮದ್ರಾಸಿನಲ್ಲಿ ಮುಂದೆ ಹೋಗಿ ಭವಾನಿ ಹೊಳೆಗೆ ಸೇರುತ್ತದೆ. ಇದುವರೆಗೂ ಇದರಿಂದ ನಮಗೆ ಯಾವ ಪ್ರಯೋಜನ ಸಿಕ್ಕುವಂತೆ ಮಾಡಲಿಲ್ಲ. ಇವೊತ್ತು ನೀವು ಈ ಪ್ರಾಜೆಕ್ಟ್ ಮಾಡಿದರೆ ನಮ್ಮ ಗುಂಡ್ಲುಪೇಟೆಗೆ ಹೆಚ್ಚಿನ ನೀರಾವರಿ ಸೌಕರ್ಯ ಸಿಕ್ಕಬಹುದು ಎಂದು ನನ್ನ ಆಸೆ ಇನು ಕೆಲವು ಪ್ರಾಜೆಕ್ಟ್‌ಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳವರಿಗೆ ಹೇಳಬೇಕು ಅಂದರೆ ಹಬ್ಬಳಾಪುರ ಆ ಸ್ಥಳವನ್ನು ತಾವು ಪರಿಶೀಲಿಸಿದ್ದೀರಿ. ಆ ಪ್ರಾಜೆಕ್ಟ್ ತಯಾರಾಗಿದೆ. ಅದರ ಮೂರು ಸ್ಟೇಜುಗಳಿಂದ ಸುಮಾರು ೨೭೩೬ ಎಕರೆ ತರಿ ಆಗತಕ್ಕ ಸಂದರ್ಭ ಇದೆ ಇದಕ್ಕೆ ೭೬ ಲಕ್ಷ ರೂಪಾಯಿ ಖರ್ಚಾಗುತ್ತದೆ. ಇದನ್ನು ತಾವು ಮಾಡುವುದರಿಂದ ನಮ್ಮ ತಾಲ್ಲೂಕಿನ ಕೆಲವು ಭಾಗಗಳಿಗೆ ಹೆಚ್ಚಿನ ನೀರಾವರಿಗೆ ಅನುಕೂಲವಾಗುತ್ತದೆ, ಆದುದರಿಂದ ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ಹಳ್ಳ ಅಂದರೆ ಅಣ್ಣೇಕೆರೆ ಅದಕ್ಕೆ ಎಸ್ಟಿಮೇಟ್ ತಯಾರಾಗಿದೆ, ೮೦೫ ಎಕರೆ ತರಿ ಆಗುತ್ತದೆ; ೧೯ ಲಕ್ಷ ರೂಪಾಯಿ ಖರ್ಚಾಗುತ್ತದೆ. ಇದನ್ನು ಈ ವರ್ಷವೇ ತೆಗೆದುಕೊಳ್ಳಬೇಕು, ಎಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಇದರಿಂದ ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿನ ನೀರಾವರಿ ಸೌಕರ್ಯ ಸಿಕ್ಕುತ್ತದೆ. ಇನ್ನು ನಲ್ಲೂರು ಅಮಾನಿಕೆರೆ, ಮಂಗಳ ಪ್ರಾಜೆಕ್ಟ್ ಎಂದು ಇನ್ನೊಂದು ಕೆರೆ ಆಗುತ್ತಿದೆ ಇದನ್ನು ತೆಗೆದುಕೊಂಡು ಅನೇಕ ವರ್ಷಗಳಾದರೂ ಕೂಡ ಸ್ಲೋ ಪ್ರೋಸೆಸ್‌ನಲ್ಲಿ ಆಗುತ್ತಿದೆ. ಇದನ್ನು ಜಾಗ್ರತೆ ಮುಗಿಸಲಿಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಾರಿ ಮಂಟಿಪುರ ಕೆರೆ ತೆಗೆದುಕೊಂಡರು ಅದು ಒಂದೇ ಕೆರೆ ತೆಗೆದುಕೊಂಡಿರುವುದು, ಅದೂ ೬—೭ ಲಕ್ಷ ರೂಪಾಯಿ. ಇನ್ನು ಕಳ್ಳೀಪುರದ ಕೆರೆ ಕಳೆದ ವರ್ಷ ಬಡ್ಜೆಟ್‌ನಲ್ಲಿ ಸೇರಿಸಿದ್ದಾರೆ. ಈ ಬಡ್ಜೆಟ್ ನಲ್ಲಿಯೂ ಸೇರಿದೆ ಆದರೆ ಈವರೆಗೂ ಕಾರ್ಯರೂಪಕ್ಕೆ ಬಂದಿಲ್ಲ. ಇದನ್ನು ಮಾಡಿಸಬೇಕೆಂದು ನಾನು ತಮ್ಮಲ್ಲಿ ಭಿನ್ನವಿಸಿಕೊಳ್ಳುತ್ತೇನೆ. ಇನ್ನು ಮಂಚಹಳ್ಳಿ ಕೆರೆ, ಬೆಟ್ಟದಮಾದಳ್ಳಿ ಕೆರೆ, ಎಲ್ಲಾ ಕೆರೆಗಳು ಆಗಿವೆ ಅವುಗಳ ಪಿಕ್‌ಅಪ್ ಅವಶ್ಯಕತೆಗಳು ಇದೆ. ಇನ್ನು ಗೋಪಾಲಪುರದ ಕಟ್ಟೆ ಹಳ್ಳ ಇಲ್ಲಿ ಸರ್ವ ಕಾಲದಲ್ಲೂ ನೀರು ಹರಿಯುತ್ತದೆ. ಈ ನೀರನ್ನು ಉಪಯೋಗಿಸಿಕೊಂಡು ಕೆರೆ ಕಟ್ಟುವುದಾದರೆ ಹೆಚ್ಚಿನ ಅನುಕೂಲವಾಗುತ್ತದೆ. ಮಾನ್ಯ ಬಸಪ್ಪನವರು ಹೇಳಿದ ಹಾಗೆ ಕಬಿನಿ ಪ್ರಾಜೆಕ್ಟ್‌ನಲ್ಲಿ ಲಿಫ್ಟ್ ಇರಿಗೇಷನ್ ಮಾಡಿದರೆ ಗುಂಡ್ಲುಪೇಟೆ ತಾಲ್ಲೂಕಿಗೆ ಅನುಕೂಲವಾಗುತ್ತದೆ ಅದನ್ನು ಮಾಡಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಹೆಬ್ಬಳ್ಳ ಮತ್ತು ಅಣ್ಣೇಕೆರೆ ಅಣೆಕಟ್ಟು ತೆಗೆದುಕೊಂಡರೆ ಗುಂಡ್ಲುಪೇಟೆ ತಾಲ್ಲೂಕಿಗೆ ಶಾಶ್ವತವಾದ ಪರಿಹಾರ ದೊರೆತಂತಾಗುತ್ತದೆ. ಇನ್ನು ಎರಡನೆಯದಾಗಿ ಪೋಲೀಸ್ ಇಲಾಖೆಯ ವಿಚಾರ ಮಾತನಾಡುವುದಾದರೆ, ನಮ್ಮ ತಾಲ್ಲೂಕಿನಲ್ಲಿ ಪೋಲೀಸ್ ಆಡಳಿತ ಅಷ್ಟೊಂದು ಚೆನ್ನಾಗಿ ನಡೆಯುತ್ತಿಲ್ಲ. ಇದು ಬಹಳ ಶೋಚನೀಯ. ಕೆಲವರು ರಾಜಕೀಯ ವ್ಯಕ್ತಿಗಳು ಸೇರಿಕೊಂಡು ಅಂದರೆ ಪೋಲೀಸ್ ಅಧಿಕಾರಿಗಳು ರಾಜಕೀಯ ಮಾಡಿಕೊಂಡು ಹೋಗುತ್ತಿದ್ದಾರೆ. ಇದರಿಂದ ನಮ್ಮ ತಾಲ್ಲೂಕಿನಲ್ಲಿ ಭಯ ಅನ್ನುವುದು ಕೊಂಚ ಇಲ್ಲದಂತಾಗಿದೆ. ಒಳ್ಳೆಯವರಿಗೆ ರಕ್ಷಣೆ ದೊರೆಯುತ್ತಿಲ್ಲ ಅನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡುವುದಾದರೆ ಕೋಡಿಹಳ್ಳಿ ಮತ್ತು ಶಿವಪುರ ಗ್ರಾಮಗಳಲ್ಲಿ ಮಾರಿ ಹಬ್ಬ ಜಾತ್ರೆ ನಡೆಯುತ್ತಿದೆ ಒಂದು ಊರಿನ ಪಾರ್ಟಿ ಬಂದುಬಿಟ್ಟರೆ ನಿಲ್ಲಿಸಬೇಕು ಎನ್ನುವ ಮನೋಭಾವ ಸರಿಯಲ್ಲ. ವರ್ಷೇ ವರ್ಷೇ ಎಲ್ಲ ಕೋಮಿನವರು ಸೇರಿ ಮಾರಿ ಹಬ್ಬ ಮಾಡುತ್ತಾರೆ. ಈ ಸಂಪ್ರದಾಯದಲ್ಲಿ ಹತ್ತಾರು ಜನ ವಿರೋಧ ಮಾಡಿದ ಮಾತ್ರಕ್ಕೆ

ಜಾತ್ರೆ ನಿಲ್ಲಿಸುವುದಕ್ಕೆ ಹೋಗುವುದು ಸರಿಯಲ್ಲ. ಈ ರೀತಿ ಆಗುವ ಸಂದರ್ಭದಲ್ಲಿ ಪೋಲೀಸಿನವರು ರಕ್ಷಣೆ ಕೊಟ್ಟು ಜಾತ್ರೆ ನಡೆಸುವಂತಹ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಕರಕಲ ಹಳ್ಳಿ ಮತ್ತು ಬೇರಂಬಾಡಿಗಳಲ್ಲಿ ಸಣ್ಣ ಪುಟ್ಟ ಗಲಭೆಗಳು ಆಗುತ್ತಿವೆ. ನಾಲ್ಕು ಕುಟುಂಬಗಳು ಮಾತ್ರ ವಿರೋಧವಾಗಿವೆ. ಕುಟುಂಬಗಳು ಊರು ಬಿಟ್ಟು ಹೋಗುವ ಸ್ಥಿತಿಯಲ್ಲಿದ್ದಾರೆ. ಇವೊತ್ತು ಸಲಕರಣೆಗಳನ್ನು ಕದ್ದು ಸಾಗಿಸತಕ್ಕದ್ದು, ಬೆಳೆ ಕೊಯ್ಯತಕ್ಕದ್ದು, ಮನೆಗಳಿಗೆ ಬೆಂಕಿ ಹಚ್ಚತಕ್ಕ ಕೃತ್ಯ ನಡೆಯುತ್ತಿವೆ. ಅಲ್ಲಿ ಎರಡು ಕುಟುಂಬಗಳು ಊರು ಬಿಟ್ಟು ಹೊರಟು ಹೋಗಿದ್ದಾರೆ. ಈ ವಿಚಾರವನ್ನು ಪೋಲೀಸರಿಗೆ ತಿಳಿಸಿದ್ದೇನೆ. ಈಗ ಎರಡು ಗುಂಪು ಅಂದರೆ ಹರಿಜನರದು ಒಂದು, ಲಿಂಗಾಯಿತರದು ಒಂದು ಹರಿಜನರಲ್ಲಿ ಬಹುಭಾಗ, ಲಿಂಗಾಯಿತರಲ್ಲಿ ಬಹುಭಾಗ ಒಂದು ಗುಂಪಾಗಿದೆ. ಹರಿಜನರಲ್ಲಿ ನಾಲ್ಕು ಕುಟುಂಬ ಲಿಂಗಾಯಿತರಲ್ಲಿ ಎರಡು ಕುಟುಂಬ. ಇವೊತ್ತು ಇಲ್ಲಿ ಒಂದು ಗುಂಪಿನ ಮೇಲೆ ಇನ್ನೊಂದು ಗುಂಪಿನವರು ಪೋಲೀಸರನ್ನು ಸರಿಪಡಿಸಿಕೊಂಡು ಕೇಸ್ ಹಾಕಿಸುತ್ತಿದ್ದಾರೆ. ಇದು ಸರಿಯಲ್ಲ. ಇವೊತ್ತು ಗಲಾಟೆಗಳು ಏನು ನಡೆಯುತ್ತಿದೆ ಅದು ಇನ್ನೂ ನಿಂತಿಲ್ಲ. ಪೋಲೀಸಿನವರು ಕ್ರಮ ತೆಗೆದುಕೊಂಡಿದ್ದಾರೆ. ಅವರು ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳದೇ ಇರುವುದರಿಂದ ಅಲ್ಲಿ ಸರಿಯಾಗಿಲ್ಲ. ಇದಕ್ಕೆ ಪೋಲೀಸಿನವರೇ ಕಾರಣವೆಂದು ನಾನು ತಮ್ಮಲ್ಲಿ ಭಿನ್ನವಿಸಿಕೊಳ್ಳುತ್ತೇನೆ. ಇದರ ವಿಚಾರವಾಗಿ ಒಂದು ವರ್ಷದ ಹಿಂದೆಯೇ ತಮ್ಮ ಗಮನಕ್ಕೆ ತಂದಿದ್ದೆ. ಇನ್ನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇವೊತ್ತು ಅಲ್ಲಿರತಕ್ಕಂತೆ ಎಲ್ಲಾ ಪೋಲೀಸ್ ಅಧಿಕಾರಿಗಳನ್ನು ವರ್ಗ ಮಾಡಿ ಅಲ್ಲಿಗೆ ಹೊಸ ಅಧಿಕಾರಿಗಳನ್ನು ಹಾಕಬೇಕೆ[illegible] ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ಕೆಲವು ಚಿಕ್ಕ ಜಿಲ್ಲೆಗಳು ಇವೆ, ಕೆಲವು ದೊ[illegible] ಜಿಲ್ಲೆಗಳು ಇವೆ. ಅಡ್ಮಿನಿಸ್ಟ್ರೇಷನ್ ದೃಷ್ಟಿಯಿಂದ ರೀಆರ್ಗನೈಸೇಷನ್ ಆಗಬೇಕಾದ ಅವಶ್ಯ[illegible] ಆದುದರಿಂದ ತ್ವರಿತಗತಿಯಲ್ಲಿ ಅಡ್ಮಿನಿಸ್ಟ್ರೇಷನ್ ಉತ್ತಮಪಡಿಸಲಿಕ್ಕೆ ಸೂಕ್ತ ಕಾರ್ಯಕ್ರಮ ಹಾ[illegible] ಬೇಕೆಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನ[illegible] ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಡಿ. ಚೌಡಯ್ಯ (ಕೋರಗೋಡು). – ಸನ್ಮಾನ್ಯ ಅಧ್ಯಕ್ಷರೇ ಈಗ ೧೬ ಬೇಡಿಕೆಗಳ ಪೈಕಿ ಪ್ರಥಮವಾಗಿ ಸಣ್ಣ ನೀರಾವರಿ ಬೇಡಿಕೆಯ ವಿಚಾರದಲ್ಲಿ ಹೇಳುವುದಾದರೆ, ಮಾನ್ಯ ಮಂತ್ರಿಗಳಾದ ಚಂದ್ರೇಗೌಡರು ಅವರಿಗೆ ಇದ್ದಂತಹ ಸ್ವಲ್ಪ ಕಾಲವಲ್ಲಿಯೇ ಬಹಳ ಮಟ್ಟಿಗೆ ಎಕ್ಸ್‌ರ್ಸೈಜ್ ಮಾಡಿ ಈ ಒಂದು ಪುಸ್ತಕವನ್ನು ನಮಗೆಲ್ಲರಿಗೂ ಒದಗಿಸಿದ್ದಾರೆ. ಆದರೆ ಈ ಒಂದು ಬುಕ್‌ಲೆಟ್‌ನಲ್ಲಿ ಮೂರು ವಿಭಾಗಗಳನ್ನು ಮಾಡಿ ಕೊಟ್ಟಿರತಕ್ಕ ವರ್ಕ್ಸ್ ಪ್ರೋಗ್ರಾಂ ನೋಡಿದರೆ ಬಹಳ ಆತುರಾತುರದಲ್ಲಿ ಅವರು ಈ ಪಟ್ಟಿಗಳನ್ನು ಮಾಡಿದ್ದಾರೆ. ಈ ಫ್ರೆಷ್ ವರ್ಕ್ಸ್ ಎಂದು ಕೊಟ್ಟಿರುವುದರಲ್ಲಿ ನೂರು ಕೆಲಸಗಳನ್ನು ಇನ್‌ವೆಸ್ಟಿಗೇಷನ್ ಮಾಡಲಿಕ್ಕೆ ಆಗಿಲ್ಲ. ಈಗ ನಮ್ಮ ರಾಜ್ಯದಲ್ಲಿ ಮೈನರ್ ಇರಿಗೇಷನ್ ಇನ್ ವೆಸ್ಟಿಗೇಷನ್ ಸಿಬಂದಿ ಏನಿದೆ ಬಹುಶಃ ಅವರೆಲ್ಲರೂ ಕೂಡ ಸತತ ಪ್ರಯತ್ನಪಟ್ಟಿದ್ದೇ ಆದರೆ ಒಂದು ವರ್ಷ ಕಾಲ ಈ ಇನ್‌ವೆಸ್ಟಿಗೇ ಷನ್ ವರ್ಕ್ಸ್‌ಗೆ ಅವರ ಒಂದು ಕಾಲವನ್ನು ಹಿಡಿಯುತ್ತದೆ, ಈ ಕಾರಣದಿಂದ ಈ ಒಂದು ಕೆಲಸವನ್ನು ತ್ವರಿತವಾಗಿ ತೆಗೆದುಕೊಳ್ಳಬೇಕಾದರೆ ತನಿಖೆ ವಿಭಾಗದಲ್ಲಿ ಅಧಿಕಾರಿಗಳ ವರ್ಗ ಏನಿದೆ ಅದನ್ನು ಹೆಚ್ಚಿಸಬೇಕು ಎಂಬ ಸಲಹೆಯನ್ನು ಸನ್ಮಾನ್ಯ ಮಂತ್ರಿಗಳಿಗೆ ಕೊಡಲಿಕ್ಕೆ ಇಷ್ಟಪಡುತ್ತೇನೆ. ಇನ್ನು ನಮ್ಮ ಜಿಲ್ಲೆಯಲ್ಲಿ ೪೩ ಕೆಲಸಗಳನ್ನು ಸೇರಿಸಿದ್ದಾರೆ ಆದರಲ್ಲಿ ೧೬ ಹೊಸ ಕೆಲಸಗಳು. ಈಗ ನಮ್ಮಲ್ಲಿರತಕ್ಕ ಒಂದು ಡಿವಿಜನ್‌ನ್ನು ಎರಡು ಸಬ್ ಡಿವಿಜನ್‌ಗಳಾಗಿ ಮಾಡಬೇಕೆಂದು ಹೇಳಬಯಸುತ್ತೇನೆ, ಕಾರಣ ಏನೆಂದರೆ, ಸಬ್ ಇದರಲ್ಲಿ ಇರತಕ್ಕ ವರ್ಕ್ ಲೋಡನ್ನು ಗಣನೆಗೆ ತಗೆದುಕೊಂಡು ನೋಡುವುದಾದರೆ, ಇಡೀ ವರ್ಷ ರಾಜ್ಯದಲ್ಲಿರತಕ್ಕ ೧೬ ಪ್ರಾಜೆಕ್ಟ್‌ಗಳನ್ನೂ ಸರ್ವೆ ಮಾಡಿ ಅಂದಾಜುಗಳನ್ನು ತಯಾರಿಸುವುದರಲ್ಲೇ ಇವರ ಕಾಲವೆಲ್ಲಾ ಮುಗಿದು ಹೋಗುತ್ತದೆ. ಈ ಕಾರಣದಿಂದಾಗಿ ನಾನು ಕಳೆದ ೧೫ ದಿವಸಗಳ ಹಿಂದೆ ಮಾನ್ಯ ಮುಖ್ಯ ಮಂತ್ರಿಯವರನ್ನು ಕಂಡು ಈಗ ಮೈಸೂರು ವಿಭಾಗದಲ್ಲಿರತಕ್ಕ ಎಂ.ಐ.ಇ. ಡಿವಿಜನ್‌ನ್ನು ಎರಡು ಸಬ್ ಡಿವಿಜನ್‌ಗಳಾಗಿ ಮಾಡಬೇಕೆಂದು ಒಂದು ಪತ್ರವನ್ನು ಕೊಟ್ಟೆ. ನಂತರ ಈ ಪತ್ರವನ್ನು ನಾನು ಹಿಂಬಾಲಿಸಿ ಹೋಗಿ ನೋಡೋಣವೆಂದು ಹೋದರೆ ಮಾನ್ಯ ಮುಖ್ಯ ಮಂತ್ರಿಯವರು ಏನು ಆದೇಶವನು ಕೊಟ್ಟಿದ್ದರೋ ಆ ಪತ್ರವೇ ಪತ್ತೇ ಇಲ್ಲವಾಗಿದೆ. ಆದ್ದರಿಂದ ನಾನು ಹೇಳಿದಂತೆ ಈ ವಿಭಾಗದಲ್ಲಿ ೨ ಸಬ್ ಡಿವಿಜನ್‌ಗಳನ್ನು ಹೊಸದಾಗಿ ಕ್ರಿಯೇಟ್ ಮಾಡುವುದು ಸೂಕ್ತವೆಂದು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

ಇನ್ನು ಮೈನರ್ ಇರಿಗೇಷನ್ ವಿಚಾರದಲ್ಲಿ ಹೇಳುವುದಾದರೆ, ಎಲ್ಲೆಲ್ಲಿ ಈ ಮೈನರ್ ಇರಿಗೇಷನ್ ಆವಶ್ಯಕತೆ ಇದೆ, ಎಲ್ಲೆಲ್ಲಿ ಆದ್ಯತೆ ಕೊಡಬೇಕೆಂಬುದನ್ನು ಪರಿಶೀಲನೆ ಮಾಡಿ ಕೆಲಸ ತೆಗೆದುಕೊಳ್ಳುವುದು ಸೂಕ್ತವೆಂದು ಸಲಹೆ ಮಾಡಬಯಸುತ್ತೇನೆ. ಈ ವರ್ಷದ ಸಿ. ಲಿಸ್ಟ್‌ನಲ್ಲಿ ಮೈನರ್ ಇರಿಗೇಷನ್ ಕೆಲಸಗಳಿಗಾಗಿ ಬಡ್ಜೆಟ್ ಪ್ರಾವಿಷನ್‌ನಲ್ಲಿ ೧೦-೧೫-೨೦ ಸಾವಿರ ರೂಪಾಯಿಗಳನ್ನು ಒದಗಿಸಿದ್ದೀರಿ, ಅಲ್ಲಿಯ ಸ್ಥಳೀಯ ಎಕ್ಸಿಕ್ಯುಟಿವ್ ಇಂಜಿನಿಯರ್ ಹಾಗೂ ಅಸಿಸ್ಟೆಂಟ್ ಇಂಜಿನಿಯರ್‌ಗಳು ಟೆಂಡರ್‌ಗಳನ್ನು ಕರೆದು ಕೆಲಸಗಳನ್ನು ಯಾವ ರೀತಿ ತೆಗೆದುಕೊಳ್ಳಬಹುದೆಂಬ ಬಗ್ಗೆ ತಮ್ಮನ್ನು ಕೇಳಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡುವಾಗ ಹೇಳಬೇಕು.

ಇನ್ನು ತಾಲೂಕು ಬೋರ್ಡ್ ಮಂಡಲಿಗಳು ೧೦ ಎಕರೆ ಕೆಳಗಡೆ ಅಚ್ಚುಕಟ್ಟಿಗೆ ಬರತಕ್ಕ ಕಡೆಗಳಲ್ಲಿ ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ಒಂದೊಂದು ತಾಲ್ಲೂಕು ಬೋರ್ಡ್‌ಗೆ ಕೇವಲ ೬-೭ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಹಿಂದೆ ಒಂದು ಸಾರಿ ಮಾನ್ಯ ಮುಖ್ಯ ಮಂತ್ರಿಯವರು ಮಾತನಾಡುತ್ತಾ ತಾಲ್ಲೂಕು ಬೋರ್ಡ್‌ಗಳಿಗೆ ಎಷ್ಟು ಬೇಕಾದರೂ ಹಣವನ್ನು ಕೊಡುತ್ತೇವೆಂದು ಹೇಳಿದ್ದರು. ಆದರೆ ಅಷ್ಟು ಕೊಡುತ್ತಿಲ್ಲ. ಇವತ್ತು ತಾಲ್ಲೂಕು ಬೋರ್ಡ್‌ಗಳ ಕೈಯನ್ನು ಬಲಪಡಿಸಬೇಕಾಗಿದೆ. ೧೦ ಎಕರೆಗೆ ಕಡಿಮೆ ಇರತಕ್ಕ ಜಮೀನುಗಳಿಗೆ ನೀರನ್ನೊದಗಿಸಲು ಒಂದೊಂದು ತಾಲ್ಲೂಕ್ ಬೋರ್ಡ್‌ಗೆ ...ಷ್ಟು ಎಂದರೆ ೧ ಲಕ್ಷ ರೂಪಾಯಿಗಳನ್ನಾದರೂ ಒದಗಿಸಬೇಕು. ನಮ್ಮ ರಾಜ್ಯದಲ್ಲಿರತಕ್ಕ ೧೭೫ ...ಲ್ಲೂಕುಗಳಿಗೂ ತಲಾ ಒಂದು ಲಕ್ಷದಂತೆ ಲೆಕ್ಕ ಹಾಕಿದರೆ ಒಟ್ಟು ೨ ಕೋಟಿಗೂ ಕಡಿಮೆಯಾಗುತ್ತದೆ. ...ದ್ದರಿಂದ ಈ ವಿಚಾರದಲ್ಲಿ ಹೆಚ್ಚು ಹೇಳುವುದಕ್ಕೆ ಹೋಗದೆ ತಾಲ್ಲೂಕು ಬೋರ್ಡ್‌ಗಳಿಗೆ ಇನ್ನೂ ಹೆಚ್ಚು ...ವನ್ನೊದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಾಸ್ಟ್ ಪರ್ ಎಕರೆ ಏನಿದೆ ಇದರ ಬಗ್ಗೆ ಹೇಳುವುದಾದರೆ, ಸಣ್ಣ ಪುಟ್ಟ ಕೆರೆಗಳನ್ನು ಕಟ್ಟ...ಬೇಕಾದರೆ ಕಾಸ್ಟ್ ಪರ್ ಏಕರ್ ಜಾಸ್ತಿ ಮಾಡಬೇಕು. ಗುಜರಾತ್‌ನಲ್ಲಿ ಇರುವಂತೆ ನಮ್ಮ ರಾಜ್ಯದಲ್ಲೂ ಕೂಡ ಪರ್ಕುಲೇಷನ್ ಟ್ಯಾಂಕ್‌ಗಳನ್ನು ಕಟ್ಟುವುದಲ್ಲದೆ, ಎಲ್ಲಿ ತೂಬುಗಳನ್ನು ಇಡುವುದಕ್ಕಾಗುವುದಿಲ್ಲ ಅಂಥ ಕಡೆ ನೀರಾವರಿ ಬಾವಿಗಳನ್ನು ತೋಡಿ ಪಂಪ್‌ಸೆಟ್ ಹಾಕಿಸಿದರೆ ಸಣ್ಣ ಮತ್ತು ಅತಿ ಸಣ್ಣ ರೈತರು ಬೆಳೆಯನ್ನು ಬೆಳೆಯುವುದಕ್ಕೆ ಬಹಳ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಸಲಹೆ ಮಾಡಬಯಸುತ್ತೇನೆ.

ಇನ್ನು ದೊಡ್ಡ ನೀರಾವರಿ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಮೊದಲನೆಯದಾಗಿ ಮಾನ್ಯ ಮುಖ್ಯ ಮಂತ್ರಿಯವರನ್ನು ನಾನು ಅಭಿನಂದಿಸಬೇಕಾಗಿದೆ. ಏಕೆಂದರೆ, ದೊಡ್ಡ ನೀರಾವರಿ ಯೋಜನೆ ಬಗ್ಗೆ ಅವರಿಗಿರತಕ್ಕ ಶ್ರದ್ಧೆ, ನಿಷ್ಠೆ, ನಿಜವಾಗಿಯೂ ಮೆಚ್ಚತಕ್ಕದ್ದು. ಈ ಸಲದ ಪರ್‌ಫಾರ್ಮೆನ್ಸ್ ಬಡ್ಜೆಟ್‌ನಲ್ಲಿ ಸುಮಾರು ೫೦-೫೫ ಪ್ರಾಜೆಕ್ಟ್‌ಗಳಿಗೆ ಹಣವನ್ನು ಕೊಟ್ಟಿದ್ದಾರೆ. ಕಳೆದ ತಿಂಗಳಲ್ಲಿ ಮಾಡ್ರನೈಸೇಷನ್ ಆಫ್ ವಿ.ಸಿ. ಕೆನಾಲ್‌ಗೆ ಅಸ್ತಿಭಾರವನ್ನು ಹಾಕಿ ಬಂದಿದ್ದಾರೆ. ಆದರೆ ಇದರ ಬಗ್ಗೆ ಯಾವ ಅಂಕಿ ಅಂಶಗಳನ್ನೂ ಇಲ್ಲಿ ಕೊಟ್ಟಿಲ್ಲ. ಆದರೂ ಈ ಒಂದು ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡುವುದಕ್ಕೆ ಬೇಕಾದ ಸಿಬ್ಬಂದಿಯನ್ನು ಆದಷ್ಟು ಜಾಗ್ರತೆ ನೇಮಕ ಮಾಡಿ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹೇಮಾವತಿ ಯೋಜನೆ ಬಗ್ಗೆ ಒಂದು ಮಾತನ್ನು ಹೇಳುವುದಾದರೆ. ಮೈಸೂರು, ಮಂಡ್ಯ, ತುಮಕೂರು ಹಾಗೂ ಹಾಸನ ಈ ೪ ಜಿಲ್ಲೆಗಳ ೧೦ ತಾಲ್ಲೂಕುಗಳಲ್ಲಿ ೩ ಲಕ್ಷ ೬೫ ಸಾವಿರ ಎಕರೆ ಜಮೀನಿಗೆ ನೀರನ್ನೊದಗಿಸುವ ಯೋಜನೆ ಮಾಡಿದ್ದಾರೆ. ಮತ್ತು ೩೪ ಟಿ.ಎಂ.ಸಿ.ಎಫ್.ಟಿ. ನೀರನ್ನು ಶೇಖರಿಸುವುದಾಗಿ ಹೇಳಿದ್ದಾರೆ. ಈಗಿನ ಯೋಜನೆಯನ್ನು ಮೂಲ ಯೋಜನೆಯ ಜೊತೆಯಲ್ಲಿ ಹೋಲಿಸಿ ನೋಡಿದರೆ ಅನೇಕ ವ್ಯತ್ಯಾಸಗಳು ಕಂಡುಬರುತ್ತಿವೆ. ಆದ್ದರಿಂದ ನಾನು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಅಧಿವೇಶನ ಮುಗಿಯುವುದರೊಳಗೆ ಸಂಬಂಧಪಟ್ಟ ಎಲ್ಲ ಶಾಸಕರನ್ನೂ ಸಭೆ ಕರೆದು ವಿಚಾರ ವಿನಿಮಯ ಮಾಡಿ ನಮ್ಮಲ್ಲಿರತಕ್ಕ ಅನುಮಾನವನ್ನು ಪರಿಹಾರ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಪೋಲಿಸ್ ಅಂಡ್ ಫೈರ್ ಸರ್ವೀಸ್ ಸ್ಟೇಷನ್ ವಿಷಯದಲ್ಲಿ ಹೇಳುವುದಾದರೆ ಮಂಡ್ಯ ನಗರ ಜಿಲ್ಲಾ ಕೇಂದ್ರವಾಗಿದ್ದರೂ ಅಲ್ಲಿಗೆ ಇದುವರೆಗೂ ಒಂದು ಫೈರ್ ಸರ್ವೀಸ್ ಸ್ಟೇಷನ್ ಆಗಿಲ್ಲ. ಆದ್ದರಿಂದ ಇದನ್ನು ಆದಷ್ಟು ಬೇಗ ಅಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಪೋಲಿಸ್ ಇಲಾಖೆ ಬಗ್ಗೆ ಹೆಚ್ಚಿಗೆ

ಏನನ್ನೂ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಕಾರಣ ಏನೆಂದರೆ, ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಆದರೆ, ಇದರ ಬಗ್ಗೆ ಒಂದೇ ಒಂದು ಮಾತನ್ನು ಹೇಳಬಯಸುತ್ತೇನೆ. ಏನೆಂದರೆ, ಸಬ್ ಇನ್‌ಸ್ಪೆಕ್ಟರ್ ಮತ್ತು ಸರ್ಕಲ್ ಇನ್‌ಸ್ಪೆಕ್ಟರ್‌ಗಳ ಮಟ್ಟದಲ್ಲಿ ಬಹಳ ಸುಧಾರಣೆಯಾಗಬೇಕಾಗಿದೆ. ಇನ್ನು ಬೆರಳಚ್ಚು ಆಫೀಸ್ ಬೆಂಗಳೂರಿನಲ್ಲಿ ಏನಿದೆ, ಇದು ಏನೇನೂ ಕೆಲಸ ಮಾಡುತ್ತಿಲ್ಲವೆಂದು ನನಗನಿಸುತ್ತದೆ. ಏಕೆಂದರೆ ಕಳೆದ ೩-೪ ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕೆಲವು ಸೊಸೈಟಿಗಳಲ್ಲಿ ಬೇನಾಮಿ ಲೋನ್ ಟ್ರಾನ್ಸ್ಯಾಕ್ಷನ್ ಆಗಿದೆ. ಈ ವಿಷಯದಲ್ಲಿ ಸ್ಥಳೀಯ ಪೋಲಿಸ್ ಅಧಿಕಾರಿಗಳು ಇದುವರೆಗೂ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ಇವತ್ತು ನಾನು ಆ ಪೋಲಿಸ್ ಅಧಿಕಾರಿಗಳಿಗೆ ಫೋನ್ ಮಾಡಿ ಈ ವಿಷಯ ಪ್ರಸ್ತಾಪಿಸಿದಾಗ, ಸ್ವಾಮಿ, ನಮಗೆ ಬಹಳ ಕೆಲಸ ಇದೆ. ಯಾವುದೋ ಒಂದು ಮರ್ಡರ್ ಕೇಸ್ ಪತ್ತೆ ಹಚ್ಚಬೇಕಾಗಿದೆ, ಸಂಬಂಧಪಟ್ಟ ದಾಖಲಾತಿಗಳನ್ನು ಮದ್ರಾಸ್‌ಗೆ ಕಳುಹಿಸಿಕೊಡಬೇಕಾಗಿದೆ ಎಂದು ಆ ಅಧಿಕಾರಿಗಳು ಹೇಳಿದರು. ಇವತ್ತು ಏನಾಗಿದೆ ಎಂದರೆ ಬೇನಾಮಿ ಲೋನ್ ಟ್ರಾನ್ಸ್ಯಾಕ್ಷನ್ ದುಡ್ಡು ತಿಂದಿರುವವರು ಯಾರಿದ್ದಾರೆ ಅವರು ಬೇರೆ ರೂಪದಲ್ಲಿ ಈ ಪೋಲಿಸ್ ಅಧಿಕಾರಿಗಳ ಮೊರೆ ಹೋಗತಕ್ಕ ಪರಿಸ್ಥಿತಿ ಇದೆ. ಇದಕ್ಕೆ ತಾವು ಅವಕಾಶ ಕೊಡದೆ ಈ ಆಫೀಸಿನ ವಿಷಯದಲ್ಲಿ ತಮ್ಮ ಗಮನಹರಿಸಬೇಕೆಂದು ಹೇಳಬಯಸುತ್ತೇನೆ.

ಇನ್ನು ಗ್ರಾಮ ರಕ್ಷಕ ದಳದ (ವಿಲೇಜ್ ಡಿಫೆನ್ಸ್ ಫೋರ್ಸ್) ಬಗ್ಗೆ ಹೇಳುವುದಾದರೆ. ದಯವಿಟ್ಟು ತಾವು ಈ ಯೋಜನೆಯನ್ನು ಕೈ ಬಿಡುವುದು ಒಳ್ಳೆಯದೆಂದು ಹೇಳಬಯಸುತ್ತೇನೆ. ಈ ಗ್ರಾಮ ರಕ್ಷಕ ದಳಕ್ಕೆ ಅಭ್ಯರ್ಥಿಗಳ ಆಯ್ಕೆಗಾಗಿ ಅರ್ಜಿ ಫಾರಂಗಳನ್ನು ಪಡೆಯಲು ಮೊದಲನೇ ಹಂತದಲ್ಲೇ ಸಬ್ ಇನ್‌ಸ್ಪೆಕ್ಟರ್ ಮತ್ತು ಸರ್ಕಲ್ ಇನ್‌ಸ್ಪೆಕ್ಟರ್‌ಗಳಿಂದಲೇ ಲಂಚಾವತಾರ ಪ್ರಾರಂಭವಾಗುತ್ತದೆ. ಹಿಂದೆ ಪಾಳೇಗಾರರು ತಮಗೆ ಎದುರು ಬಿದ್ದವರನ್ನು ಯಾವ ರೀತಿ ಸದೆ ಬಡಿಯುತ್ತಿದ್ದರೋ ಅದೇ ರೀತಿ ಈ ಗ್ರಾಮ ರಕ್ಷಕ ದಳಕ್ಕೆ ನಾನು ದಳಪತಿಯಾಗಬೇಕು, ನಾನು ದಳಪತಿಯಾಗಬೇಕು ಎಂಬ ಪೈಪೋಟಿಯು ಬೆಳೆಯುತ್ತಿದೆ. ಬಹುಶಃ ದಳಪತಿಯಾಗಿ ರಾಜಕೀಯ ಎದುರಾಳಿಗಳನ್ನು ಸದೆ ಬಡಿಯಬೇಕು, ತನ್ನ ಶತ್ರುಗಳನ್ನು ಹತ್ತಿಕ್ಕಬೇಕೆಂಬ ಅಪೇಕ್ಷೆ ಇದ್ದೀತು ಎಂದು ನನಗನಿಸುತ್ತದೆ. ಗ್ರಾಮ ರಕ್ಷಕ ದಳದ ರಚನೆ ಉದ್ದೇಶ ಒಳ್ಳೆಯದೇ ಇದ್ದರೂ ಜನರಲ್ಲಿ ಇಂಥ ಅಭಿಪ್ರಾಯಗಳು ಬರುತ್ತಿರುವುದರಿಂದ ಈ ಯೋಜನೆಯನ್ನು ದಯವಿಟ್ಟು ತಾವು ಕೈ ಬಿಡುವುದು ಎಲ್ಲ ದೃಷ್ಟಿಯಿಂದಲೂ ಒಳ್ಳೆಯದೆಂದು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಟೀವ್ ವಿಷಯದಲ್ಲಿ ಹೇಳಬೇಕಾದ್ದು ಬಹಳಷ್ಟು ಇರುತ್ತದೆ. ಆದರೆ ಕಾಲಾವಕಾಶವಿಲ್ಲದಿರುವುದರಿಂದ ಒಂದೆರಡು ಸಲಹೆಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಡಿಸ್ಟ್ರಿಕ್ಟ್ ಮಟ್ಟದಲ್ಲಿ ಕೋ ಆರ್ಡಿನೇಷನ್ ಕಮಿಟಿ ಎಂದು ಇರುತ್ತದೆ. ಇದರಲ್ಲಿ ಕೇವಲ ಅಧಿಕಾರಿಗಳು ಮಾತ್ರ ಇರುತ್ತಾರೆ. ಆದ್ದರಿಂದ ಅವರ ಜೊತೆಗೆ ತಾಲ್ಲೂಕು ಬೋರ್ಡ್ ಅಧ್ಯಕ್ಷರನ್ನು ಸೇರಿದ ಹಾಗೆ ಶಾಸಕರನ್ನು ಸೇರಿಸಿದರೆ ಆಯಾ ತಾಲ್ಲೂಕು ಮಟ್ಟದಲ್ಲಿ. ಜಿಲ್ಲಾ ಮಟ್ಟದಲ್ಲಿ ಬರತಕ್ಕಂಥ ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಸಂಬಂಧಪಟ್ಟಂಥ ಕುಂದುಕೊರತೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಶಾಸಕರನ್ನು ತಾಲ್ಲೂಕ್ ಬೋರ್ಡ್ ಕೋ ಆರ್ಡಿನೇಷನ್ ಕಮಿಟಿಗೆ ಆಯ್ಕೆ ಮಾಡುವ ವ್ಯವಸ್ಥೆಯನ್ನು ದಯವಿಟ್ಟು ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಆರ್ ವಿ ಡಿ ಮತ್ತು ವಿ ಡಿ ಡೆವಲಪ್‌ಮೆಂಟ್ ವಿಷಯದಲ್ಲಿ ಹೇಳುವುದಾರೆ ಇದು ಬಹಳ ಮುಖ್ಯವಾದ ಒಂದು ಯೋಜನೆಯಾಗಿರುತ್ತದೆ. ನಮ್ಮ ಕಾವೇರಿ ಬೇಸಿನ್‌ಗೆ ಸಂಬಂಧಪಟ್ಟ ಹಾಗೆ ವಿವಿದ ಬಾಬುಗಳಿಗೆ ಏನು ಹಣವನ್ನು ಕೊಟ್ಟಿರುತ್ತಾರೆ ಅದು ಸಾಲದಾಗಿರುತ್ತದೆ, ಹೋದ ವರ್ಷ ಫೈನಾನ್ಸ್ ಕಮಿಷನರ್‌ರವರನ್ನು ಪ್ಲಾನಿಂಗ್‌ಗಾಗಿ ವೈಯಕ್ತಿಕವಾಗಿ ಬೋರ್ಡ್‌ನ ಮುಖಾಂತರ ಮನವಿ ಮಾಡಿಕೊಂಡಿದ್ದಕ್ಕೆ ೧೦ ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ಇರುತ್ತದೆ. ಕಾವೇರಿ ಬೇಸಿನ್‌ನಲ್ಲಿ ನಾಲ್ಕು ಪ್ರಾಜೆಕ್ಟ್‌ಗಳು ಬರುತ್ತವೆ. ಕೃಷ್ಣರಾಜಸಾಗರ, ಹಾರಂಗಿ, ಮತ್ತು ಕಬನಿ: ಇದಕ್ಕೆ ೧೨ ಲಕ್ಷ ರೂಪಾಯಿಗಳನ್ನು ಒದಗಿಸಿರುವುದು ಏನೇನು ಸಾಲದಾಗಿರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರಬಯಸುವುದೇನೆಂದರೆ ಕನಿಷ್ಟಪಕ್ಷ ಒಂದು ಪ್ರಾಜೆಕ್ಟ್‌ಗೆ ೧೨ ಲಕ್ಷ ರೂಪಾಯಿಗಳನ್ನಾದರೂ ಕೊಟ್ಟರೆ ಒಟ್ಟು ಕಾವೇರಿ ಬೇಸಿನ್ ೫೦ ಲಕ್ಷ ರೂಪಾಯಿಗಳಷ್ಟಾಗುತ್ತದೆ. ಇಷ್ಟನ್ನಾದರೂ ಒದಗಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಆಫ್‌ರ್‌ಮೇಷನ್ ಸ್ಕೀಮ್ ಎಂದು ಏನು ಮಾಡುತ್ತಿದ್ದೀರಿ ಇದು ಒಂದು ವರಪ್ರಸಾದವೆಂದು ಹೊಗಳಿದ್ದೀರಿ. ನಾನು ಕೂಡ ಅದನ್ನು ಒಪ್ಪುತ್ತೇನೆ. ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಈ ಒಂದು ಸ್ಕೀಮ್‌ನ್ನು ವಿಸ್ತರಿಸಲಿಕ್ಕೆ ಸಾಧ್ಯವಿರುತ್ತದೆ, ಎಲ್ಲೆಲ್ಲಿ ಅಗತ್ಯತೆ ಇದೆ, ಅಲ್ಲೆಲ್ಲ ಇದನ್ನು ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಫಿಷರೀಸ್ ಡೆವಲಪ್‌ಮೆಂಟ್ ಬಗ್ಗೆ ಹೇಳುವುದಾದರೆ ಇದು ಒಂದು ಬಹಳ ಅವಶ್ಯಕವಾದ ಉದ್ಯಮವಾಗಿರುತ್ತದೆ. ವಿಶ್ವೇಶ್ವರಯ್ಯ ಕೆನಾಲ್ ಡೆವಲಪ್‌ಮೆಂಟ್ ಎಂದು ಹೇಳಿ ಎಲ್ಲ ಕೆರೆಗಳಲ್ಲೂ ನೀರನ್ನು ರೆಸ್ಟೋರ್ ಮಾಡಿದ್ದೀರಿ. ಆ ಕೆರೆಗಳಲ್ಲಿ ಒಂದು ರೀತಿಯಾದ ಗಿಡಗಳು ಬೆಳೆದು ಕೊಂಡು ಬಹಳ ತೊಂದರೆಯಾಗಿರುತ್ತದೆ. ನಾನು ತಾಲ್ಲೂಕ್ ಬೋರ್ಡ್ ಅಧ್ಯಕ್ಷನಾಗಿದ್ದಾಗ ಫಿಷರೀಸ್ ಡಿಪಾರ್ಟ್‌ಮೆಂಟ್‌ನವರನ್ನು ಕರೆದುಕೊಂಡು ಬಂದು ತೋರಿಸಿಯೂ ಇದ್ದೇನೆ. ಅವರು ಅದರ ಬಗ್ಗೆ ರಿಸರ್ಚ್ ಕೂಡ ಮಾಡಿರುತ್ತಾರೆ. ಈ ಗಿಡಗಳನ್ನು ತೆಗೆದು ನೀರನ್ನು ಚೊಕ್ಕಟವಾಗಿಟ್ಟು ಫಿಷರೀಸ್ ಡೆವಲಪ್‌ಮೆಂಟ್‌ಗೆ ಒಳ್ಳೆಯ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಮತ್ತು ರಾಜ್ಯ ಸರ್ಕಾರದವರು ಈ ಉದ್ಯಮಕ್ಕೆ ಲೋನ್ ಕೊಡತಕ್ಕಂಥ ಅವಕಾಶವನ್ನೂ ಕೂಡ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಅನಿಮಲ್ ಹಸ್‌ಬೆಂಡ್ರಿ ಮತ್ತು ಡೈರಿ ಡೆವಲಪ್‌ಮೆಂಟ್ ವಿಷಯದಲ್ಲಿ ಹೇಳುವುದಾದರೆ ವೆಟರ್‌ನರಿ ಆಸ್ಪತ್ರೆಗಳು ತಾಲ್ಲೂಕುಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಏನು ಇರುತ್ತವೆ, ಇವುಗಳಿಗೆ ಒದಗಿಸತಕ್ಕಂಥ ಔಷಧಿಗಳು ಬಹಳ ಅಲ್ಪ ಪ್ರಮಾಣದಲ್ಲಿರುತ್ತದೆ. ಇದು ಸಾಲದೆ ಬರುವುದರಿಂದ ಸ್ವಲ್ಪ ಮಟ್ಟಿಗಾದರೂ ಕೂಡ ಇದನ್ನು ಜಾಸ್ತಿಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಇತ್ತೀಚೆಗೆ ಕಡೆ ದನಗಳಿಗೆ ಚಪ್ಪೆರೋಗವೆಂದು ಕಾಣಿಸಿಕೊಳ್ಳುತ್ತದೆ. ಇದು ವರ್ಷೇವರ್ಷೇ ಜಾಸ್ತಿಯಾಗುತ್ತಿರುತ್ತದೆ. ಈ ರೋಗವನ್ನು ತಡೆಗಟ್ಟಲು ಸಾಕಷ್ಟು ಪ್ರಮಾಣದಲ್ಲಿ ಔಷಧಿಗಳನ್ನು ಸಕಾಲದಲ್ಲಿ ಒದಗಿಸಿಕೊಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಆರ್ ಐ ಡಿ ಅಂದರೆ ಕೃತಕ ವೀರ್ಯದಂಥ ಸಾಧನೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುತ್ತಿಲ್ಲ. ತಾಲ್ಲೂಕು ಮಟ್ಟದಲ್ಲಿ ಜಿಲ್ಲಾಮಟ್ಟದಲ್ಲಿ ಈ ವ್ಯವಸ್ಥೆಯು ಅಸಮರ್ಪಕವಾಗಿರುತ್ತದೆ. ಆದ್ದರಿಂದ ಸಮರ್ಪಕವಾದ ರೀತಿಯಲ್ಲಿ ಇವುಗಳನ್ನು ಒದಗಿಸಿಕೊಡತಕ್ಕ ಬಗ್ಗೆ ಗಮನವನ್ನು ಹರಿಸಬೇಕೆಂದು ಸರ್ಕಾರಕ್ಕೆ ಸಲಹೆ ಕೊಡಬಯಸುತ್ತೇನೆ.

ಇನ್ನು ಡೈರಿ ಡೆವಲಪ್‌ಮೆಂಟ್ ಬಗ್ಗೆ ಹೇಳುವುದಾದರೆ ಮಂಡ್ಯ ತಾಲ್ಲೂಕಿನಲ್ಲಿ ಸುಮಾರು ೬೩ ಮಿಲ್ಕ್ ಕೋಆಪರೇಟೀವ್ ಸೊಸೈಟಿಗಳು ಇರುತ್ತವೆ. ಇವು ಬಹಳ ಚೆನ್ನಾಗಿ ಕೆಲಸ ಮಾಡುತ್ತಿರುತ್ತದೆ. ನಿಜವಾಗಿಯೂ ಇದು ಸಾಮಾನ್ಯ ಜನರಿಗೆ ಒಂದು ವರಪ್ರಸಾದವಾಗಿರುತ್ತದೆಂದು ಹೇಳಿದರೆ ತಪ್ಪಾಗಲಾರದು. ಈ ಯೋಜನೆ ಇಲ್ಲದಿದ್ದರೆ ಈವತ್ತಿನ ದಿವಸ ಬೆಲೆ ಅಧೋಗತಿಗೆ ಇಳಿಯುತ್ತಿತ್ತು. ಈ ಒಂದು ಯೋಜನೆ ಇರುವ ಕಾರಣದಿಂದ ಹಳ್ಳಿಗಾಡಿನಲ್ಲಿರತಕ್ಕಂಥ ಜನರ ಜೀವನ ನಡೆಯುವುದಕ್ಕೆ ಅನುಕೂಲವಾಗಿರುತ್ತದೆ. ಆದ್ದರಿಂದ ಈ ಯೋಜನೆಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಉತ್ತೇಜನವನ್ನು ಕೊಡಬೇಕೆಂದು ಹೇಳುತ್ತೇನೆ. ಮಂಡ್ಯದಲ್ಲಿ ಈಗಲೇ ಒಂದು ಚಿಲ್ಲಿಂಗ್ ಸೆಂಟರ್ ಇರುತ್ತದೆ. ಇದರ ಕ್ಯಾಪ್ಯಾಸಿಟಿ ನಾಲ್ಕುಸಾವಿರ ಲೀಟರ್‌ನದಾಗಿರುತ್ತದೆ. ಅದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದನ್ನು ೧೦ ಸಾವಿರ ಲೀಟರ್ ಕ್ಯಾಪ್ಯಾಸಿಟಿಗೆ ಏರಿಸಬೇಕೆಂದು ಸಂಬಂಧಪಟ್ಟವರೊಡನೆ ಮಾತನಾಡಿ, ತಾಂತ್ರಿಕ ತೊಂದರೆ ಏನಿದ್ದಾಗ್ಯೂ ಅದನ್ನು ಪರಿಹರಿಸಿ ಮಂಡ್ಯದಲ್ಲಿರತಕ್ಕಂಥ ಚಿಲ್ಲಿಂಗ್ ಸೆಂಟರ್‌ನ ಕ್ಯಾಪ್ಯಾಸಿಟಿಯನ್ನು ೧೦ ಸಾವಿರ ಲೀಟರ್‌ಗೆ ಏರಿಸಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕೊನೆಯದಾಗಿ ಮೈನ್ಸ್ ಅಂಡ್ ಜಿಯಾಲಜಿ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಇದರಲ್ಲಿ ಸರ್ಕಾರದವರು ಒಂದು ತಪ್ಪನ್ನು ಮಾಡಿರುತ್ತಾರೆ. ಅದೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಗ್ರಾನೈಟ್ ಅಂದರೆ ಬಂಡೆಗಳು ಎಂದು ಏನು ಹೇಳುತ್ತೇವೆ, ಅವುಗಳು ಪಂಚಾಯಿತಿಗಳ ಸುಪರ್ದಿನಲ್ಲಿ ಇದ್ದರೂಕೂಡ ಅವರಿಂದ ಏನು ಪ್ರಯೋಜನವಾಗುತ್ತಿಲ್ಲ. ಇದರಿಂದ ಸಾವಿರಾರು ರೂಪಾಯಿಗಳ ವರಮಾನ ಬರುವುದು ಇರುತ್ತದೆ. ಕಳೆದವರ್ಷ ಸರ್ಕಾರದವರು ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ಗೆ ಇವುಗಳನ್ನು ವರ್ಗಾವಣೆ ಮಾಡಿರುವುದರಿಂದ ಪಂಚಾಯಿತಿಗಳಿಗೆ ಬರತಕ್ಕಂಥ ವರಮಾನ ತಪ್ಪಿಹೋಗಿರುತ್ತದೆ. ಮಂಡ್ಯಾದ ಬೆಳಿಕೆರೆಯ ಸರಹದ್ದಿನಲ್ಲಿ ದಿಂಡು ಮತ್ತು ಜಲ್ಲಿಯನು ಹೊಡೆಯತಕ್ಕಂಥ ಕೆಲಸ ಡಿಪಾರ್ಟ್‌ಮೆಂಟ್‌ನ ವತಿಯಿಂದ ನಡೆಯುತ್ತಿದೆ. ಹಿಂದೆ ಯಾವ ರೀತಿ

ಪಂಚಾಯತಿಗಳಿಗೆ ಅವಕಾಶವಿತ್ತು, ಆದೇ ರೀತಿ ಇವುಗಳನ್ನು ಪಂಚಾಯತಿಗಳಿಗೆ ವಹಿಸಿಕೊಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಅಧ್ಯಕ್ಷರ ಮುಖಾಂತರ ತಮ್ಮ ಗಮನಕ್ಕೆ ತರುತ್ತಾ ಇಷ್ಟು ಹೊತ್ತು ಮಾತನಾಡಲು ಕಾಲಾವಕಾಶವನ್ನು ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಸವರಾಜ ಎಚ್. ಪಾಟೀಲ್ (ಹುಮ್ನಾಬಾದ್),—ಸನ್ಮಾನ್ಯ ಅಧ್ಯಕ್ಷರೆ ಈಗ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ತಂದಿರತಕ್ಕಂಥ ಎಲ್ಲ ಡಿಮ್ಯಾಂಡ್‌ಗಳ ಮೇಲೆ ನಾನು ವೈಯಕ್ತಿಕವಾಗಿ, ಮನಃ ಪೂರ್ವಕವಾಗಿ ಒಪ್ಪುತ್ತಾ, ಕೆಲವು ವಿಷಯಗಳ ಬಗ್ಗೆ ಕೆಲವು ಸಲಹೆಗಳನ್ನು ಕೊಡಲು ಇಚ್ಛೆಪಡುತ್ತೇನೆ.

ಸ್ವಾಮಿ ನಮ್ಮ ಭಾಗದಲ್ಲಿ ೧೦೦ ದಿನದ ಎಂಪ್ಲಾಯ್‌ಮೆಂಟ್ ಪ್ರೋಗ್ರಾಮ್ ಯೋಜನೆ ಎಂದು ಜಾರಿಗೆ ತಂದಿರುವುದು ಸರಿಯಷ್ಟೆ. ರಾಯಚೂರು ಜಿಲ್ಲೆ ಲಿಂಗಸಗೂರು ತಾಲ್ಲೂಕಿನಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಮಂಜೂರಾತಿಯನ್ನು ಪಡೆದು ಜಾರಿಗೊಳಿಸುವುದರಲ್ಲಿ ಈಗಾಗಲೇ ಒಂದು ತಿಂಗಳ ಕಾಲ ಸರಿದುಹೋಗಿರುತ್ತದೆ. ಈ ಕಾರ್ಯಕ್ರಮವನ್ನು ಜನರಿಗೆ ಪರಿಚಯ ಮಾಡುವುದಕ್ಕೆ ಕೆಲವು ಆಫೀಸರ್‌ಗಳಿಗೆ ಬಹಳ ತೊಂದರೆಯಾಯಿತು. ಏತಕ್ಕೆಂದರೆ ಕಾಲುಭಾಗ ಹಣ, ಉಳಿದದ್ದನ್ನು ಆಹಾರ ದಾನ್ಯಗಳ ರೂಪದಲ್ಲಿ ಕೊಡತಕ್ಕಂಥ ಒಂದು ವ್ಯವಸ್ಥೆ ಏನು ಇತ್ತು ಈ ಪರಿಪಾಠವನ್ನು ಅರ್ಥಮಾಡಿ ಕೊಳ್ಳದ ಜನ ಮುಂದೆ ಬರಲಿಲ್ಲ. ಇತ್ತೀಚೆಗೆ ಈ ಯೋಜನೆಯನ್ನು ಅರ್ಥಮಾಡಿಕೊಂಡು ಜನರು ಮುಂದೆ ಬರುತ್ತಿದ್ದಾರೆ.

ಮತ್ತೊಂದು ವಿಚಾರವೆಂದರೆ ನಮ್ಮ ಬಾಗದ ಜನರು ಜೋಳವನ್ನು ಊಟ ಮಾಡತಕ್ಕಂಥ ಜನರಿರುತ್ತಾರೆ. ಈ ಬಾಗದ ಜನರಿಗೆ ಗೋದಿಯನ್ನು ಮತ್ತು ಇತರ ಆಹಾರದಾನ್ಯಗಳನ್ನು ಸಪ್ಲೈ ಮಾಡುತ್ತಿರುವುದರಿಂದ ಅಷ್ಟಾಗಿ ಇವುಗಳನ್ನು ಕೊಳ್ಳಲು ಇಷ್ಟಪಡುತ್ತಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಆಯಾ ಬಾಗದ ಜನರು ಯಾವ ಆಹಾರ ಪದಾರ್ಥಗಳನ್ನು ಊಟಮಾಡುತ್ತಾರೋ ಅದನ್ನೇ ಒದಗಿಸತಕ್ಕಂಥ ಏರ್ಪಾಡನ್ನು ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

೫-೩೦ ಪಿ. ಎಂ.

ಎರಡನೆಯದಾಗಿ ನನ್ನ ಲಿಂಗಸಗೂರು ತಾಲ್ಲೂಕಿನಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ೧೪ ಗ್ರಾಮಗಳು ಮುಳುಗಡೆಯಾಗಿವೆ. ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ೭೦ ಸಾವಿರ ಎಕರೆ ನೀರಾವರಿಯಾಗುತ್ತದೆ. ಮತ್ತೆ ಕಾಲುವೆ ಮೂಲಕ ೮೮ ಸಾವಿರ ಎಕರೆ ನೀರಾವರಿಯಾಗುತ್ತದೆ. ಆದರೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಲಿಂಗಸಗೂರು ಜನತೆಯ ಪರವಾಗಿ ಕೇಳಿಕೊಳ್ಳುವುದು ಇಷ್ಟೆ, 'ಏತಾ ನೀರಾವರಿ ಎರಡನೆ ಹಂತದಲ್ಲಿ ತೆಗೆದುಕೊಳ್ಳುವ ದೃಡ ನಿರ್ದಾರವನ್ನು ತಾವು ಮಾಡಿದ್ದೀರಿ, ಅದಕ್ಕೆ ನಾನಾ ಕಾರಣಗಳಿವೆ ಎಂಬುದನ್ನೂ ಕೂಡ ಈಗಾಗಲೇ ನಮಗೆ ತಾವು ತಿಳಿಸಿದ್ದೀರಿ. ಆದರೆ ಜಮಖಂಡಿ ತಾಲ್ಲೂಕಿನಲ್ಲಿ ಏತಾ ನೀರಾವರಿಯನ್ನು ಎರಡನೇ ಹಂತದಲ್ಲಿ ತೆಗೆದುಕೊಳ್ಳಬೇಕೆಂದಿದ್ದುದನ್ನು ಮೊದಲನೇ ಹಂತದಲ್ಲೇ ಹೇಗೆ ಪ್ರಾರಂಭ ಮಾಡಿದ್ದೀರೋ ಅದೇ ರೀತಿಯಲ್ಲಿ ನಮ್ಮ ತಾಲ್ಲೂಕಿನಲ್ಲೂ ಕೂಡ ಏತಾ ನೀರಾವರಿಯನ್ನು ಎರಡನೇ ಹಂತದಲ್ಲಿ ತೆಗೆದುಕೊಳ್ಳುತ್ತೇವೆಂದು ತಾವು ತಿಳಿಸಿದ್ದರೂ ಅದನ್ನು ಪೂರ್ಣ ಮಾಡದಿದ್ದರೂ ಸಹ ಸ್ವಲ್ಪ ಅಂದರೆ ಹಂತ ಹಂತವಾಗಿ ಮಾಡಿಕೊಡಬೇಕೆಂದು ನನ್ನ ತಾಲ್ಲೂಕಿನ ಜನತೆಯ ಪರವಾಗಿ ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದರಿಂದ ನನ್ನ ತಾಲ್ಲೂಕಿನ ಹಿಂದುಳಿದ ವರ್ಗದ ಜನರಿಗೆ ಅನುಕೂಲವಾಗುತ್ತದೆ.

ಮುಳುಗಡೆಯಾದ ಕೆಲಸ ಗ್ರಾಮದ ಬಡ ಜನರು ಈಗಲೂ ನಿರ್ಗತಿಕರಾಗಿದ್ದಾರೆ. ಅವರಿಗೆ ಕೆಲಸ ಇಲ್ಲ. ಅಲ್ಲಿಯ ಜನರ ಮಕ್ಕಳಿಗೆ ಕೆಲಸವನ್ನು ಒದಗಿಸಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಮತ್ತೆ ಆ ಭಾಗದಲ್ಲಿ ಮುಳುಗಡೆಯಾದಂತಹ ಪ್ರದೇಶದಲ್ಲಿರುವ ಭೂಮಾಲೀಕರಿಗೆ ಒಂದೊಂದು ರೀತಿಯಲ್ಲಿ ಪರಿಹಾರ ಧನವನ್ನು ಕೊಟ್ಟಿದ್ದಾರೆ. ಒಂದು ಕಡೆ ೩ ಸಾವಿರ ರೂಪಾಯಿ ಒಂದು ಎಕರೆಗೆ ಪರಿಹಾರವನ್ನು ಕೊಟ್ಟಿದ್ದರೆ ಮತ್ತೊಂದು ೭ ಸಾವಿರ ಇನ್ನೊಂದು ಕಡೆ ೪ ಸಾವಿರ ರೂಪಾಯಿಗಳವರೆಗೂ

ಕೊಟ್ಟಿದ್ದಾರೆ. ಆದರೆ ನಮ್ಮ ಭಾಗದಲ್ಲಿ ಒಂದು ಎಕರೆಗೆ ೨ ಸಾವಿರ ರೂಪಾಯಿಗಳ ಮೇಲೆ ಯಾರಿಗೂ ಕೊಟ್ಟಿಲ್ಲ. ಆದ್ದರಿಂದ ನಮ್ಮ ಭಾಗದಲ್ಲೂ ಕೂಡ ಹೆಚ್ಚಿಗೆ ಪರಿಹಾರಧನವನ್ನು ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಸಣ್ಣ ನೀರಾವರಿ ಯೋಜನೆ ಬಗ್ಗೆ ಹೇಳುವುದಾದರೆ, ನನ್ನ ತಾಲ್ಲೂಕಿನಲ್ಲಿ ಜಿನುಗುಡ್ಡ, ಯರಗುಂಟೆ ಎಂಬಲ್ಲಿ ಎರಡು ಹೊಸ ಕೆರೆಗಳನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ನನ್ನ ತಾಲ್ಲೂಕಿನ ಜನತೆಯ ಪರವಾಗಿ ಮಾನ್ಯ ಮಂತ್ರಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಆದರೆ ಹೊಸದಾಗಿ ಕಟ್ಟುತ್ತಿರುವ ಈ ಎರಡು ಕೆರೆಗಳ ಕೆಲಸ ನಿಂತು ಹೋಗಿದೆ. ಕಾರಣವೇನೆಂದರೆ ಭೂಮಿಯನ್ನು ಕಳೆದು ಕೊಳ್ಳತಕ್ಕಂತಹವರಿಗೆ ೪೧ ಎ ಹಾಗೂ ೬೧ ಎ ಪ್ರಕಾರ ನೋಟೀಸ್ ಕೊಟ್ಟು ಅವರ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳಬೇಕಾಗುತ್ತದೆ. ಆ ರೀತಿ ಮಾಡುವುದಕ್ಕೆ ಅಧಿಕಾರಿಗಳೂ ತಡ ಮಾಡುತ್ತಿದ್ದಾರೆ. ಇದರಲ್ಲಿ ಸರ್ವೆ ಇಲಾಖೆಯವರಿಗೂ ಹಾಗೂ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೂ ಹೊಂದಾಣಿಕೆ ಇಲ್ಲ. ಅಕ್ವೈರ್ ಮಾಡಿಕೊಳ್ಳುವುದು ಒಂದು ಜಾಗ, ಅವರು ಸರ್ವೆ ನಂಬರನ್ನು ನಮೂದು ಮಾಡುವುದು ಮತ್ತೊಂದು ಜಾಗ. ಇದರಿಂದಾಗಿ ಯಾರ ಭೂಮಿ ಮುಳುಗಡೆಯಾಗಿದೆ ಅವರಿಗೆ ಪರಿಹಾರ ಧನ ಸಿಕ್ಕುತ್ತಿಲ್ಲ, ಯಾರ ಭೂಮಿ ಮುಳುಗಡೆಯಾಗಿಲ್ಲವೋ ಅವರಿಗೆ ಪರಿಹಾರ ಧನ ಸಿಕ್ಕಿದೆ. ಇದರಿಂದ ನಿಜವಾಗಿಯೂ ಭೂಮಿಯನ್ನು ಕಳೆದುಕೊಂಡ ರೈತರಿಗೆ ಬಹಳ ಅನ್ಯಾಯ ವಾಗುತ್ತಿದೆ. ಆದ್ದರಿಂದ ಸರ್ವೆ ಇಲಾಖೆಯ ಒಬ್ಬ ಅಧಿಕಾರಿಯನ್ನು ಪೂರ್ಣಾವಧಿಯಲ್ಲಿ ಲೋಕೋಪ ಯೋಗಿ ಇಲಾಖೆಗೆ ನೇಮಕ ಮಾಡತಕ್ಕದ್ದು ಯೋಗ್ಯ. ಇದರ ಜೊತೆಗೆ ಭೂಮಿ ಅಕ್ವೈರ್ ಬಹಳ ತಡವಾಗುತ್ತಿದೆ. ಕಾರಣ ಈ ಎಲ್ಲ ಕಾರ್ಯಕ್ರಮಗಳನ್ನು ಅಸಿಸ್ಟೆಂಟ್ ಕಮಿಷನರ್ ರವರೇ ಮಾಡ ಬೇಕಾಗಿದೆ. ಅದರು ಇದರ ಜೊತೆಗೆ ಬೇರೆ ಬೇರೆ ಕೆಲಸಗಳೂ ಇರುವುದರಿಂದ ಅಕ್ವಿಜಿಷನ್ ಬಹಳ ತಡವಾಗುತ್ತಿದೆ. ಇದರ ಬದಲಾಗಿ ಒಂದು ಜಿಲ್ಲೆಗೊಬ್ಬ ಹಾಗೂ ೨ ಜಿಲ್ಲೆಗೆ ಒಬ್ಬರಂತೆ ಪ್ರತ್ಯೇಕವಾಗಿ ಲ್ಯಾಂಡ್ ಅಕ್ವಿಜಿಷನ್ ಆಫೀಸರನ್ನು ನೇಮಕಮಾಡಿದರೆ ಕೆಲಸ ಶೀಘ್ರ ಗತಿಯಿಂದ ನಡೆಯುವುದಕ್ಕೆ ಅನುಕೂಲವಾಗುತ್ತದೆ ಎಂಬ ಸಲಹೆಯನ್ನು ಸರ್ಕಾರಕ್ಕೆ ಈ ಮೂಲಕ ಕೊಡುತ್ತಿದ್ದೇನೆ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು.

ಮತ್ತೆ ಡಿ. ಪಿ. ಎ. ಪಿ. ಕಾರ್ಯಕ್ರಮದ ಬಗ್ಗೆ ಸ್ಥಳೀಯ ಶಾಸಕರನ್ನು ಮೀಟಿಂಗ್‌ಗೆ ಕರೆಯು ತ್ತಿಲ್ಲ. ಇದರ ಬಗ್ಗೆ ಯಾವ ಭಾಗದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ, ಯಾವ ಅನುಕೂಲ ಕ್ಕಾಗಿ ಖರ್ಚು ಮಾಡುತ್ತಿದ್ದಾರೆಂಬ ಮಾಹಿತಿ ನಮಗೆ ದೊರೆಯುತ್ತಿಲ್ಲ ಇದರ ಬಗ್ಗೆ ನಾವು ಸಂಬಂಧಪಟ್ಟ ವರನ್ನು ಕೇಳಿದಕ್ಕೆ ಸ್ಥಳೀಯ ಶಾಸಕರನ್ನು ಮೀಟಿಂಗ್‌ಗೆ ಕರೆಯಬೇಕೆಂಬುದಾಗಿ ನಮಗೆ ಮೇಲಿಂದ ಆದೇಶ ವೇನೂ ಬಂದಿಲ್ಲ ಎಂಬುದಾಗಿ ಹೇಳುತ್ತಾರೆ. ಆದ್ದರಿಂದ ಸ್ಥಳೀಯ ಶಾಸಕರನ್ನು ಮೀಟಿಂಗ್‌ಗೆ ಕರೆಯು ವವಂತೆ, ಹಾಗೂ ವಿವರಗಳನ್ನು ಸ್ಥಳೀಯಶಾಸಕರಿಗೆ ಒದಗಿಸಿಕೊಡುವ ಏರ್ಪಾಡನ್ನು ಮಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಡಿ. ಪಿ. ಎ. ಪಿ. ಕಾರ್ಯ ಕ್ರಮದ ಅಂಗವಾಗಿ ಕುರಿಸಾಕಾಣಿಕೆ ಹಾಗೂ ಇನ್ನಿತರೇ ಕಾರ್ಯಕ್ರಮಗಳಿಗೆ ಸಾಲವನ್ನು ಕೊಡುವುದಕ್ಕೆ ರಾಷ್ಟ್ರೀಕೃತ ಬ್ಯಾಂಕುಗಳು ಮುಂದೆ ಬರುತ್ತಿಲ್ಲ. ಅವರಿಗೆ ಬೇಕಿದ್ದವರ ಗ್ಯಾರಂಟಿ ಕೊಟ್ಟರೆ ಸಾಲ ಕೊಡು ತ್ತಾರೆ ಇಲ್ಲದಿದ್ದರೆ ಕೊಡುವುದಿಲ್ಲ. ಬಡ ಜನ ಬ್ಯಾಂಕಿನ ಮ್ಯಾನೇಜರ್‌ರವರಿಗೆ ಬೇಕಿದ್ದವರನ್ನು ಜಾಮೀನು ಕೊಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ ? ಇದರಿಂದ ಸಾಕಷ್ಟು ಹಣ ಲ್ಯಾಪ್ಸ್ ಆಗುತ್ತಿದೆ. ಆದ್ದರಿಂದ ಈ ಬಗ್ಗೆ ಸರ್ಕಾರದ ಯಾವುದಾದರೂ ಒಂದು ದೃಢ ನಿರ್ಧಾರ ತೆಗೆದುಕೊಂಡು ಸಣ್ಣ ರೈತರಿಗೆ ಹಾಗೂ ಹಿಂದುಳಿದವರ್ಗದವರಿಗೆ ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲವನ್ನು ಕೊಡಿಸುವ ವ್ಯವಸ್ಥೆ ಮಾಡಿಕೊಡಬೇಕು. ಇದಕ್ಕೆ ಸೂಕ್ತ ಜಾಮೀನು ವ್ಯವಸ್ಥೆಯನ್ನೂ ಕೂಡ ಮಾಡಬೇಕು. ಇದರ ಬಗ್ಗೆ ನನ್ನ ತಾಲ್ಲೂಕಿನಲ್ಲಿ ಇರುವ ನಾಲ್ಕೈದು ಬ್ಯಾಂಕುಗಳ ಮ್ಯಾನೇಜರುಗಳನ್ನು ಕೇಳಿದಾಗ, ನಾವು ಈ ಹಿಂದೆ ಕೊಟ್ಟಿದಂತಹ ಹಣಕ್ಕೆ ಯಾರು ಜವಾಬ್ದಾರರು ಎನ್ನುವ ಪ್ರಶ್ನೆ ಬಂತು. ಆದ್ದರಿಂದ ಈ ಬಗ್ಗೆ ಸರ್ಕಾರದ ಯಾವು ದಾದರೂ ಒಂದು ನಿರ್ಣಯವನ್ನು ತೆಗೆದುಕೊಂಡು ರೈತರಿಗೆ ಸೂಕ್ತ ಜಾಮೀನು ವ್ಯವಸ್ಥೆ ಮಾಡಿ ಇದರಿಂದ ಸಣ್ಣ ರೈತರು ಹಾಗೂ ಹಿಂದುಳಿದವರ್ಗದವರು ಸಹಾಯವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಬೇಡಿಕೊಳ್ಳುತ್ತೇನೆ.

ಇನ್ನು ಪಿ. ಎಚ್. ಇ. ಇಲಾಖೆಯ ಬಗ್ಗೆ ಹೇಳುವುದಾದರೆ, ನಾವು ಶಾಸಕರಾಗುವುದಕ್ಕಿಂತ ಮೊದಲೆ ಕೊಳವೆ ಬಾವಿಗಳನ್ನು ತೋಡಿಸುವ ಸಲುವಾಗಿ ಒಂದು ಪಟ್ಟಿಯನ್ನು ಮಾಡಿಕೊಂಡಿದ್ದಾರೆ ಅವರು

ಪಟ್ಟಿಮಾಡಿಕೊಂಡಿರುವ ಭಾಗದಲ್ಲಿ ನೀರಿನ ವ್ಯವಸ್ಥೆ ಇದೆ ಎಂಬುದಾಗಿ ಹೇಳಿದರೂ ಕೂಡ ನಮ್ಮ ಮಾತನ್ನು ಕೇಳದೆ ಅವರು ಪಟ್ಟಿ ಮಾಡಿಕೊಂಡಿರುವ ಪ್ರಕಾರವೇ ಕೊಳವೆ ಬಾವಿಗಳನ್ನು ತೋಡುತ್ತಿದ್ದಾರೆ. ಕೆಲವು ಕಡೆ ನೀರಿನ ಅನುಕೂಲ ಇಲ್ಲದೇ ಬಹಳ ತೊಂದರೆ ಪಡುತ್ತಿದ್ದಾರೆ. ಆ ಭಾಗದಲ್ಲಿ ಬಾವಿಗಳನ್ನು ಹಾಕಿ ಎಂಬುದಾಗಿ ಹೇಳಿದರೆ ಅವರು ಕೇಳುವುದಿಲ್ಲ. ನಾನು ಈಗಾಗಲೇ ಒಂದು ಪಟ್ಟಿಯನ್ನು ಮಾಡಿಕೊಂಡಿದ್ದೇವೆ ಅದರ ಪ್ರಕಾರವೇ ಹಾಕಿಕೊಂಡು ಹೋಗುತ್ತೇವೆಂದು ಹೇಳುತ್ತಿದ್ದಾರೆ ಇದರ ವಿಚಾರವಾಗಿ ನಾನು ಜಿಲ್ಲಾಧಿಕಾರಿಗಳನ್ನು ಕೇಳಿದಾಗ, ಪಿ. ಎಚ್. ಇ. ಇಲಾಖೆಯವರಿಗೂ ನಮಗೂ ಹೊಂದಾಣಿಕೆ ಇಲ್ಲ ಎಂಬುದಾಗಿ ಅವರು ಹೇಳಿದರು. ಆದ್ದರಿಂದ ಜಿಲ್ಲಾಧಿಕಾರಿಗಳು ಯಾವ ಸ್ಥಳದಲ್ಲಿ ಕೊಳವೆ ಬಾವಿಗಳನ್ನು ಹಾಕಬೇಕೆಂದು ಹೇಳುತ್ತಾರೋ ಆ ಊರಿನಲ್ಲಿ ಕೊಳವೆ ಬಾವಿಗಳನ್ನು ಹಾಕುವುದಕ್ಕೆ ಸೂಕ್ತ ಆದೇಶವನ್ನು ಪಿ ಎಚ್.ಇ. ಇಲಾಖೆಯವರಿಗೆ ಕೊಡಬೇಕೆಂದು ಸಲಹೆಯನ್ನು ಕೊಡುತ್ತೇನೆ. ಇದರ ಜೊತೆಗೆ ನಮ್ಮ ಕಡೆ ೪೦ ಅಡಿಗಿಂತ ಕೆಳಗಡೆ ನೀರು ಬರುವುದಿಲ್ಲ ಎಂಬುದಾಗಿ ತಜ್ಞರೇ ಅಭಿಪ್ರಾಯಪಟ್ಟು, ಇಲ್ಲಿ ಓಪನ್ ವೆಲ್‌ನ್ನು ತೆಗೆಯುವುದೇ ಯೋಗ್ಯ ಎನ್ನತಕ್ಕಂತಹ ತೀರ್ಮಾನವನ್ನು ಅವರು ಕೊಟ್ಟಿದ್ದಾರೆ. ಆದ್ದರಿಂದ ನನ್ನ ಮತ ಕ್ಷೇತ್ರವಾದ ಲಿಂಗಸಗೂರು, ಕುಷ್ಟಗಿ, ಹಾಗೂ ಯಲಬುರ್ಗಿ ತಾಲ್ಲೂಕುಗಳಲ್ಲಿ ಓಪನ್ ವೆಲ್‌ನ್ನು ತೆಗೆಸತಕ್ಕಂತಹ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಹಕಾರಿ ಸಂಘಗಳ ವಿಚಾರವಾಗಿ ಹೇಳುವುದಾದರೆ, ರೈತರಿಗೆ ಸಹಕಾರಿ ಸಂಘಗಳು ಸಾಲವನ್ನು ಕೊಟ್ಟಿವೆ. ಆದರೆ ರೈತರಿಂದ ಸುಸ್ತಿ ಬಡ್ಡಿಯನ್ನು ವಸೂಲು ಮಾಡುತ್ತಿರುವುದರಿಂದ ರೈತರಿಗೆ ಬಹಳ ತೊಂದರೆಯಾಗಿದೆ ಈಗ ಮಾನ್ಯ ಮಂತ್ರಿಗಳು ರಿಕವರಿ ಚಾರ್ಜಸ್‌ನ್ನು ವಸೂಲಿ ಮಾಡಬಾರದೆಂಬುದಾಗಿ ಒಂದು ದೊಡ್ಡ ಸಾಧನೆಯನ್ನು ಮಾಡಿದ್ದಾರೆ. ಅದಕ್ಕಾಗಿ ಅವರನ್ನು ನಾನು ವಂದಿಸುತ್ತೇನೆ. ಇದರ ಜೊತೆಗೆ ಸಂಬಂಧಪಟ್ಟ ಮಂತ್ರಿಗಳಿಗೆ ನಾನು ನನ್ನ ವ್ಯಯುಕ್ತಿಕವಾಗಿ ಸಲಹೆ ಕೊಡುವುದೇನೆಂದರೆ. ಇಂತಿಷ್ಟು ಅವಧಿಯಲ್ಲಿ ಹಣವನ್ನು ಮರುಪಾವತಿ ಮಾಡಿದರೆ ಸುಸ್ತಿ ಬಡ್ಡಿಯನ್ನು ವಜಾ ಮಾಡುತ್ತೇವೆ ಎಂಬುದಾಗಿ ತಾವು ಆದೇಶವನ್ನು ಕೊಟ್ಟರೆ ಜನರು ಎಚ್ಚೆತ್ತುಕೊಂಡು ಸಾಲದ ಹಣವನ್ನು ಮರುಪಾವತಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಮತ್ತೆ ರಿಕವರಿ ಕೂಡ ಚೆನ್ನಾಗಿ ಆಗುತ್ತದೆ. ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೆ ನಮ್ಮ ರಾಯಚೂರಿನಲ್ಲಿ ಹತ್ತಿಯನ್ನು ಹೇರಳವಾಗಿ ಬೆಳೆಯುತ್ತಿದ್ದಾರೆ. ಅದರೆ ಇವತ್ತು ರೈತನ ಪರಿಸ್ಥಿತಿ ಕಣ್ಣೀರಿಡತಕ್ಕಂತಹ ಪರಿಸ್ಥಿತಿಯಲ್ಲಿದ್ದಾರೆ. ಕಾರಣ ಅವರಿಗೆ ಸರಿಯಾದ ಬೆಲೆ ಸಿಕ್ಕುತ್ತಿಲ್ಲ. ಇದರಿಂದ ಅಂಗಡಿ ಮಾಲೀಕರು ಹಾಗೂ ಕಮೀಷನ್ ಏಜಂಟರು ಇಬ್ಬರೂ ಸೇರಿಕೊಂಡು ರೈತನ ಸುಲಿಗೆಯನ್ನು ಮಾಡುತ್ತಿದ್ದಾರೆ. ಆದ್ದರಿಂದ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದ ಮುಖಾಂತರವಾಗಿ ಅಥವಾ ಇನ್ನಾವುದಾದರೂ ಕಾರ್ಪೊರೇಷನ್ ಮುಖಾಂತರವಾಗಿ ಹತ್ತಿ ಮಾಲನ್ನು ಕರೀದಿ ಮಾಡತಕ್ಕಂತಹ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು. ಇದರ ಬಗ್ಗೆ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದ ಅಧಿಕಾರಿಗಳು ನಮ್ಮಲ್ಲಿಗೆ ಬಂದಿದ್ದಾಗ ಅವರನ್ನು ಕೇಳಿದಕ್ಕೆ ಕರ್ನಾಟಕದಲ್ಲಿ ಬೆಳೆದಂತಹ ಹತ್ತಿಯನ್ನು ಕರೀದಿ ಮಾಡುವುದಕ್ಕೆ ಲಿಮಿಟ್ ಬಹಳ ಕಡಿಮೆ ಇದೆ ಎಂಬುದಾಗಿ ಹೇಳಿದರು. ಹಿಂದೆ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದ ಫೆಡರೇಷನ್ ಮುಖಾಂತರವಾಗಿ ಖರೀದಿ ಮಾಡುವುದಕ್ಕೆ ಏರ್ಪಾಟನ್ನು ಮಾಡಿದ್ದಾಗ ಪರಿಸ್ಥಿತಿ ಚನ್ನಾಗಿತ್ತು.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ತಾವು ತೀವ್ರಗತಿಯಲ್ಲಿ ಈ ಬಗ್ಗೆ ಒಂದು ನ್ಯಾಯವನ್ನು ದೊರಕಿಸಿ ಕೊಡಬೇಕು ಎಂದು ಹೇಳುತ್ತೇನೆ. ಈ ವಿಷಯವನ್ನು ಮಾರುಕಟ್ಟೆ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಇನ್ನೊಂದು ಚಿಂತಾಜನಕವಾದ ವಿಷಯ ಏನೆಂದರೆ ಬೆಂಕಿ ಪ್ರಕರಣ ಬಗ್ಗೆ ಹೇಳಬೇಕಾಗಿದೆ. ಅಕಸ್ಮಾತ್ ಆಗಿ ನಮ್ಮ ಕಡೆ ಬೆಂಕಿ ಪ್ರಕರಣ ಆದರೆ ಅದು ಬಹಳ ಚಿಂತಾಜನಕ ಪರಿಸ್ಥಿತಿಯಾಗುತ್ತದೆ ಏಕೆಂದರೆ ನಮ್ಮಲ್ಲಿ ಸಪ್ಪೋಟ್ ಕಾಟನ್ ಮಾರ್ಕೆಟ್ ಇಲ್ಲದ್ದೇ ಇರುವುದರಿಂದ ಬಹಳ ತೊಂದರೆಯಾಗಿದೆ. ಏನಾದರೂ ಈ ಕಾಟನ್ ಮಾರ್ಕೆಟ್‌ನಲ್ಲಿ ಅಕಸ್ಮಾತ್ ಆಗಿ ಬೆಂಕಿ ಪ್ರಕರಣ ಆದರೆ ಅದನ್ನು ಅಗ್ನಿಶಾಮಕ ದಳದವರೇ ಬಂದು ಆರಿಸುವ ಪರಿಸ್ಥಿತಿ ಇದೆ. ಆದುದರಿಂದ ನಾನು ಕೇಳುತ್ತೇನೆ ಈ ಮಾರ್ಕೆಟ್‌ನವರೇ

ಈ ಬಗ್ಗೆ ಒಂದು ಬೆಂಕಿ ಆರಿಸುವ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ಎಂದು. ನಿಮ್ಮ ಹತ್ತಿರ ವೆಹಿಕಲ್ ಮುಂತಾದ ವ್ಯವಸ್ಥೆಗಳು ಇರುವುದರಿಂದ ಇದನ್ನು ಯೋಚನೆ ಮಾಡಿ ಮಾಡಿಕೊಡಬೇಕು ಎಂದು ಹೇಳಿಕೊಳ್ಳುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ನಾನು ಸ್ವತಃ ವಕ್ಕಲಿಗನಾಗಿರುವುದರಿಂದ ಇದರ ಬಗ್ಗೆ ಒಂದೆರಡು ಸೂಕ್ಷ್ಮವಾದ ಸಲಹೆಗಳನ್ನು ಕೊಡುತ್ತೇನೆ. ಈ ವ್ಯವಸಾಯದ ಬಗ್ಗೆ ಹೇಳುವುದಾದರೆ ನಮ್ಮಲ್ಲಿರುವ ತಳಿಗಳು ಬಹಳ ಹಿಂದಿನದು. ಈಗ ಸಿ. ಹೆಚ್. ಎಸ್. ೫, ೮, ೩೫ ಇಂತಹ ಒಳ್ಳೆಯ ಬೀಜದ ತಳಿಗಳನ್ನು ಕಂಡುಹಿಡಿದಿದ್ದಾರೆ. ಇದು ಬಹಳ ಉತ್ತಮವಾಗಿ ಕಂಡುಬರುತ್ತಾ ಇದೆ. ಆದರೆ ಅದಕ್ಕೆ ಈಗ ಏನಾಗಿದೆ ಎಂದರೆ ಅನೇಕ ರೋಗ ರುಜಿನಗಳು ಬಂದು ಕಾಯಿಲೆಗೆ ತುತ್ತಾಗಿವೆ. ಆದುದರಿಂದ ಈಗ ಹೈಬ್ರೀಡ್ ಜವಾರ್ ಬಗ್ಗೆ ಏನೇನೂ ಹೊಸ ತಳಿಗಳನ್ನು ಕಂಡುಹಿಡಿದಿದ್ದಾರೆ. ಅದು ಸಾಕಾಗುವುದಿಲ್ಲ. ಆದುದರಿಂದ ಈ ಬಗ್ಗೆ ಇನ್ನೂ ಹೆಚ್ಚು ಹೆಚ್ಚು ಹೊಸ ತಳಿಗಳನ್ನು ಕಂಡು ಹಿಡಿದು ಮಾಡಿಕೊಡಬೇಕು ಎಂದು ಹೇಳುತ್ತೇನೆ

ಇನ್ನು ಪೋಲೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದೆರಡು ಮಾತುಗಳನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಇಲಾಖೆಯ ಬಗ್ಗೆ ನಮ್ಮ ಎದುರು ಗಡೆಯ ಮಿತ್ರರು ಏನು ಹೇಳಿದರು ಎಂದರೆ ಈ ಬಗ್ಗೆ ನಮ್ಮ ಹಳ್ಳಿಯಲ್ಲಿ ಒಂದು ಸಣ್ಣ ಮಾತನ್ನಾಡುವುದನ್ನು ಇಲ್ಲಿ ಹೇಳಬೇಕಾಗಿದೆ. ಅದೇನೆಂದರೆ 'ಓಣಿಗೆ ಬಾ' ನಾನು ನಿನ್ನನ್ನು ನೋಡಿಕೊಳ್ಳುತ್ತೇನೆಂದು. ಹಾಗೆಂದರೆ ಯಾರಾದರೂ ಕೂಡ ನಮ್ಮ ಹಳ್ಳಿಯಲ್ಲಿ ಜಗಳ ಆಡುತ್ತಾ ಇದ್ದಾರೆ ಅವನನ್ನು ನೀನು ನಮ್ಮ ಓಣಿಗೆ ಬಾ ನೋಡಿಕೊಳ್ಳುತ್ತೇನೆಂದು ಹೇಳುತ್ತಾನೆ. ಅವನು ಓಣಿಗೆ ಹೋದರೆ ನಮ್ಮ ಮನೆಗೆ ಬಾ ನೋಡಿಕೋಳ್ಳುತ್ತೇನೆ ಎಂದು ಹೇಳುತ್ತಾನೆ. ಮನೆಗೆ ಹೋದರೆ ನಮ್ಮ ದೇವರ ಮನೆಗೆ ಬಾ ನೋಡಿಕೊಳ್ಳುತ್ತೇನೆ ಎಂದು ಹೇಳುತ್ತಾನೆ. ನಂತರ ಅವನು ಮನೆಗೆ ಹೋದರೆ ನಮ್ಮ ತಂದೆ ಇಲ್ಲಾ ನಾಳೆ ಬಾ ಎಂದು ಹೇಳುತ್ತಾನೆ. ಸರಿಯಾಗಿ ಲೆಕ್ಕಾಚಾರದಲ್ಲಿರುವವರು, ನಿಶ್ಚಲ ಆಗಿರುವವರು ಇಂಥಾ ಮಾತನ್ನು ಹೇಳುವುದಿಲ್ಲಾ. ಅವನು ಈ ಮಾತನ್ನು ಏತಕ್ಕೆ ಹೇಳುತ್ತಾನೆ ಎಂದರೆ ತನ್ನ ಕೈಯಲ್ಲಿ ಆಗದೇ ಇದ್ದರೆ ಈ ರೀತಿ ಹೇಳುತ್ತಾನೆ. ಹೀಗೆ ಮಾನ್ಯ ಸದಸ್ಯರು ಮಾತನಾಡುವಾಗ ನಮ್ಮ ನಾಯಕರು ಯಾವುದಾದರೂ ಪ್ರಕರಣ ತಮಗೆ ಗೊತ್ತಿದೆಯೋ ಎಂದು ಕೇಳಿದರೆ ಗೊತ್ತಿಲ್ಲ ಎನ್ನತಕ್ಕ ಮಾತು ಶಾಸಕರ ಕಡೆಯಿಂದ ಬಹಳ ಬಂದಿದೆ. ಕಾರಣ ಇದಕ್ಕೆ ಇಷ್ಟು. ಯಾವುದಾದರೂ ಪ್ರಕರಣ ನಿರ್ದಿಷ್ಟವಾಗಿ ನಡೆದಿದ್ದರೆ ಅದನ್ನು ನಮ್ಮ ನಾಯಕರಿಗೆ ತಿಳಿಸಿದರೆ ಅದನ್ನು ಮಾಡುವುದಕ್ಕೆ ಹಿಂಜರಿಯುವುದಿಲ್ಲ. ಎಷ್ಟೋ ಶಾಸಕರು ಇಂಥಾ ಪ್ರಕರಣಗಳನ್ನು ಹೇಳಿ ನಮ್ಮ ಲೀಡರ್‌ರವರಿಂದ ಕೆಲಸಗಳನ್ನು ಮಾಡಿಸಿಕೊಂಡಿದ್ದಾರೆ. ಅವರು ಎಷ್ಟೋ ಕೆಲಸಗಳನ್ನು ಮಾಡಿ ಕೊಟ್ಟಿದ್ದಾರೆ. ನಾನು ಇನ್ನು ಹೆಚ್ಚು ಮಾತನಾಡುವುದಕ್ಕೆ ಸಮಯಾವಕಾಶ ಇಲ್ಲದೇ ಇರುವುದರಿಂದ ಇಷ್ಟು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† SRI QAMARUL ISLAM (Gulbarga).—Mr. Speaker, Sir, as the number of Demands are more, it is difficult for any Member to discuss on all the Demands placed before the House in the name of the Hon'ble Chief Minister. I will try to confine myself to the Demands relating to Police, Public Service Commission, Secretariat, Election, etc.

The Police force has to maintain law and order and safeguard the interests of the citizens against lawlessness. In this connection, I would like to refer to a meeting presided over by the Prime Minister Sri Morarji Desai with the Chief Ministers and different political party leaders regarding communal tension in the City and the communal riots taking place throughout the country. It was decided at that meeting that to put an end to the communal riots adequate representation should be given in the Police force to the

muslims and other minorities. That was the decision taken in that meeting. But Sir, in the Home Department of our Secretariat, right from the Commissioner down to the Peon, not a single muslim is there. The Hon'ble Chief Minister is the senior-most Member of this House. There was one Order in 1958 by the then Union Home Minister Sardar Vallabhai Patel that muslims should not be given key pos's and should not be taken in the Military, Home and Police Departments. Similarly there was one Circular in 1971 when Smt. Indira Gandhi was the Prime Minister, during the war of Bangla Desh, In 1965 when there was a war, some persons belonging to minority communities who were working in the Home Department were transferred. Is it because of the same confidential circular that minorities have not been given representation in the Home Department? Sir, our Hon'ble Chief Minister is the champion of minorities. In the Home Department of the Secretariat not a single muslim is there. There is no representation of muslims in other selection posts such as Directors, Chief Engineers, Inspector Generals of Police and in other Corporations. Of course, our Government has taken steps to give adequate representation in the lower cadres, and even on the Recruitment Committees. But as far as higher posts are concerned there is no representation of muslims. There is no muslim working as Secretary to Government. Previously there was one and he retired.

SRI D. DEVARAJ URS (Chief Minister).—What can I do? At present there are no muslims to be promoted as Secretaries to Government. Let the hon. member go and pass I.A.S. and come back!

SRI QAMARUL ISLAM.—Out of 2,600 I.A.S. officers in the country, there are 102 muslims. The Hon'ble Chief Minister can request the Central Government to post some muslims to our State. Recently, the Inspector General of Police has come from Andhra pradesh to Karnataka at the request of the Hon'ble Chief Minister.

SRI C. M. ARUMUGHAM.—The Inspector General of Police has not come from Andhra Pradesh. He is a native of this State and is the son of the soil. He worked here in several capacities, and he was in Andhra Pradesh on All-India service. He is one of the most efficient officers of our State as stated by our Chief Minister. There is nothing wrong in bringing him back to Karnataka.

SRI QAMARUL ISLAM.—There are 102 muslim I.A.S. officers in the country, and the Hon'ble Chief Minister can request the Central Government to post some of them to Karnataka.

SRI D. DEVARAJ URS.—Sir, it is not my choice. The I.A.S. officers are selected and posted to different services of diferent States

by the Central Government. I would request my hon. friend to influence the Central Government to send some half-a-dozen people, and I will have no objection to take them.

SRI QAMARUL ISLAM.—That fight is going on in the Centre.

Regarding recruitment of Police Constables and others, when all the Chief Ministers and leaders of different political parties have come to the conclusion that adequate representation should be given to minorities to maintain law and order and to put an end of communal riots, I expect the Hon'ble Chief Minister will take care of this.

I have gone through the statement of the Chairman of the Public Service Commission which envisages holding of examinations for the class I and Class II posts in Kannada I am proud of the Kannada language because I am born in Kannada-land, going to live in this land and die in this land, But is it fair to hold examinations in Kannada for the minorities especially the Muslims who have not been provided with the facilities in the educational institutions for learning Kannada language. This would result in helping the students who have passed the Kannada and it is these people who will be entering the services. The Muslims continue to remain outside the services. There are some Urdu medium schools and the Marati medium schools where the Kannada language is not taught to the pupils. I wish the Government had introduced Kannada as a compulsory subject in these schools so that the non-Kannada boys would have learnt Kannada and taken the PSC examination in Kannada. When our boys and girls are learning Hindu which is a national language why shou'd they be denied the opportunity of learning Kannada. At present Kannada is made an optional subject but it should be made as a compulsory subject from the first standard onwards. This would enable our younger gereration to learn Kannada and in course of time they will be able to take the PSC examination in the Kannada language, I request the Govornment to do the needful in this matter and thus help the minority boys and girls to learn Kannada.

Sir, at present Government has prescribed Kannada language examination in addition to the other prescribed tests for the government servants to earn increments and promotions. The officials appearing for the Kannada Examination, they get through the written examination but they fail miserably in the *viva voce* examination because at the examination centres they will be given a modi script to read. The officials belonging to the minority communities